ಮಾನವಿಕ ಕರ್ಣಾಟಕ

ಸಂಪುಟ ೧೩ ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೨

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೩ - ಸಂಚಿಕೆ ೧

೪೯

ನವಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೨

MANAVIKA KARNATAKA, Kannada quarterly of the University of Mysore, Volume 13, Number 1, November 1982. Edited by Dr. B. R. Gopal and Dr. C. M. Muniramappa.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧ ಜಿ. ಎಸ್. ಕುಂದರಗಿ	ರೀಡರ್, ತತ್ವಶಾಸ್ತ್ರವಿಭಾಗ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬
೨ ಬಿ. ಕೃಷ್ಣ	ಅಧ್ಯಾಪಕ, ತತ್ವಶಾಸ್ತ್ರವಿಭಾಗ, ಮಹಾರಾಜಾ ಕಾಲೇಜು, ಮೈಸೂರು-೫೭೦೦೦೫
೩ ಅಂಬಳಿಕೆ ಹಿರಿಯಣ್ಣ	ಅಧ್ಯಾಪಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦೦೦೬
೪ ಕೆ. ಎಸ್. ರಾಮಕೃಷ್ಣರಾವ್	ಪ್ರಾಧ್ಯಾಪಕ, ತತ್ವಶಾಸ್ತ್ರವಿಭಾಗ, ಮಹಾರಾಣಿ ಕಾಲೇಜು, ಮೈಸೂರು
೫ ಎಚ್. ಎಂ. ನಾಗರಾಜರಾವ್	ಶಾಸನ ಸಹಾಯಕ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦೦೦೬
೬ ಡಿ. ಎಲ್. ಪಾಟೀಲ	ಪ್ರಾಧ್ಯಾಪಕ, ತತ್ವಶಾಸ್ತ್ರವಿಭಾಗ, ಮಹಾರಾಜಾ ಕಾಲೇಜು, ಮೈಸೂರು-೫೭೦೦೦೫
೭ ಟಿ. ವಿ. ವೆಂಕಟಾಚಲಶಾಸ್ತ್ರೀ	ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦೦೦೬

ಜಿ. ಎಸ್. ಕುಂದರಗಿ

ಪುಟ್ಟಪ್ಪನವರ ಪಂಚಮಂತ್ರ ಮತ್ತು ಸಪ್ತಸೂತ್ರ-ಒಂದು ವಿಶ್ಲೇಷಣೆ

ಕಳೆದ ಮೇ ತಿಂಗಳಲ್ಲಿ ಮೈಸೂರಿಗೆ ಬಂದಾಗ ರಾಷ್ಟ್ರಕವಿ 'ಕುವೆಂಪು'ರವರನ್ನು ಕಂಡಿದ್ದೆ. ಅನೇಕ ವಿಷಯಗಳನ್ನು ಕುರಿತು ನಾವು ಮಾತನಾಡಿದೆವು. ನನ್ನ "Broad's Theoretical Approach to Ethics" ಮತ್ತು "ಧರ್ಮ ಮತ್ತು ಸಾಹಿತ್ಯ"ದ ಪ್ರತಿಗಳನ್ನು ನಾನು ಕಾಣಿಕೆಯಾಗಿ ಕೊಟ್ಟೆ. ಅದಕ್ಕೆ ಪ್ರತಿಯಾಗಿ ಅವರು ತಮ್ಮ ಇತ್ತೀಚಿನ "ಪಂಚಮಂತ್ರ ಮತ್ತು ಸಪ್ತಸೂತ್ರ"ವನ್ನು ಕೊಟ್ಟು "ಈ ವಿಷಯವಾಗಿ ನೀವು ವಿಚಾರಿಸಿರಿ" ಎಂದು ಹೇಳಿದರು. ಈಗ ಸಮಯ ದೊರೆತು ಅದನ್ನು ಓದಿ ಸ್ವಲ್ಪಮಟ್ಟಿಗೆ ವಿಚಾರಿಸಿದ್ದೇನೆ. ನನಗೆನಿಸಿದ ಕೆಲವು ಮಾತುಗಳನ್ನು ಕೆಳಗೆ ಬರೆಯುತ್ತಿದ್ದೇನೆ.

ಪುಸ್ತಕದ ಪ್ರಾರಂಭದಲ್ಲಿ ರಾಮಾಯಣ ದರ್ಶನದ 13 ನೇ ಸಂಪುಟದಿಂದ ಕೆಲವು ಸಾಲುಗಳನ್ನು ಉದ್ಧರಿಸಲಾಗಿದೆ. ಸ್ವಾಮಿ ವಿವೇಕಾನಂದರ ಒಂದು ಅವತರಣಿಕೆಯಿದೆ. ಪಂಚಮಂತ್ರ ಹಾಗೂ ಸಪ್ತಸೂತ್ರದ ಅಗತ್ಯತೆಯನ್ನು ಇಂದಿನ ಯುಗದಲ್ಲಿ ಹಾಗೂ ಸಮಾಜದಲ್ಲಿ ತೋರಿಸಿಕೊಟ್ಟು, ಅವುಗಳನ್ನು ವಿಸ್ತರಿಸಲಾಗಿದೆ. ವಿಶ್ವಮಾನವ ಭಾವವನ್ನೊಳಗೊಂಡ 'ಅನಿಕೇತನ' ಕವನವಿದೆ. ಇವೇ ಮಾತುಗಳನ್ನು ಇಂಗ್ಲೀಷಿನಲ್ಲಿ ತರಲಾಗಿದೆ. 'ಅನಿಕೇತನ' ಕವನವನ್ನು ಇಂಗ್ಲೀಷಿನಲ್ಲಿ "The Unhoused Consciousness" ಹೆಸರಿನಿಂದ ಪ್ರೊ. ವಿ. ಕೃ. ಗೋಕಾಕರು ರೂಪಾಂತರ ಮಾಡಿದ್ದಾರೆ. 'ಅನಿಕೇತನ' ಕವನದ ಹಿಂದೀ ಅನುವಾದವೂ ಇದೆ. ಕರ್ನಾಟಕ ರಾಜ್ಯೋದಯದ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರಿನವರು ಇದನ್ನು ಬೆಳಕಿಗೆ ತಂದಿದ್ದಾರೆ.

ಪುಟ್ಟಪ್ಪನವರ ದೃಷ್ಟಿಯಲ್ಲಿ ಮಗು ಹುಟ್ಟಿದಾಗಲೆ 'ವಿಶ್ವಮಾನವ'. ನಾವು ಭಾಷೆ, ದೇಶ, ಜಾತಿ, ಜನಾಂಗ ಈ ಉಪಾಧಿಗಳಿಂದ ಮಗುವನ್ನು ಸಂಕುಚಿತವನ್ನಾಗಿ

ಮಾಡುತ್ತೇವೆ. ಸೀಮಿತ ಮಗು ಪುನಃ 'ವಿಶ್ವಮಾನವ' ನಾಗುವುದು ವಿದ್ಯೆ, ಸಂಸ್ಕೃತಿ, ನಾಗರಿಕತೆಯ ಕರ್ತವ್ಯ.

ಮಾನವ ವಿಕಾಸದ ಹಾದಿಯಲ್ಲಿ ಕಾಲಕ್ಕೆ ತಕ್ಕಂತೆ ಮಹಾಪುರುಷರು ಆವಿರ್ಭವಿಸಿದ್ದಾರೆ. ಧರ್ಮಸಂಸ್ಥಾಪಕರು ಜನಿಸಿದ್ದಾರೆ. ಆದರೆ ಧರ್ಮದ ಸದುದ್ದೇಶ ಕಾಲಾಂತರದಲ್ಲಿ ಮಾಯವಾಗಿ ಮತಗಳಾಗಿ ಪರಿಣಮಿಸಿ ಜಗಳಗಳಿಗೆ, ದೊಂಬಿಗಳಿಗೆ ಮತ್ತು ಯುದ್ಧಗಳಿಗೆ ಮೂಲವಾಯ್ತು. 'ಮತ ಮತ್ತು ರಾಜಕೀಯದ ಕಾಲ ಹೋಗಿ ಅಧ್ಯಾತ್ಮ ಮತ್ತು ವಿಜ್ಞಾನದ ಕಾಲವಿಂದು ಬಂದಿದೆ'. ಈ ಸಂದರ್ಭದಲ್ಲಿ ಪಂಚಮಂತ್ರಗಳು ಮತ್ತು 'ಸಪ್ತಸೂತ್ರಗಳು' ನಮಗೆ ಆಗತ್ಯ. ಮನುಜ ಮತ, ವಿಶ್ವಪಥ, ಸರ್ವೋದಯ, ಸಮನ್ವಯ ಮತ್ತು ಪೂರ್ಣ ದೃಷ್ಟಿ ಇವೇ ಪಂಚಮಂತ್ರಗಳು. (೧) ಮನುಷ್ಯ ಜಾತಿ ಒಂದು (೨) ಮತಗಳಿಂದ ಹುಟ್ಟಿದ ವಿಭಜನೆ ನಶಿಸಬೇಕು. (೩) ಜಾತಿ ಪದ್ಧತಿ ಹೋಗಬೇಕು. (೪) ಮತ ತೊಲಗಿ ಅಧ್ಯಾತ್ಮ ಮಾತ್ರ ವೈಜ್ಞಾನಿಕ ಸತ್ಯವಾಗಬೇಕು. (೫) ಮತ ಮನುಜ ಮತವಾಗಬೇಕು. ಪಥ ವಿಶ್ವ ಪಥವಾಗಬೇಕು, ಮನುಷ್ಯ ವಿಶ್ವ ಮಾನವನಾಗಬೇಕು. (೬) ಪ್ರತಿಯೊಬ್ಬ ತನಗೆ ಒಪ್ಪಿದ ಮತಕ್ಕೆ ಸೇರಬೇಕು. (೭) ಒಂದೇ ಗ್ರಂಥ ಪರಮಪೂಜ್ಯವಾಗಬಾರದು. ಇವೇ ಸಪ್ತ ಸೂತ್ರಗಳು.

ಪಂಚಮಂತ್ರಗಳ ವಿವರಣೆ

(೧) ಮನುಜ ಮತ: ನಮಗೆ ಇಂದು ಬೇಕಾದದ್ದು ಆ ಮತ, ಈ ಮತ ಅಲ್ಲ. ಆದರೆ ಮಾನವರೆಲ್ಲ ಒಂದು ಎನ್ನುವ ಮನುಜ ಮತ. ನಮ್ಮೆಲ್ಲರ ದೇಹಗಳು ಬೇರೆಯಾಗಿದ್ದರೂ, ನಮ್ಮಲ್ಲಿರುವ ಆತ್ಮ ಒಂದು. (೨) ವಿಶ್ವಪಥ : ನಮ್ಮ ಪಥ ಅದು, ಇದು ಅಲ್ಲ. ಆದರೆ ಅದು ವಿಶ್ವಪಥ. ಸಂಕುಚಿತ ಹೋಗಿ, ವಿಶಾಲವಾದ ಹೆದ್ದಾರಿ ನಮ್ಮ ಪಥವಾಗಬೇಕು. (೩) ಸರ್ವೋದಯ : ನನ್ನ, ನನ್ನವರ ಉದಯ, ಉತ್ಕರ್ಷ ಮಾತ್ರವಲ್ಲ ; ಸರ್ವರ ಸರ್ವಸ್ತರದ ಉದಯ. ವಿಶ್ವವೇ ನಮ್ಮ ಕುಟುಂಬವಾಗಬೇಕು. (೪) ಸಮನ್ವಯ : ಪರಸ್ಪರ ವಿಮುಖವಾಗಿ ನಾವು ಸಿಡಿದು ಹೋಗಬಾರದು. ಆದರೆ ಸಮನ್ವಯಗೊಳ್ಳುವುದನ್ನು ಕಲಿಯಬೇಕು. ಕೂಡಿ ಬಾಳುವುದನ್ನು ನಾವು ಕಲಿಯಬೇಕು. (೫) ಪೂರ್ಣದೃಷ್ಟಿ : ನಮ್ಮ ದೃಷ್ಟಿ ಆಂಶಿಕವಾಗಬಾರದು. ಭೌತಿಕ ಹಾಗೂ ಪರಮಾರ್ಥಿಕ ದೃಷ್ಟಿಗಳು ಬೇರೆಬೇರೆಯೆಂದು ನಾವು ತಿಳಿಯಬಾರದು. ಅರವಿಂದರು, ರಾಮಕೃಷ್ಣರು ಉಸುರಿದಂತೆ ಎಲ್ಲವನ್ನೂ ಭಗವದ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ ನಮ್ಮದಾಗಬೇಕು.

ಸಪ್ತ ಸೂತ್ರಗಳ ವಿವೇಚನೆ

(೧) ಮನುಷ್ಯ ಜಾತಿ ಒಂದು : ನಮ್ಮ ನಮ್ಮ ದೇಶ, ಭಾಷೆ, ಧರ್ಮಗಳು ಬೇರೆ ಬೇರೆಯಾಗಿದ್ದರೂ ನಾವೆಲ್ಲ ಒಂದೇ ಮಾನವಕುಲಕ್ಕೆ ಸೇರಿದವರು. ನಮ್ಮ

ದೈಹಿಕ, ಮಾನಸಿಕ ಬೇಡಿಕೆಗಳು, ಆಶೆ ಆಕಾಂಕ್ಷೆಗಳು ನಿಜಕ್ಕೂ ಒಂದೇ ಆಗಿವೆ. (೨) ಮತಗಳಿಂದ ಹುಟ್ಟಿದ ವಿಭಜನೆ ನಿಲ್ಲಬೇಕು. ಬ್ರಾಹ್ಮಣ, ಕ್ಷತ್ರಿಯ, ಅಂತ್ಯಜ ಈ ಭೇದ ಅಳಿಯಬೇಕು. (೩) ಜಾತಿ ಪದ್ಧತಿ ಹೋಗಬೇಕು. ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿ ಇರುವ ಜಾತಿ ಪದ್ಧತಿ ಸಂಪೂರ್ಣವಾಗಿ ನಶಿಸಬೇಕು. (೪) ಮತ ತೊಲಗಿ ಅಧ್ಯಾತ್ಮ ಮಾತ್ರ ವೈಜ್ಞಾನಿಕ ಸತ್ಯವಾಗಬೇಕು. ಎಲ್ಲ ಮತಗಳಲ್ಲಿ ಅಡಕವಾಗಿರುವ ಅಧ್ಯಾತ್ಮ ಸತ್ಯ ಮೂಢ ನಂಬಿಕೆಯೆನಿಸದೆ ವೈಜ್ಞಾನಿಕ ಆಧಾರದ ಮೇಲೆ ನಿಲ್ಲಬೇಕು. (೫) ಮತ ಮನುಜ ಮತವಾಗಬೇಕು. ಪಥ ವಿಶ್ವ ಪಥವಾಗಬೇಕು. ಮನುಷ್ಯ ವಿಶ್ವಮಾನವನಾಗಬೇಕು. ಸಂಕುಚಿತತನವೆಲ್ಲ ದೂರವಾಗಬೇಕು. (೬) ಪ್ರತಿಯೊಬ್ಬ ತನಗೆ ಒಪ್ಪಿದ ಮತಕ್ಕೆ ಸೇರಬೇಕು. ಮತವು ಗುಂಪುಗಾರಿಕೆಯ ವಿಷಯವಾಗಬಾರದು. ಮತದ ವಿಷಯದಲ್ಲಿ ಸ್ವಾತಂತ್ರ್ಯವಿರಬೇಕು. ಜಗತ್ತಿನಲ್ಲಿ ವ್ಯಕ್ತಿಗಳಿದ್ದಷ್ಟು ಮತಗಳಿರಬಹುದು. ಮತಾಂತರಗೊಳ್ಳುವ ಅವಶ್ಯಕತೆಯಿಲ್ಲ. (೭) ಒಂದೇ ಗ್ರಂಥ ಪರಮಪೂಜ್ಯವಾಗಬಾರದು. ವ್ಯಕ್ತಿಗಳ ಸ್ವಭಾವ, ಯೋಗ್ಯತೆ ಭಿನ್ನ ಭಿನ್ನ. ಅವರವರ ಅಭಿರುಚಿ, ಸಾಮರ್ಥ್ಯಕ್ಕನುಗುಣವಾಗಿ ತಮ್ಮ ತಮ್ಮ ಧರ್ಮಗ್ರಂಥಗಳನ್ನು, 'ದರ್ಶನ'ವನ್ನು ತಾವೇ ನಿರ್ಣಯಿಸಿಕೊಳ್ಳಬಹುದು. ಗ್ರಂಥದ ಹೆಸರಿನಲ್ಲಿ ಜಗಳ ಬೇಡ.

ವಿಶ್ವದ ಸಕಲ ಮಾನವಜೀವಿಗಳಿಗೆ ಸರ್ವಕಾಲಕ್ಕೆ ಅನ್ವಯವಾಗುವಂತಹ ಮೌಲ್ಯಗಳು ಮೂಲ ಮೌಲ್ಯಗಳು. ಪುಟ್ಟಪ್ಪನವರ ಅಭಿಪ್ರಾಯದಲ್ಲಿ ಮೇಲೆ ಸೂಚಿಸಿದ ಪಂಚಮಂತ್ರಗಳು ಇಂತಹ ಮೌಲ್ಯಗಳು. ಮನುಷ್ಯರಲ್ಲಿಯ ಭಿನ್ನತೆಯನ್ನು ಅಳಿಸಿ ಅವು ಏಕತೆಯನ್ನು ಮೂಡಿಸುವುವು. ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಷ್ಟಿಯ ಕಲ್ಯಾಣ ಎರಡರಲ್ಲಿ ಸಾಮರಸ್ಯವನ್ನು ಹುಟ್ಟಿಸಿ ವ್ಯಕ್ತಿ ಸಮಷ್ಟಿಗಳ ವಿಕಾಸಕ್ಕೆ ಹಾದಿ ಮಾಡಿಕೊಡುವವು. ಇಂತಹ ಭಾವವನ್ನು ಒಳಗೊಂಡಿದೆ : 'ವಿಶ್ವಮಾನವ ಗೀತ'.

'ವಿಶ್ವಮಾನವ ಗೀತ' 'ಅನಿಕೇತನ'

ಈ ಕವನದಲ್ಲಿ ಕುವೆಂಪುರವರು ತಮ್ಮ ಚೇತನವನ್ನು ಸಂಬೋಧಿಸುವರು. 'ಓ ನನ್ನ ಚೇತನ, ಆಗು ನೀ ಅನಿಕೇತನ' ಎಂದು ಹೇಳುವರು. ನಾಮ–ರೂಪಗಳನ್ನು ಅದು ದಾಟಬೇಕು. ನೂರೆಂಟು ಮತಗಳ ಹೊಟ್ಟನ್ನು ಅದು ತೂರಬೇಕು. ವಿಶಿಷ್ಟವಾದ ತತ್ವ ಪದ್ಧತಿಗಳನ್ನು ಮೀರಬೇಕು. ನಿರ್ದಿಗಂತವಾಗಬೇಕು. ಸತ್ಯಶೋಧನೆಯಲ್ಲಿ ಅವಿರತವಾಗಿ ಸಾಗಬೇಕು. ಮಣ್ಣಿನ ಮನೆ ಕಟ್ಟಿ ಅದೇ ಕೊನೆಯದೆಂದು ತಿಳಿಯಬಾರದು. ಸತ್ಯಶೋಧನೆಗೆ ಕೊನೆಯೆಂಬುದಿಲ್ಲ. ಅದು ನಿರಂತರವಾದುದು.

ನಮ್ಮ ಅಂದಿನ ಸಂಭಾಷಣೆಯಲ್ಲಿ ಪುಟ್ಟಪ್ಪನವರು ಕೆಳಗಿನ ಮಾತುಗಳನ್ನು ಹೇಳಿದರು. "ಡಿ. ವಿ. ಗುಂಡಪ್ಪನವರು, ಮಾಸ್ತಿ ವೆಂಕಟೇಶಐಯ್ಯಂಗಾರರು, ದ. ರಾ. ಬೇಂದ್ರೆಯವರು, ಶಿವರಾಮ ಕಾರಂತರು ಕನ್ನಡ ಸಾಹಿತ್ಯಕ್ಕಷ್ಟೇ ಕಾಣಿಕೆಯನ್ನು

ಕೊಟ್ಟಿಲ್ಲ. ಅವರು ರಚಿಸಿದ ಸಾಹಿತ್ಯ ವಿಶ್ವ ಸಾಹಿತ್ಯಕ್ಕೇನೇ ಒಂದು ಕಾಣಿಕೆಯೆಂದು ಹೇಳಬಹುದು. ಆ ಗುಣ ಅವರ ಸಾಹಿತ್ಯ ಕೃತಿಗಳಲ್ಲಿದೆ". "ವಿ. ಕೃ. ಗೋಕಾಕರು ನನ್ನ 'ಅನಿಕೇತನ' ಕವನವನ್ನು ಇಂಗ್ಲೀಷಿನಲ್ಲಿ 'The Unhoused Consciousness' ಎಂಬ ಶೀರ್ಷಿಕೆಯಲ್ಲಿ ತುಂಬಾ ಚೆನ್ನಾಗಿ ಭಾಷಾಂತರ ಮಾಡಿದ್ದಾರೆ"ಯೆಂದೂ ಹೇಳಿದರು. ಈ ಮಾತುಗಳು ಅವರ ಹೃದಯ ವೈಶಾಲ್ಯಕ್ಕೆ ಸಾಕ್ಷಿಯೆಂದು ನಾನು ತಿಳಿಯುತ್ತೇನೆ.

ರಾಮಕೃಷ್ಣ ಪರಮಹಂಸರು ಸಕಲ ಧರ್ಮಗಳಲ್ಲಿ ಏಕತೆಯನ್ನು ಕಂಡರು. ತಮ್ಮ ಜೀವನದಲ್ಲಿ ಅನುಭವಿಸಿದರು. ಮಂದಿರಕ್ಕೆ, ಮಸೀದಿಗೆ, ಚರ್ಚ್‌ಗೆ ಹೋಗಿ ಏಕಸತ್ಯವನ್ನು ಕಂಡು ಅನುಭವಿಸಿದರು. ವಿವೇಕಾನಂದರು 'ಸರ್ವಧರ್ಮ ಸಮನ್ವಯ ಮಂತ್ರವನ್ನು' ದೇಶ ವಿದೇಶಗಳಲ್ಲಿ ಹೋಗಿ ಮೊಳಗಿದರು. ಈ ದಾರಿಯಲ್ಲಿ ತಮ್ಮ ಜೀವನವನ್ನು ನಡೆಸಿದ ಪುಟ್ಟಪ್ಪನವರು 'ಪಂಚಮಂತ್ರ' ಮತ್ತು ಸಪ್ತ ಸೂತ್ರಗಳನ್ನು ನಮ್ಮೆದುರು ಇಟ್ಟಿದ್ದಾರೆ. ನಾವೆಲ್ಲ ಅವುಗಳನ್ನು ಕುರಿತು ಚಿಂತಿಸಬೇಕು. ಅನುಷ್ಠಾನದಲ್ಲಿ ತರಬೇಕು.

ಧರ್ಮದ ಮೂಲ ಉದ್ದೇಶ ಏಕತೆ. ಧಾರಯತಿ ಇತಿ ಆಹುಃ ಧರ್ಮಃ. ಕಾಲಾಂತರದಲ್ಲಿ ಧರ್ಮ ಮತವಾಗಿ ವಿಭಜನೆಗೆ ಕಾರಣವಾದದ್ದು ದುರದೃಷ್ಟ. ಈ ಅರ್ಥದಲ್ಲಿ The Religion unites, the creed divides ಎಂಬ ಮಾತು ಸತ್ಯ.

ಮನುವಿನ ಕಾಲದಲ್ಲಿ ಸಮಾಜ ರಚನೆ ಸರಳವಾಗಿತ್ತು. ಜನರ ಅಭಿರುಚಿ ಹಾಗೂ ಯೋಗ್ಯತೆಯ ಮೇರೆಗೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಸಮಾಜ ರಚನೆ ಬಳಕೆಗೆ ಬಂತು. ಕಾಲಕ್ರಮದಲ್ಲಿ ಈ ವಿಭಾಗ ಹುಟ್ಟಿನ ಮೇಲೆ ಆಧಾರವಾಗಿ ಸಮಾಜವನ್ನು ಗೊಂದಲಕ್ಕೀಡುಮಾಡಿತು. ಮಹಾತ್ಮಾ ಗಾಂಧೀಜಿಯವರು ಅಸ್ಪೃಶ್ಯತಾ ನಿವಾರಣೆಗೆ ತಮ್ಮ ಆಯುಷ್ಯವನ್ನೇ ಸವೆಯಿಸಬೇಕಾಯಿತು. ಇಂದಿನ ಸಮಾಜ ರಚನೆ ತುಂಬ ಸಂಕೀರ್ಣವಾದದ್ದು. ಜನರ ಅಭಿರುಚಿಗಳೂ, ಶಕ್ತಿಗಳೂ ನಾನಾ ಮುಖವಾಗಿ ಹೆಚ್ಚಿವೆ. ಇಂದಿನ ಸಂದರ್ಭಕ್ಕೆ ಮನುವಿನ ಸರಳ ವಿಭಾಗ—ವರ್ಣಾಶ್ರಮ ಅಷ್ಟು ಹೊಂದಿಕೆಯಾಗಲಿಕ್ಕಿಲ್ಲ.

ಇಂದಿನ ಯುಗ ಸ್ವಾತಂತ್ರ್ಯ ಮತ್ತು ಸಮಾನತೆಯ ಯುಗ. ಯಾವದೇ ಒಂದು ಮತವಾಗಲೀ, ಒಂದೇ ಧರ್ಮಗ್ರಂಥವಾಗಲಿ ಪರಮಪೂಜ್ಯವೆನಿಸುವದು ಅಸಾಧ್ಯ. ತನ್ನ ಒಲವು, ಶಕ್ತಿಗನುಸಾರವಾಗಿ ತನ್ನ ಧರ್ಮವನ್ನು ಅಥವಾ ಮತವನ್ನು ವ್ಯಕ್ತಿಯು ಆಯ್ದುಕೊಳ್ಳಬಹುದು. ತನ್ನ ಧರ್ಮಗ್ರಂಥವನ್ನೂ ಪಠಿಸಬಹುದು. ಆದರೆ ಇತರ ಧರ್ಮಗಳ–ಮತಗಳ–ಧರ್ಮಗ್ರಂಥಗಳ ವಿಷಯಗಳಲ್ಲಿ ಆದರ, ತಾಳ್ಮೆ ಇರಬೇಕಾದುದು ಅವಶ್ಯ. ಏಕೆಂದರೆ ಇಂದಿನ ಗುರಿ ಸರ್ವಧರ್ಮ ಸಮನ್ವಯ.

ಆಧ್ಯಾತ್ಮ ಮೂಢನಂಬಿಕೆಯಲ್ಲ. ವೈಜ್ಞಾನಿಕ ಪದ್ಧತಿಯ ಮೇರೆಗೆ ಸರ್ವ ಕಾಲಕ್ಕೆ ಸರ್ವರಿಗೆ ಅನ್ವಯಿಸುವಂತಹದು. ಆಂತರಿಕ ಆಳದಿಂದ, ಸ್ವಯಂಸ್ಫೂರ್ತಿಯಿಂದ ಬಂದಂತಹದು.

ಮಗು ಹುಟ್ಟಿದಾಗ ಸರಳವಾಗಿರುತ್ತದೆ. ಪೂರ್ವಗ್ರಹಿತ ದೋಷಗಳಿಂದ ದೂರವಾಗಿರುತ್ತದೆ. ಆದರೆ ಕಾಲಕ್ರಮದಲ್ಲಿ ಅದು ತಂದೆತಾಯಿಗಳಿಂದ, ಸುತ್ತಣ ಪರಿಸರದಿಂದ, ಶಾಲೆಕಾಲೇಜುಗಳಿಂದ, ಗುರುಗಳಿಂದ ಪ್ರಭಾವಿತವಾಗುತ್ತದೆ. ವಿಶಿಷ್ಟಸ್ಥಲದ ಕಾಲದ, ಭಾಷೆ, ಸಂಸ್ಕೃತಿಗಳ ಪ್ರಭಾವ ಅದರ ಮೇಲಾಗುತ್ತದೆ. ಈ ದೇಶ, ಕಾಲ, ಭಾಷೆ, ಸಂಸ್ಕೃತಿಗಳು ಉದಾರವಾದಷ್ಟೂ, ಸಮೃದ್ಧವಾದಷ್ಟೂ, ವಿಶಾಲವಾದಷ್ಟೂ, ಮಗು ಉದಾರವಾಗುತ್ತದೆ. ಸಮೃದ್ಧವಾಗುತ್ತದೆ. ವಿಶಾಲವಾಗುತ್ತದೆ. ಈ ದೃಷ್ಟಿಯಲ್ಲಿ ನಮಗೆ ಬೇಕಾದದ್ದು ಸಮನ್ವಯ, ಪೂರ್ಣ ದೃಷ್ಟಿ. ನಾವು ಅನುಸರಿಸಬೇಕಾದ ಪಥ ವಿಶ್ವ ಪಥ, ನಮ್ಮ ಮತ ಮನುಜ ಮತ, ನಮ್ಮ ಗುರಿ ‘ ವಿಶ್ವಮಾನವ ’.

ಅನಿಕೇತನ

ಓ ನನ್ನ ಚೇತನ,
ಆಗು ನೀ ಅನಿಕೇತನ !

ರೂಪರೂಪಗಳನು ದಾಟಿ,
ನಾಮಕೋಟಿಗಳನು ಮೀಟಿ,
ಎದೆಯ ಬಿರಿಯೆ ಭಾವದೀಟಿ,

ಓ ನನ್ನ ಚೇತನ,
ಆಗು ನೀ ಅನಿಕೇತನ !

ನೂರು ಮತದ ಹೊಟ್ಟತೂರಿ,
ಎಲ್ಲ ತತ್ತ್ವದೆಲ್ಲೆಮೀರಿ,
ನಿರ್ದಿಗಂತವಾಗಿ ಏರಿ,

ಓ ನನ್ನ ಚೇತನ,
ಆಗು ನೀ ಅನಿಕೇತನ !

ಎಲ್ಲಿಯೂ ನಿಲ್ಲದಿರು ;
ಮನೆಯನೆಂದೂ ಕಟ್ಟದಿರು ;
ಕೊನೆಯನೆಂದೂ ಮುಟ್ಟದಿರು ;

ಓ ಅನಂತವಾಗಿರು !
ಓ ನನ್ನ ಚೇತನ,
ಆಗು ನೀ ಅನಿಕೇತನ !

ಅನಂತ ತಾನ್ ಅನಂತವಾಗಿ
ಆಗುತಿಹನೆ ನಿತ್ಯಯೋಗಿ ;
ಅನಂತ ನೀ ಅನಂತವಾಗು :
ಆಗು, ಆಗು, ಆಗು, ಆಗು,

ಓ ನನ್ನ ಚೇತನ,
ಆಗು ನೀ ಅನಿಕೇತನ !

[ಕುವೆಂಪು : ಅನಿಕೇತನ, ೧೯೬೩, ಪುಟ ೬೦-೬೧]

ಬಿ. ಕೃಷ್ಣ

ಬೆಂಜಾಮಿನ್ ಜೋವೆಟ್ ಮತ್ತು ಪ್ಲೇಟೋವಿನ ಸಂವಾದಗಳ ಭಾಷಾಂತರ

I ಪೀಠಿಕೆ

ಭಾಷಾಂತರದ ಚರಿತ್ರೆಯನ್ನು ಅವಲೋಕಿಸುವಾಗ ನಮಗೆ ಮೊದಲು ಕಾಣಿಸುವುದು ಗ್ರೀಕ್‌ನ ಸಾಹಿತ್ಯ ಮತ್ತು ದರ್ಶನ ಗ್ರಂಥಗಳು ಇತರ ಭಾಷೆಗಳಿಗೆ ಭಾಷಾಂತರಗೊಂಡ ವಿಚಾರ. ಇದಕ್ಕೆ ಕಾರಣ, ಪಾಶ್ಚಿಮಾತ್ಯ ರಾಷ್ಟ್ರಗಳ ಚಿಂತನೆಯ ಗತಿಯನ್ನು ಗ್ರೀಕ್ ಸಂಸ್ಕೃತಿ ಆಕರ್ಷಿಸಿದಷ್ಟು ಬೇರಾವುದೂ ಆಕರ್ಷಿಸಲಿಲ್ಲ. ಗ್ರೀಕಿನ ಸಾಹಿತ್ಯ ಕ್ಷೇತ್ರದಲ್ಲೂ ದರ್ಶನಗಳು ಜಗತ್ತಿನ ಮೇಲೆ ಬಹಳ ಪ್ರಭಾವ ಬೀರಿವೆ. ಇಂತಹ ಪ್ರಭಾವದ ಪ್ರಸರಣ ಕಾರ್ಯ ನಡೆಯಲು ಸಾಧನವಾದದ್ದು "ಭಾಷಾಂತರ". ಹೀಗಾಗಿ, ಗ್ರೀಕ್ ಸಂಸ್ಕೃತಿಯ ಸಾಹಿತ್ಯ ಮತ್ತು ದರ್ಶನಗಳು ಕಾಲಕಾಲಕ್ಕೆ ರೋಮನ್ ಭಾಷೆಗೆ, ಲ್ಯಾಟಿನ್ ಭಾಷೆಗೆ, ಪರ್ಷಿಯನ್ ಭಾಷೆಗೆ ಭಾಷಾಂತರಗೊಂಡವು. ನಂತರವೂ ಜರ್ಮನ್, ಫ್ರೆಂಚ್ ಮತ್ತಿತರ ಭಾಷೆಗಳಿಗೂ ಆದವು. ಇಂಗ್ಲಿಷ್ ಭಾಷೆಯು ಅಂತರ ರಾಷ್ಟ್ರೀಯ ಭಾಷೆಯಾಗಿರುವುದರಿಂದ ಈ ಭಾಷೆಗೆ ಭಾಷಾಂತರಗೊಂಡ ಗ್ರೀಕ್ ಸಾಹಿತ್ಯ-ದರ್ಶನಗಳು ಕಾಲಕ್ರಮದಲ್ಲಿ ಪ್ರಪಂಚಕ್ಕೆಲ್ಲಾ ಪರಿಚಯವಾಗುವ ದೂರ ದೃಷ್ಟಿಯಿಂದ, ಗ್ರೀಕ್ ಸಂಸ್ಕೃತಿಯ ತಿರುಳು ಭಾಷಾಂತರದ ಮೂಲಕ ಇಂಗ್ಲಿಷಿಗೆ ಬಂದಿತು.

ಪ್ರಸ್ತುತ ಲೇಖನದಲ್ಲಿ, ಇಂಗ್ಲಿಷ್ ಪಂಡಿತನಾದ ಬೆಂಜಾಮಿನ್ ಜೋವೆಟ್‌ನು ಭಾಷಾಂತರಿಸಿದ ಪ್ಲೇಟೋವಿನ ಸಂವಾದಗಳನ್ನು ಕುರಿತು ವಿಷಯ ನಿರೂಪಣೆಯಿದೆ. ಇಲ್ಲಿನ ವಿಷಯಗಳು :

1) ಪ್ಲೇಟೋ ಮತ್ತು ಅವನ ಸಂವಾದಗಳು
2) ಭಾಷಾಂತರಗೊಂಡಿರುವ ಪ್ಲೇಟೋವಿನ ಸಂವಾದಗಳು
3) ಬಿ. ಜೋವೆಟ್ ಮತ್ತು ಅವನು ಮಾಡಿದ ಭಾಷಾಂತರ ಕಾರ್ಯ
4) ಭಾಷಾಂತರ ಹೇಗಿರಬೇಕು – ಬಿ. ಜೋವೆಟ್‌ನ ಅಭಿಪ್ರಾಯಗಳು

II ಪ್ಲೇಟೊ ಮತ್ತು ಅವನ ಸಂವಾದಗಳು

ಜೀವನ :

ಗ್ರೀಕ್ ದೇಶದ ಅಥೆನ್ಸ್ ನಗರದಲ್ಲಿ, ಕ್ರಿ.ಪೂ. 428–427ರಲ್ಲಿ, ಪ್ಲೇಟೋ ಜನಿಸಿದನು. ಅವನ ವಿದ್ಯಾಗುರುವಾದ ಸಾಕ್ರೆಟೀಸನು ಕ್ರಿ.ಪೂ. 399ರಲ್ಲಿ ಸತ್ತ ನಂತರ ಗ್ರೀಸ್, ಈಜಿಪ್ಟ್ ಮತ್ತು ಇಟಲಿಗಳಲ್ಲಿ ಯಾತ್ರೆ ಮಾಡಿದನು. ಸುಮಾರು ಕ್ರಿ.ಪೂ. 387ರ ಹೊತ್ತಿಗೆ ಅಥೆನ್ಸಿಗೆ ಹಿಂದಿರುಗಿ "ಅಕಾಡೆಮಿ" ಎಂಬ ವಿಶ್ವಪ್ರಸಿದ್ಧ ವಿದ್ಯಾಸಂಸ್ಥೆಯನ್ನು ಸ್ಥಾಪಿಸಿದನು. ತನ್ನ ಗುರುವಿನ ಮತ್ತು ತನ್ನ ತತ್ತ್ವಗಳನ್ನು ಜನತೆಗೆ ಬೋಧಿಸುತ್ತಾ, ಅವುಗಳನ್ನು ಗ್ರಂಥಗಳಾಗಿ ಬರೆಯುತ್ತಾ, ತನ್ನ ಉಳಿದ ಜೀವಿತವನ್ನು ಅಲ್ಲೇ ಕಳೆದನು. ಕ್ರಿ. ಪೂ. 348–347ರಲ್ಲಿ ಮರಣ ಹೊಂದಿದನು.

ಪ್ಲೇಟೋ ಒಬ್ಬ ಕವಿ ಮತ್ತು ಅನುಭಾವಿ ಆಗಿದ್ದನು. ನಿಷ್ಠಾವಂತ ತತ್ತ್ವಜ್ಞಾನಿ ಮತ್ತು ಚತುರ ಮಾತುಗಾರನೂ ಆಗಿದ್ದನು. ಅವನು ತರ್ಕವಿಶ್ಲೇಷಣೆ ಮತ್ತು ಸೂಕ್ಷ್ಮ ಆಲೋಚನೆಯ ಮಹತ್ ಶಕ್ತಿಗಳನ್ನು ಕಾವ್ಯದ ಕಲ್ಪನೆ ಮತ್ತು ಯೋಗಿಕ ಅನುಭಾವಗಳೊಡನೆ ಅಪೂರ್ವ ರೀತಿಯಲ್ಲಿ ಒಂದುಗೂಡಿಸುತ್ತಿದ್ದನು. ಅವನ ವ್ಯಕ್ತಿತ್ವ ಉದಾತ್ತವಾಗಿತ್ತು. ಹುಟ್ಟಿನಿಂದ ಶ್ರೀಮಂತ; ಮನೋಭಾವನೆಯಲ್ಲಿ ಎಂದೂ ಸೋಲೊಪ್ಪದ ಆದರ್ಶವಾದಿ; ಅನೀತಿ ಮತ್ತು ಅನ್ಯವಹಾರಗಳ ದ್ವೇಷಿಯಾಗಿದ್ದನು.

ಬರೆಹಗಳು :

ಪ್ಲೇಟೋವಿನ ಹೆಸರಿನಲ್ಲಿ ನಮಗೆ 35– ಸಂವಾದಗಳು, 13–ಪತ್ರಗಳು ದೊರೆತಿವೆ. ಸರ್ ಡೇವಿಡ್ ರಾಸ್‌ರವರ ಪ್ರಕಾರ ಈ ಕೃತಿಗಳು ಕ್ರಮವಾಗಿ ಮೂರು ಕಾಲಗಳಲ್ಲಿ ಬರೆಯಲ್ಪಟ್ಟಿವೆ:

1) ಕ್ರಿ. ಪೂ. 389–388 ರಲ್ಲಿ ಬರೆದ ಕೃತಿಗಳು : ಛಾರ್‌ಮೈಡಿಸ್, ಲಾಚಸ್, ಎಂತಿ ಫ್ರೊ, ಹಿಪಿಯಾಸ್, ಮೇಜರ್ ಮತ್ತು ಮೇನೊ

2) ಕ್ರಿ. ಪೂ. 389–388 ಮತ್ತು 367–366 ರ ನಡುವೆ ಬರೆದ ಕೃತಿಗಳು : ಕ್ರಾಟಿಲಸ್, ಸಿಂಪೋಸಿಯಂ, ಫೇಡೋ, ರಿಪಬ್ಲಿಕ್, ಫೇಡ್ರಸ್, ಪಾರ್ಮೆನೈಡಿಸ್, ಥಿಯೊಟೆಟಸ್.

3) ಕ್ರಿ. ಪೂ. 367–366 ಮತ್ತು 367–360 ರ ನಡುವೆ ಬರೆದ ಕೃತಿಗಳು : ಸೋಫಿಸ್ಟ್ ಮತ್ತು ಪಾಲಿಟಿಕ್ಸ್

4) ಕ್ರಿ. ಪೂ. 361–360 ರ ನಂತರ ಬರೆದ ಕೃತಿಗಳು : ಥಿಮಾಇಸ್, ಕ್ರಿಟಿಯಾಸ್, ಫಿಲಿಬಸ್, ಸೆವೆನ್ತ್ ಲೆಟರ್, ಲಾಸ್, ಥಿಯರಿ ಆಫ್ ಐಡಿಯಾಸ್, ಅಪೋಲಜಿ, ಕ್ರಿಟೋ, ಲೈಸಿಸ್, ಪ್ರೊಟಾಗೊರಾಸ್, ಗೊರ್ಗಿಯಾಸ್ ಮತ್ತು ಯುಥಿಡಿಮಸ್.

III ಭಾಷಾಂತರಗೊಂಡಿರುವ ಪ್ಲೇಟೋವಿನ ಸಂವಾದಗಳು

ಈ ಕೆಳಗೆ ಸೂಚಿಸಿರುವ ಕೃತಿಗಳು ಗ್ರೀಕಿನಿಂದ ಇಂಗ್ಲೀಷಿಗೆ ಭಾಷಾಂತರವಾಗಿವೆ.

1) The Dialogues of Plato, trans. by B. Jowett, 3rd ed. 5 Vols., 1892.
2) Thirteen Epistles, trans. by L.A. Post., 1925
3) The Dialogues of Plato, trans. by B. Jowett, with an Introduction by R. Domos, 2 Vols., 1937.
4) Plato, Tinaeus and Critias. trans. by A.E. Taylor 1929, The Laues of Plato, 1934.
5) The Platonic Epistles, trans by J. Howard, 1932
6) Plato and Parmenides, trans by, F.M. Cornford, 1939.
7) Studies in the Platonic Epistles, trans, by G. R. Morrow, 1935.
8) Plato's Examination of Pleasure, a Translation of the Philebux–by R. Hackfarth, 1945.
9) Republic, trans. by F.M. Cornford, 1942.
10) Plato's Statesman, trans. by F.B. Skemys, 1952.
11) Plato's Phaedo, trans. by R. S. Bluck, 1955.

* * *

ಪ್ರೊ. ಎ. ಡೈಯಿಸ್ ಎಂಬುವರು ಪ್ಲೇಟೋವಿನ ಅನೇಕ ಸಂವಾದಗಳನ್ನು ಗ್ರೀಕ್‌ನಿಂದ ಫ್ರೆಂಚ್‌ಗೆ ಭಾಷಾಂತರಿಸಿರುವರು. ಪ್ರೊ. ಬ್ರೂನೆಟ್ ಎಂಬುವರು ಜರ್ಮನ್ ಭಾಷೆಗೆ ಅನುವಾದಿಸಿರುವರು.

ಪ್ಲೇಟೋವಿನ ಸಂವಾದಗಳನ್ನು ಗ್ರೀಕ್‌ನಿಂದ ಇಂಗ್ಲಿಷ್‌ಗೆ ಭಾಷಾಂತರಿಸಿದವರಲ್ಲಿ ಬಿ. ಜೋವೆಟ್ ಮತ್ತು ಎ. ಇ. ಟೆಯಿಲರ್‌ರವರು ಅಗ್ರಗಣ್ಯರು. ಜೋವೆಟ್‌ರವರ ಬಗ್ಗೆ ಮುಂದೆ ವಿವರವಾಗಿ ತಿಳಿದುಕೊಳ್ಳುತ್ತೇವೆಯಾದ್ದರಿಂದ ಟೆಯಿಲರ್‌ರವರ ಭಾಷಾಂತರದ ಬಗ್ಗೆ ಎರಡು ಮಾತನ್ನು ಈಗಲೇ ತಿಳಿಸುವುದು ಸೂಕ್ತವೆಂದು ಕಾಣುತ್ತದೆ.

ಪ್ಲೇಟೋವಿನ ಸಂವಾದಗಳನ್ನು ಇಂಗ್ಲೀಷಿಗೆ ಭಾಷಾಂತರ ಮಾಡುವ ಉದ್ದೇಶದ ಬಗ್ಗೆ ಟೆಯಿಲರ್‌ರವರ ಅಭಿಪ್ರಾಯ ಹೀಗಿದೆ : ಭಾಷಾಂತರಿಸಬೇಕೆಂಬ ಮನಸ್ಸು ಸಹಜವಾಗಿ ಬಂತು. ಇದಕ್ಕೆ ಕಾರಣ ಎರಡು. (೧) ಗ್ರೀಕ್ ತತ್ತ್ವಜ್ಞಾನವನ್ನು ತಿಳಿದುಕೊಳ್ಳಬೇಕೆಂಬ ಮನೋಭಾವವುಳ್ಳ, ಇಂಗ್ಲಿಷ್ ಭಾಷೆಯನ್ನು ಮಾತ್ರ ಬಲ್ಲ ವಿದ್ಯಾರ್ಥಿಗಳಿಗೆ ಸಹಾಯವಾಗಲೆಂದು ; (೨) ಗ್ರೀಕ್ ತತ್ತ್ವಶಾಸ್ತ್ರವನ್ನು ಸ್ವತಃ ಪರಿಚಯ ಮಾಡಿಕೊಳ್ಳಬೇಕೆಂದಿರುವವರಿಗೆ ಒಂದು ಸಹಾಯಕ ಸಾಧನವಾಗಲೆಂದು.

ಟೆಯಿಲರನು ತನ್ನ ಜೀವಿತದ ಬಹಳ ಕಾಲವನ್ನು ಈ ಕೆಳಕಂಡ ಕೃತಿಗಳ ಭಾಷಾಂತರ ಮತ್ತು ಪ್ರಕಟನಕಾರ್ಯದಲ್ಲಿಯೇ ಕಳೆದನು.

Timaces ಮತ್ತು Critias ಕೃತಿಗಳನ್ನು 1929 ರಲ್ಲೂ Parmenides ಮತ್ತು The Laws ಕೃತಿಗಳನ್ನು 1934ರಲ್ಲೂ ಭಾಷಾಂತರಿಸಿ ಪ್ರಕಟಿಸಿದನು. ಪ್ಲೇಟೋವಿನ ಉಳಿದ ಸಂವಾದಗಳನ್ನು ಭಾಷಾಂತರಿಸಿರುವುದು ಕಂಡು ಬಂದಿದೆ. ಆದರೆ ಅವುಗಳು ಪ್ರಕಟನೆಗೊಂಡ ಕಾಲ ಪ್ರಸ್ತುತ ಲೇಖಕನಿಗೆ ಸಿಗಲಿಲ್ಲ.

ತನ್ನ ಭಾಷಾಂತರದ ಬಗ್ಗೆ ಟೆಯಿಲರನು ಸ್ವತಃ ಕೊಡುವ ಅಭಿಪ್ರಾಯವು ಇತರ ಭಾಷಾಂತರಕಾರರೆಲ್ಲರು ಚಿಂತನೆ ಮಾಡುವಂತೆ ಕಂಡುಬರುತ್ತದೆ. "I cannot, of course, hope to have avoided all errors, but I have done my best to exercise an independent judgement about the text and interpretation of every sentence. In a very few cases where the genuine text of Plato appears to me to have been corrupted in transmission beyond the probabality of confident restoration, I have preferred recording the fact to adding to the existing number of guesses made in the dark"—A. E. Taylor. (His Introduction to his Translation of Plato)

IV ಬಿ. ಜೋವೆಟ್ ಮತ್ತು ಅವನು ಮಾಡಿದ ಭಾಷಾಂತರ ಕಾರ್ಯ

ಬೆಂಜಾಮಿನ್ ಜೋವೆಟ್ಟನು, 1855ರಲ್ಲಿ, ಆಕ್ಸ್‌ಫರ್ಡಿಗೆ Regius Professor of Greek ಆಗಿ ಸೇರಿಕೊಂಡು, ಪ್ಲೇಟೋವಿನ ಸಂವಾದಗಳ ಮೇಲೆ ಪಾಂಡಿತ್ಯಪೂರ್ಣ ಹೊತ್ತಿಗೆಗಳನ್ನು ಹೊರತಂದನು.

ಪ್ರೊ. ಲಿವಿಸ್ ಕ್ಯಾಂಪ್‌ಬೆಲ್ಲನು "ಲೈಫ್ ಅಂಡ್ ಲೆಟರ್ಸ್ ಆಫ್ ಬೆಂಜಾಮಿನ್ ಜೋವೆಟ್"—ಎಂಬ ತನ್ನ ಕೃತಿಯಲ್ಲಿ, ಜೋವೆಟ್ಟನು ಪ್ಲೇಟೋವಿನ ಸಂವಾದಗಳ ಪೂರ್ಣಭಾಷಾಂತರಕ್ಕೆ ಹೇಗೆ ತೊಡಗಿದನು ಎಂಬುದನ್ನು ಹೀಗೆ ಹೇಳುತ್ತಾನೆ : "When I was with him at Askrigg in the summer of

1864, he was struggling with the analysis of the Parmenides and the other Dialectical Dialogoues. His taste in language was becoming more and more fastidious. At this time he was resolved to turn every sentence so as to exclude the colourless pronoun "it". I troubled him with the remark that "which" was not much better, and one or other was inevitable. This protracted labour was almost finished when a casual remark of Pattison's (I think) convinced him that the analysis will never be complete, and that the Republic at all events must be translated in full. As he proceeded with this in 1865, he formed the resolution of translating the whole of Plato".

(Life, vol. i, PP. 333-4)

ಈ ರೀತಿಯಲ್ಲಿ ಸಂಪೂರ್ಣವಾಗಿ ಭಾಷಾಂತರ ಕಾರ್ಯದಲ್ಲಿ ಮಗ್ನನಾದ ಜೋವೆಟ್ಟನು, ಪ್ಲೇಟೋವಿನ ಸಂವಾದಗಳನ್ನು 1871ರಲ್ಲಿ ಮಾಡಿ ಮುಗಿಸಿದನು. ನಂತರ, ಭಾಷಾಂತರದ ಪೂರ್ಣ ಹಕ್ಕುಗಳನ್ನು ತನಗೆ ಪೂರ್ಣ ಆಶ್ರಯವಾಗಿದ್ದ ಆಕ್ಸ್‌ಫರ್ಡಿನ ಬಾಲಿಯಲ್ ಕಾಲೇಜಿಗೇ ಒಪ್ಪಿಸಿಬಿಟ್ಟನು. ಆ ಕಾಲೇಜಿನಲ್ಲಿ ಸ್ಥಾಪಿಸುವ ಟ್ರಸ್ಟ್, ಭಾಷಾಂತರದಿಂದ ಬರುವ ಹಣವನ್ನು i) ಮರು ಪ್ರಕಟನೆಗೆ ಮತ್ತು ii) ಭಾಷಾಂತರದ ಮರು ಸಂಸ್ಕರಣಕ್ಕೆ ಬಳಸಬೇಕೆಂದು ತಿಳಿಸಿದ್ದನು.

ಸಂವಾದಗಳ ಭಾಷಾಂತರ ಕಾರ್ಯ ಪೂರ್ಣವಾಗಿ ಮುಗಿದ ನಂತರ ಜೋವೆಟ್ಟನು ಪ್ಲೇಟೋವಿನ ಬಗ್ಗೆ ತನ್ನ ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾನೆ : "The aim of the Introductions in these volumes has been to represent Plato as the father of Idealism, who is not to be measured by the standard of utilitarianism or any other modern philosophical system. He is the poet or maker of ideas, satisfying the wants of his own age, providing the instruements of thought for future generations. He is no dreamer, but a great philosophical genius struggling with the unequal conditions of light and knowledge under which he is living. He may be illustrated by the writings of moderns, but he

must be interpreted by his own, and by his place in the history of philosophy. We are not concerned to determine what is the residuous of truth which remains for ourselves. His truth may not be our truth, and nevertheless may have an extraordinary value and interest for us." (In the Preface to 'Dialogues of Plato xxviii, vol-i, First Editions)

ಮೇಲಿನ ಈ ಹೇಳಿಕೆಯು, ಭಾಷಾಂತರಕಾರ್ಯದಿಂದ, ಮೂಲ ಲೇಖಕನ ಮನೋಭಾವನೆಗಳ ಬಗ್ಗೆ ಸ್ಪಷ್ಟವಾದ ಅಭಿಪ್ರಾಯಗಳನ್ನು ಎಷ್ಟೊಂದು ವಾಸ್ತವವಾಗಿ ಹೊಂದಬಹುದು ಎಂಬುವನ್ನು ಮನವರಿಕೆ ಮಾಡುತ್ತದೆ.

"ಪ್ಲೇಟೋವಿನ ಸಂವಾದಗಳನ್ನು" ಭಾಷಾಂತರದ ವಸ್ತುವಾಗಿ ಆಯ್ದುಕೊಂಡ ಜೋವೆಟ್ಟನು, ಭಾಷಾಂತರ ಪೂರ್ಣವಾದಾಗ ಸ್ವತಃ ಎಂತಹ ಪೂರ್ಣಪ್ರಜ್ಞೆಯನ್ನು ಹೊಂದುತ್ತಾನೆ ಎನ್ನುವುದನ್ನು ಮನಗಾಣಲು, ತನ್ನ ಸಹವರ್ತಿಗಳಿಗೆ ಅವನು ತೋರಿಸಿರುವ ಕೃತಜ್ಞತೆಗಳು ಹಾಗೂ ಪ್ಲೇಟೋವಿನ ವ್ಯಕ್ತಿತ್ವದ ಬಗ್ಗೆ ಅವನಿಗೆ ಮೂಡಿದ ಗೌರವ ಭಾವಗಳನ್ನು — ಅವನು ಬರೆದಿರುವ ಮುನ್ನುಡಿಗಳಿಂದ ತಿಳಿಯಬಹುದು.

ಭಾಷಾಂತರಕ್ಕೆ ಆಯ್ದುಕೊಂಡ ಮೂಲ ಕೃತಿಗಳು :

ಜೋವೆಟ್ಟನು ತನ್ನ ಭಾಷಾಂತರ ಕಾರ್ಯಕ್ಕೆ ಪ್ಲೇಟೋವಿನ ಸಂವಾದಗಳನ್ನು ಕುರಿತ ಗ್ರೀಕಿನ ಮೂಲ ಕೃತಿಗಳನ್ನೇ ನೇರವಾಗಿ ಅವಲಂಬಿಸಿದ್ದನು.

V ಭಾಷಾಂತರ ಹೇಗಿರಬೇಕು : ಜೋವೆಟ್ಟನ ಅಭಿಪ್ರಾಯಗಳು

ಜೋವೆಟ್ಟನು, ತನ್ನ ಭಾಷಾಂತರದ ಎರಡನೆ ಆವೃತ್ತಿಗೆ ಬರೆದ ಮುನ್ನುಡಿಯಲ್ಲಿ 'ಆದರ್ಶ ಭಾಷಾಂತರ'ವನ್ನು ಕುರಿತು ದೀರ್ಘ ವಿವರಣೆ ನೀಡಿರುವನು. ಅದರ ಸಂಕ್ಷಿಪ್ತ ರೂಪ ಹೀಗಿದೆ: "ಭಾಷಾಂತರಗೊಂಡ ಕೃತಿಯು ಓದುಗನು ಮೂಲಕೃತಿಯನ್ನೇ ಓದುತ್ತಿರುವಂತೆ ಪ್ರಭಾವ ಬೀರಬೇಕು ; ಭಾಷಾಂತರಗೊಂಡ ಕೃತಿಯು, ಮೂಲ ಕೃತಿಕಾರನ ಸ್ವಾತಂತ್ರ್ಯ ಭಾವ, ಕೃಪಾದೃಷ್ಟಿ, ಸರಳತೆ, ಔನ್ನತ್ಯ, ಘನತೆ, ಸ್ಪಷ್ಟತೆ, ಖಚಿತತೆ, ಮಾಧುರ್ಯ ಮುಂತಾದ ಲಕ್ಷಣಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಂಡಿರಬೇಕು. ಮೂಲಕೃತಿಗೆ ವಿಧೇಯತಾಭಾವದಿಂದಿರುವುದು ಸ್ಪಷ್ಟವಾಗಿರಬೇಕು.

ಒಟ್ಟಾರೆ ಪರಿಣಾಮದ ದೃಷ್ಟಿಯಲ್ಲಿ ಗಮನಿಸಿದಾಗ, ಜೋವೆಟ್ಟನ ಭಾಷಾಂತರವು ಒಂದು ನಿಜವಾದ ಕಲಾಕೃತಿಯಂತಿದ್ದು, ಸಂಪಾದಕರು ಗೌರವಭಾವದಿಂದ ಅದನ್ನು ನೋಡುತ್ತಾರೆ.

ಆದರೂ, ವಿನಮ್ರನಾದ ಜೋವೆಟ್ಟನು ಹೇಳುವದೇನೆಂದರೆ: "ಭಾಷಾಂತರ ವನ್ನು ನನ್ನಿಂದ ಸಾಧ್ಯವಾದಷ್ಟು ಮಟ್ಟಿಗೆ ಸಮಗ್ರತೆ ಮತ್ತು ಪೂರ್ಣತೆಯ ಹತ್ತಿರಕ್ಕೆ ಮಾಡಲು ಪ್ರಯತ್ನಿಸಿದ್ದೇನೆ, ಅಷ್ಟೆ" ಎಂಬುದಾಗಿದೆ.

ಇಂಗ್ಲಿಷಿಗೆ ಭಾಷಾಂತರಿಸಿದ ಅವನ ಇಂಗ್ಲಿಷ್ ಪಕ್ಷಪಾತ ಎಷ್ಟೆಂದರೆ, ಪ್ಲೇಟೋ ವಿನ ಯಾವುದೇ ಇಂಗ್ಲಿಷ್ ಭಾಷಾಂತರದ, ಗ್ರೀಕರ ಮತ್ತು ಇಂಗ್ಲಿಷರ ಆಸಕ್ತಿಗಳ ನಡುವೆ ಕಲಹ ತಂದೊಡ್ಡುತ್ತದೆ. ಇಂತಹ ವೇಳೆಯಲ್ಲಿ ಜೋವೆಟ್ಟನು ತನ್ನ ಅಭಿಪ್ರಾಯ ಮತ್ತು ಅನುಕಂಪವನ್ನು ಇಂಗ್ಲಿಷರ ಪರ ಸೂಚಿಸುತ್ತಾನೆ. ಗ್ರೀಕರ ಬಗ್ಗೆ ಹೇಳಿರುವ ಪ್ಲೇಟೋನ ಖಚಿತ ಅಭಿಪ್ರಾಯಗಳು ಮತ್ತು ಇಂಗ್ಲಿಷ್ ಭಾಷಾಂತರದ ಶೈಲಿ, ಇವು ಗಳಲ್ಲಿ ಎರಡನೆಯದರ ಕಡೆಗೆ ಅವನ ಮನ ವಾಲುತ್ತದೆ. ಬಹುಪಾಲು ಪ್ಲೇಟೋವಿನ ವಿಚಾರಗಳು ಪಾಂಡಿತ್ಯ ಪೂರ್ಣವಾಗಿದ್ದು, ಬುದ್ಧಿ ಜೀವಿಗಳಿಗೆಂದೇ ಹೇಳಿರುವಂತೆ ಕಂಡು ಬರುತ್ತವೆ. ಇಂತಹ ಗಹನ ವಿಚಾರಗಳನ್ನು, ಮೂಲಕ್ಕೆ ಲೋಪಬರದಂತೆ, ಆದರೆ ಸಾಮಾನ್ಯ ಓದುಗರಿಗೆ ಅರ್ಥವಾಗುವ ತಿಳಿ ಭಾಷೆಯಲ್ಲಿ ಭಾಷಾಂತರಿಸಿರುವುದು ಜೋವೆಟ್ಟನ ಭಾಷಾಂತರದ ವೈಶಿಷ್ಟ್ಯ.

ತನ್ನ ಭಾಷಾಂತರದ ಎರಡನೆ ಮತ್ತು ಮೂರನೆ ಆವೃತ್ತಿಗೆ ಬರೆದ ಮುನ್ನುಡಿ ಯಲ್ಲಿ ಜೋವೆಟ್ಟನು ಹೀಗೆ ಹೇಳುತ್ತಾನೆ: "ಭಾಷಾಂತರದ ಕಾರ್ಯದ ದೀರ್ಘಪರಿ ಶ್ರಮದ ಅಂತ್ಯದಲ್ಲಿ, ಅಲ್ಲಿಯವರೆಗೆ ಎದುರಾದ ತೊಂದರೆಗಳನ್ನು ಭಾಷಾಂತರಕಾರನು ಸ್ಪಷ್ಟಪಡಿಸಬೇಕು. ಇವು ಅವನು ನಿರೀಕ್ಷಿಸಿದುದಕ್ಕಿಂತಲೂ ಹೆಚ್ಚಾಗಿರುತ್ತವೆ. ಇವು ಗಳನ್ನೆಲ್ಲಾ ಸುಲಭವಾಗಿ ಬಗೆಹರಿಸುವುದರ ಮೂಲಕ ಜಯಶಾಲಿಯಾಗಿದ್ದೇನೆ ಎಂಬ ನಂಬಿಕೆ ಹೊಂದಿದ್ದಾನೆ ಎನ್ನುವುದಲ್ಲ. ಚಿತ್ರದ ಪೂರ್ಣತೆ, ಸೊಗಸು ಅದನ್ನು ಚಿತ್ರಿ ಸುತ್ತಾ ಹೋದಂತೆ ಇಮ್ಮಡಿಸುತ್ತದೆ ಎಂಬ ಸತ್ಯದ ಅರಿವನ್ನು ಭಾಷಾಂತರಕಾರನು ತನ್ನ ಅನುಭವದ ಮೂಲಕ ಕಂಡುಕೊಳ್ಳುತ್ತಾನೆ. ಭಾಷಾಂತರವು ಅಂತ್ಯವಿಲ್ಲದ ಯಾತನೆಯ ಕಾರ್ಯ; ಅಂತ್ಯದಲ್ಲಿ ಆನಂದವಾಗದೆ ಇರದು.

i) ಇಂಗ್ಲಿಷ್ ಭಾಷಾಂತರವು ಪಂಡಿತ ಮತ್ತು ಪಾಮರನಿಗೆ ಅರ್ಥವಾಗುವ ಆಸಕ್ತಿ ಕೆರಳಿಸುವ ಆಡು ಭಾಷೆಯಂತಿರಬೇಕು. ಶಾಲಾಮಕ್ಕಳಂತೆ ಮೂಲದಲ್ಲಿರುವ ಪದಗಳನ್ನು ಇನ್ನೊಂದು ಭಾಷೆಗೆ ಹಾಗೇ ತರುವುದಲ್ಲ; ಮೂಲದ ಅರ್ಥ-ಭಾವಗಳನ್ನು ತದ್ವತ್ತಾಗಿ ಭಾಷಾಂತರಿಸಬೇಕು.

ii) ಇಂಗ್ಲಿಷಿಗೆ ಭಾಷಾಂತರಗೊಂಡ ವಸ್ತು, ಮೂಲದ ಗ್ರೀಕಿನ ಸಹಾಯ ವಿಲ್ಲದೆಯೇ ಓದಿಸಿಕೊಂಡು ಹೋಗಬೇಕು.

ಇನ್ನೂ ವಿವರವಾದ ಅಭಿಪ್ರಾಯಗಳಿಗೆ ಜೋವೆಟ್ಟನು ತನ್ನ ಭಾಷಾಂತರಕ್ಕೆ ಬರೆದ ಮುನ್ನುಡಿಯನ್ನು ಗಮನಿಸಬೇಕಾಗುತ್ತದೆ.

VI ಕೊನೆಯ ಮಾತು

ಸಾಮಾನ್ಯವಾಗಿ, ಯಾವುದೇ ಒಂದು ಪುರಾತನ ಅಥವಾ ಆಧುನಿಕ ಸಂಸ್ಕೃತಿ, ಸಾಹಿತ್ಯ, ದರ್ಶನಗಳಿಗೆ ಸಂಬಂಧಿಸಿದ ಮೂಲಕೃತಿಯೊಂದನ್ನು ಮತ್ತೊಂದು ಭಾಷೆಗೆ ಭಾಷಾಂತರ ಮಾಡುವಾಗ, ಅನೇಕ ಭಾಷಾಂತರಕಾರರು ಅನೇಕ ಭಾಷೆಗಳಿಗೆ ಅನುವಾದಿಸುವುದು ನಡೆದಿರುತ್ತದೆ. ಪ್ರಸಿದ್ಧವಾದ ಒಂದು ಮೂಲಕೃತಿಯನ್ನು ಕಾಲ ಕಾಲಕ್ಕೆ, ವಿವಿಧ ಭಾಷೆಗಳಿಗೆ ಭಾಷಾಂತರ ಮಾಡುವಾಗ ಆ ಕೃತಿಯೊಂದನ್ನೇ ಕುರಿತ ಚರಿತ್ರೆಯೊಂದು ನಿರ್ಮಾಣವಾಗುತ್ತದೆ. ಇಂತಹ ಸಮಯದಲ್ಲಿ, ಭಾಷಾಂತರಕಾರರು ತಮ್ಮ ಉದ್ದೇಶಗಳನ್ನು, ತಮಗೆದುರಾದ ನೋವು-ನಲಿವುಗಳನ್ನು ಸ್ವತಃ ತಿಳಿಸದೆ ಹೋಗುವ ಸಾಧ್ಯತೆ ಇರುತ್ತದೆ. ಇಂತಹ ಸಮಯದಲ್ಲಿ ಆ ಭಾಷಾಂತರಗಳ ಒಪ್ಪು ತಪ್ಪುಗಳನ್ನು ಇತರರು ಕಂಡು ಹಿಡಿದು ಸರಿಪಡಿಸುವುದಿದ್ದರೆ ಹೇಗೆ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಭಾಷಾಂತರ ಚರಿತ್ರೆಯ ಅವಲೋಕನ ಭಾಷಾಂತರದ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾದ ವಿಷಯವಾಗುತ್ತದೆ. ಹೇಗೆಂದರೆ, ಹಿಂದಿನಿಂದ ಇಂದಿನವರೆಗೆ ಭಾಷಾಂತರದ ಬೆಳವಣಿಗೆ ಎಷ್ಟೆಂದು ನೋವು ನಲಿವುಗಳನ್ನು ಅನುಭವಿಸುತ್ತಾ, ಪರಿಷ್ಕಾರ-ಪರಿವರ್ತನೆಗಳನ್ನು ಹೊಂದುತ್ತಾ ಬಂದಿದೆ ಎಂಬುದರ ಮನವರಿಕೆಯಾಗುತ್ತದೆ. ಈ ಎಲ್ಲ ಅನುಭವಗಳ ಆಧಾರದ ಮೇಲೆ ಮುಂದಿನ ಭಾಷಾಂತರ ಕಾರ್ಯವನ್ನು ಕಾಲ-ದೇಶ-ಭಾವನೆಗಳ ಜಾಯಮಾನಕ್ಕೆ ತಕ್ಕಂತೆ, ಶೈಲಿ-ವಸ್ತು-ರೀತಿ ಮತ್ತು ಮಾಧ್ಯಮಗಳ ಮೂಲಕ ಸುಧಾರಿಸಲು ಸಹಾಯವಾಗುತ್ತದೆ.

VII ಆಧಾರ ಗ್ರಂಥಗಳು

1 *A History of Philosophy* — by Frank Thilly
2 *A History of Philosophy* — by Faller
3 *The Dialogues of Plato* (vol I) — Translated by B. Jovett
4 *Plato – The Sopist and The Statesman* — Translation & Introduction — — A. E. Taylor
5 *The Republic* —Translated with an Introduction by A. D. Lindsay
6 *Plato — Timaeus and Critias* — Translated with an Introduction by Desmond Lee

ಕೆ ಹಿರಿಯಣ್ಣ

ಜಾನಪದ ಅಧ್ಯಯನದ ಪ್ರಯೋಜನಗಳು

ಜಾನಪದವು ಜನತೆಯದಾಗಿದ್ದು ಜನತೆಯಿಂದಲೇ ಜನತೆಗಾಗಿ ಸೃಷ್ಟಿಯಾದಂತಹುದು. ಮಾನವನ ಒಟ್ಟು ಸಂಸ್ಕೃತಿಯ ಅಧ್ಯಯನಕ್ಕೆ ಅಪಾರ ಸಾಮಗ್ರಿಯನ್ನು ಒದಗಿಸುವ ಈ ಜಾನಪದದ ಮಹತ್ತ್ವವನ್ನು ವಿದ್ವಾಂಸರು ಇತ್ತೀಚೆಗೆ ಮನಗಂಡರು. ಫಲವಾಗಿ ಅದನ್ನು ಶಾಸ್ತ್ರೀಯ ನೆಲೆಗಟ್ಟಿನಲ್ಲಿ ವೈಜ್ಞಾನಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಹೊಸ ಪ್ರವೃತ್ತಿ ಆರಂಭವಾಯಿತು. ಇಂದು, ಅಧ್ಯಯನಕಾರರು ಜಾನಪದದ ಬಹುತೇಕ ಎಲ್ಲ ಮುಖಗಳನ್ನು ವ್ಯಾಪಕ ಹಿನ್ನೆಲೆಯಲ್ಲಿ ಅಭ್ಯಸಿಸಿ ಅವರ ಹಲವು ಪ್ರಯೋಜನಗಳನ್ನು ಕಂಡುಕೊಂಡಿದ್ದಾರೆ. ಈ ಲೇಖನದಲ್ಲಿ ಆ ಪ್ರಯೋಜನಗಳ ಪರಿಚಯ ಮಾಡಿಕೊಡಲು ಯತ್ನಿಸಿದೆ. ಜಾನಪದದಿಂದಾಗುವ ಪ್ರಯೋಜನಗಳೇನು ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವಾಗ ಜಾನಪದ ಯಾವಾಗ ಯಾರಿಂದ ಯಾರಿಗಾಗಿ ಜನ್ಮ ತಾಳಿತು ಎಂಬ ಉಪಪ್ರಶ್ನೆಗಳು ತಲೆಹಾಕುತ್ತವೆ. ಕೇವಲ ಶೈಕ್ಷಣಿಕ ಕಾರಣಕ್ಕಾಗಿ ಇಂಥ ಚರ್ಚೆ ನಡೆಯಿತೆ ಎಂಬ ಪ್ರಶ್ನೆಯೂ ಇಲ್ಲಿ ಏಳುತ್ತದೆ.

ಜನರು ಜಾನಪದದಿಂದ ಏನನ್ನು ಪಡೆದಿದ್ದಾರೆ ? – ಇದು ಮುಖ್ಯ ಪ್ರಶ್ನೆ. ಜಾನಪದ ಈವರೆಗೆ ಜನರಿಗೆ ಏನನ್ನು ಮಾಡಿದೆ ? ಈಗ ಏನನ್ನು ಮಾಡುತ್ತಿದೆ ? ಅದರ ಕಾರ್ಯ ಯಾವ ಬಗೆಯದು ? ಇನ್ನೂ ಇಂಥ ಅನೇಕ ಪ್ರಶ್ನೆಗಳು ಮುಖ್ಯ ಪ್ರಶ್ನೆಯಲ್ಲಿ ಅಡಕವಾಗಿವೆ. ಜಾನಪದವು ಪರಂಪರೆಗೆ ಸಂಬಂಧಪಟ್ಟ ವಿಷಯವಾದ್ದರಿಂದ ಮಾನವ ಕುಲ ಪರಂಪರೆ ಇರುವವರೆಗೆ ಅದು ಜೀವಂತವಾಗಿರುತ್ತದೆ ; ಅವನಿಗೆ ಪ್ರಯೋಜನಕಾರಿಯಾಗಿರುತ್ತದೆ ಎಂಬುದು ಒಂದು ವಾದವಾದರೆ ಇವಕ್ಕೆ ಪ್ರತಿಯಾಗಿ ಇನ್ನೊಂದು ವಾದವಿದೆ–ಜಾನಪದವು ಕಾಲದೇಶಗಳ ನಿರಂತರ ಯಾತ್ರೆಯಲ್ಲಿ ಸಾಗುವಾಗ ತಾನಾಗಿಯೇ ಪರಿಷ್ಕಾರಕ್ಕೊಳಗಾಗುತ್ತದೆ ; ಸಮಕಾಲೀನ ಬದುಕಿನ ಅಂಶಗಳನ್ನು ಒಳಗೊಳ್ಳುತ್ತಾ ಹೋಗುತ್ತದೆ. ಇಂಥ ಸಂದರ್ಭಗಳಲ್ಲಿ ಜಾನಪದದ ವ್ಯಾವಹಾರಿಕ (ರಾಜಕೀಯ ಮತ್ತು ಸಾಮಾಜಿಕ) ಪ್ರಯೋಜನಗಳನ್ನು ವ್ಯಾವಹಾರಿಕವಲ್ಲದ ('ಪ್ರಪಂಚ ದೃಷ್ಟಿ'ಯನ್ನು ಹೊಂದುವುದು ಅಥವಾ ಪ್ರತ್ಯೇಕತಾ ಭಾವನೆಯನ್ನು ತಳೆಯುವುದು) ಪ್ರಯೋಜನಗಳಿಂದ ಪ್ರತ್ಯೇಕಿಸಿ ಹೇಳುವುದು ಹೆಚ್ಚು ಯುಕ್ತ.

ಜಾನಪದ ಅಧ್ಯಯನಕಾರರಿಗೆ ಜಾನಪದದಿಂದ ಏನು ಪ್ರಯೋಜನವಿದೆ ? – ಎಂಬುದು ಇನ್ನೊಂದು ಮುಖ್ಯ ಪ್ರಶ್ನೆ. ಇದು ನಾವು ಜಾನಪದ ಸಾಮಗ್ರಿಯನ್ನು ಏಕೆ ಅಭ್ಯಾಸ ಮಾಡಬೇಕು ? ಜನರಿಗಾಗಿ ಈ ಅಭ್ಯಾಸಿಗಳು ಏನು ಮಾಡಲು ಸಾಧ್ಯ? ಎಂಬ ಪ್ರಶ್ನೆಗಳನ್ನು ಒಳಗೊಳ್ಳುತ್ತದೆ. ಇಲ್ಲಿ ಜಾನಪದ (Folklore)ದ ಪ್ರಯೋಜನಗಳನ್ನು ಮತ್ತು ಜಾನಪದ ಅಧ್ಯಯನ (Folkloristics)ದಿಂದ ದೊರಕುವ ಪ್ರಯೋಜನಗಳನ್ನು ಬೇರೆ ಬೇರೆಯಾಗಿಯೇ ಹೇಳಬೇಕಾಗುತ್ತದೆ. ಹಾಗೆ ಮಾಡುವುದರಿಂದ ಎರಡರ ಪ್ರಯೋಜನಗಳನ್ನೂ ಪ್ರತ್ಯೇಕವಾಗಿ ವಿಮರ್ಶಿಸಲು ಸಾಧ್ಯವಾಗುತ್ತದೆ. ಈ ಸಂದರ್ಭದಲ್ಲಿ ಜಾನಪದವು ಜನರಿಗೆ ಉಪಯೋಗವಾಗುವಂತೆ ಮಾಡಲು ಏನು ಮಾರ್ಪಾಟು ಅಥವಾ ಸೇರ್ಪಡೆಗಳನ್ನು ಮಾಡಿಕೊಳ್ಳಬಹುದು ಎಂಬುದನ್ನೂ ವಿಚಾರ ಮಾಡಲಾಗುತ್ತದೆ. ವಾಸ್ತವವಾಗಿ ಇದು ಜಾನಪದದ ಅಳಿವು-ಉಳಿವಿನ ಸಮಸ್ಯೆಗೆ ಸಂಬಂಧಿಸಿದ್ದು.

ಇಂದು, ಆಧುನಿಕತೆಯಿಂದಾಗುವ ಬದಲಾವಣೆಗಳಿಗೆ ಹೊಂದಿಕೊಂಡು ಜಾನಪದ ಶುದ್ಧ ರೂಪದಲ್ಲಿ ಉಳಿದುಬರಲು ಸಾಧ್ಯವಾಗಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಅದೇ ರೀತಿಯಲ್ಲಿ ಜಾನಪದವನ್ನು ಅಧ್ಯಯನ ಮಾಡುವುದರಿಂದ ಅಧ್ಯಯನಕಾರರು ಬದಲಾಗುತ್ತಿರುವ ಸಮಾಜ, ಜನರಿಗಾಗಿ ಜಾನಪದ ಸಾಮಗ್ರಿಯಲ್ಲಿ ಆಗಬೇಕಾಗಿರುವ ಪರಿವರ್ತನೆ ಬಗೆಗೆ ಸಲಹೆ ಸೂಚನೆ ಕೊಡಲು ಸಮರ್ಥರಾಗುತ್ತಾರೆ; ಅಧ್ಯಯನದಲ್ಲಿ ತಳೆಯಬೇಕಾದ ದೃಷ್ಟಿ ಧೋರಣೆಗಳ ಬಗೆಗೆ ದೃಢ ನಿಲುವು ಹೊಂದಲು ಶಕ್ಯರಾಗುತ್ತಾರೆ ಎಂಬುದು ಈಗ ಸಾಬೀತಾಗಿರುವ ಅಂಶ.

ಜಾನಪದವು ಜನರಿಗಾಗಿ ಏನು ಮಾಡಲು ಸಾಧ್ಯ ? ಎಂಬುದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಜನಪದ ಆಟ–ಪ್ರದರ್ಶನಗಳು ವಾಸ್ತವವಾಗಿ ಸಾಮಾಜಿಕ ಸಮಾರಂಭಗಳೇ. ಆ ಸಂದರ್ಭಗಳಲ್ಲಿ ಹಲವು ಹತ್ತು ಕುಟುಂಬದ ಸದಸ್ಯರು ಒಂದೆಡೆ ಕಲೆಯುತ್ತಾರೆ ; ಸಾಮಾಜಿಕೀಕರಣಕ್ಕೊಳಗಾಗುತ್ತಾರೆ. ಮದುವೆ ಕಾಲದಲ್ಲಿ ಶಾಸ್ತ್ರಕ್ಕಾಗಿ ಆಡಿಸುವ ಆಟಗಳಂತೂ ಗಂಡು ಹೆಣ್ಣುಗಳ ನಡುವೆ ಸಲುಗೆ ಸಾಮರಸ್ಯ ಕುದುರಿಸಲು ಒಳ್ಳೆಯ ಸಾಧನಗಳು. ಈ ಆಟ ಪ್ರದರ್ಶನಗಳಿಂದ ಲಾಭ ಹೊಂದುವವರು ಹೆಣ್ಣು ಗಂಡುಗಳು ಮಾತ್ರವಲ್ಲ ; ಎರಡೂ ಕಡೆಯ ಕುಟುಂಬಗಳ ನಡುವಿನ ಬಾಂಧವ್ಯವೂ ಹೆಚ್ಚು ಬಲಗೊಳ್ಳುತ್ತದೆ. ಇಂಥ ಸಾಮಾಜಿಕ ಕಾರ್ಯಗಳು ಒಂದೆಡೆ ಸಮೂಹಪ್ರಜ್ಞೆಯನ್ನು ಮೂಡಿಸಿದರೆ ಇನ್ನೊಂದೆಡೆ ಐಕಮತ್ಯವನ್ನು ಸಾಧಿಸುವುದಕ್ಕೆ ನೆರವಾಗುತ್ತವೆ. ಎಷ್ಟೋ ವೇಳೆ ಜಾತಿ ಜಾತಿಗಳ ನಡುವಿನ ಅಂತರವನ್ನು ಹೋಗಲಾಡಿಸಲು, ಮೇಲು ಕೀಳು ಭಾವನೆಗಳನ್ನು ತೊಲಗಿಸಲು, ಸೇಡಿನ ಮನೋಭಾವನೆಯನ್ನು ನಿವಾರಿಸಲು ಕೆಲವು ವಿನೋದದ ಮಾತುಗಳು ಸಹಕಾರಿಯಾಗಿರುತ್ತವೆ. ಒಟ್ಟಾರೆ, ವಿನೋದ ಅಥವಾ ಹಾಸ್ಯಸಂಬಂಧ ಜನರ ಸಂಘಟನೆಯನ್ನು ಬಲಪಡಿಸುತ್ತವೆ ; ಆದರಿಂದ ಐಕಮತ್ಯ ಸಾಧಿತವಾಗುತ್ತದೆ. ಜನಪದ ಜೀವನದಲ್ಲಿ

ಅಲಂಕಾರಗಳು ನಿಸ್ಸಾರವಾದುದನ್ನು ಸಾರವಾಗಿಸುತ್ತವೆ; ಸಹಜಸುಂದರ ವಸ್ತುವನ್ನಾಗಿಸುತ್ತವೆ. ಗಾಡಿ ಎತ್ತುಗಳ ಕೋಡುಗಳ ಅಲಂಕಾರ, ಕೊರವಿಗಳ ಅಲಂಕಾರ, ಟ್ರ್ಯಾಕ್ಟರ್-ಟ್ರೈಲರ್‌ಗಳನ್ನು ಬಣ್ಣದ ಕಾಗದ, ಚ್ಯಾಂಡೆ ಹೂಗಳಿಂದ ಅಲಂಕರಿಸುವುದು ಇತ್ಯಾದಿ ಜನಸಾಮಾನ್ಯರ ಕಲಾತ್ಮಕ ಪ್ರತಿಭೆಗೆ ಯುಕ್ತ ಅವಕಾಶವನ್ನು ಕಲ್ಪಿಸಿ ಕೊಡುತ್ತವೆ. ಇವು ಅವರ ಬುದ್ಧಿಯನ್ನು ಚುರುಕುಗೊಳಿಸುತ್ತವೆ.

ಜಾನಪದದ ಮಹತ್ತ್ವದ ಅಂಶವೆಂದರೆ ಅದು ಐತಿಹಾಸಿಕ ದಾಖಲೆಗಳಿಲ್ಲದ ಕಡೆಗಳಲ್ಲಿ ಗತಿಸಿಹೋದ ಬದುಕಿನ ಸಾರವನ್ನು ಉಳಿಸಿಕೊಂಡು ಬರುತ್ತದೆ. ಅದು ವರ್ತಮಾನಕ್ಕೆ ಭೂತವನ್ನು ಸೇರಿಸುವ ಕೊಂಡಿ. ಐತಿಹಾಸಿಕ ದಾಖಲೆಗಳು ಲಭ್ಯವಿರುವೆಡೆಗಳಲ್ಲಿ ಕಂಠಸ್ಥ ಇತಿಹಾಸವನ್ನು ದೊರಕಿಸಿಕೊಡುವ ಪ್ರಯತ್ನವನ್ನೂ ಅದು ಮಾಡುತ್ತದೆ. ಈ ಕಂಠಸ್ಥ ಇತಿಹಾಸದಲ್ಲಿ ಪ್ರಜಾಸತ್ತಾತ್ಮಕವಾದ ನಿರೂಪಣೆ ಇರುತ್ತದೆ. ಎಷ್ಟೋ ವೇಳೆ ಚರಿತ್ರಕಾರರು ಮತ್ತು ಶತಿ ಕೋವಿದ್ಯೋಗಿಗಳು ಗ್ರಹಿಸಿದ್ದಕ್ಕಿಂತ ಹೆಚ್ಚು ಮಹತ್ತ್ವದ ವಿಚಾರಗಳು ಆ ನಿರೂಪಣೆಗಳಲ್ಲಿರುತ್ತವೆ.

ಇಂದಿನ ಶಿಕ್ಷಣ ಪದ್ಧತಿ ಜಾನಪದವನ್ನು ಇಲ್ಲವಾಗಿಸುತ್ತದೆ ಎಂಬ ಆತಂಕ ಎಲ್ಲೆಡೆ ಮೂಡಿದೆ. ಇದು ಜಾನಪದವನ್ನು ಕೀಳರಿಮೆಯಿಂದ ನೋಡುವಂತಹ ದೃಷ್ಟಿ. ವಾಸ್ತವವಾಗಿ, ಜಾನಪದವೇ ಒಂದು ಶಿಕ್ಷಣ ಮಾಧ್ಯಮ. ಜನರು ತಮ್ಮನ್ನು ತಾವು ತಿದ್ದಿಕೊಳ್ಳಲು, ತಮ್ಮ ಮಕ್ಕಳನ್ನು ತಿದ್ದಲು ಇದನ್ನು ಬಳಸಿಕೊಳ್ಳುತ್ತಾರೆ. ಜಾನಪದ ಸಾಮಗ್ರಿ ಜೀವನಾನುಭವದಿಂದ ಹೊರಹೊಮ್ಮಿರುವಂಥದಾಗಿದ್ದರೂ ತನಗೇ ವಿಶಿಷ್ಟವಾದ ರೀತಿಯಲ್ಲಿ ಒಂದು ಸೈದ್ಧಾಂತಿಕ ನೆಲೆಯಲ್ಲಿ ಔಪಯೋಗಿಕತೆ ಎಂಬ ಸಿಹಿಲೇಪದ ಗುಳಿಗೆಗಳ ರೂಪದಲ್ಲಿ ಸರ್ವರಿಗೂ ಅದು ಚೇತೋಹಾರಿಯಾಗಿರುತ್ತದೆ. ಇವಕ್ಕೆ ಕನ್ನಡದ ನೀತಿಕಥೆಗಳು ಒಳ್ಳೆಯ ಉದಾಹರಣೆಗಳು.

ಜಾನಪದವು ಪ್ರಾಚೀನ ಸಂಗತಿಗಳನ್ನು ಉಳಿಸಿಕೊಂಡು ಬಂದಿದ್ದರೂ ಅದು ಕೇವಲ ಹಳೆಯದಲ್ಲ; ಆ ಹಳೆಯ ಸಂಗತಿಗಳಲ್ಲಿಯೇ ಸಮಕಾಲೀನ ಬದುಕಿಗೆ ಸಂಗತವಾಗಿರುವ ಹೊಸ ಅಂಶಗಳು ಅವರಲ್ಲಿ ಅಂತರ್ಗತವಾಗಿ ಬಂದಿರುತ್ತವೆ. ಹಿಂದೆ ಹಿರಿಯರು ಕಿರಿಯರಿಗೆ ಆಶೀರ್ವದಿಸುವಾಗ 'ರಾಜನಾಗು' ಎಂದು ಹರಸುತ್ತಿದ್ದರು. ಈಗ 'ದೊಡ್ಡ ಅಧಿಕಾರಿಯಾಗು' ಎಂದು ಹರಸುವುದು ರೂಢಿಯಾಗಿದೆ. ಕೆಲವೊಮ್ಮೆ ಆಧುನಿಕತೆಯಿಂದ ಪ್ರಾಚೀನತ್ವಕ್ಕೆ ಜಿಗಿಯುವ ಸಂದರ್ಭಗಳೂ ಇರುತ್ತವೆ. ಹೊಸ ದಂಪತಿಗಳಿಗೆ 'ನೂರು ಮಕ್ಕಳಾಗಲಿ' ಎಂದು ಹರಸುವುದು ವಾಡಿಕೆ. ಸಂತಾನ ನಿಯಂತ್ರಣ ಕಾರ್ಯಕ್ರಮ ಹೆಚ್ಚು ಪ್ರಸಿದ್ಧಿಯಾಗಿರುವ ಈ ಕಾಲದಲ್ಲಿ ಇಂಥ ಹರಕೆ ಅಸಂಬದ್ಧವಾಗಿ ಕಾಣುತ್ತದೆ. ಹೀಗೆ ಬದಲಾಗದ ಮೌಲ್ಯಗಳನ್ನು ಉಳಿಸಿಕೊಂಡು ಬಂದರೂ ವ್ಯಾವಹಾರಿಕ ಜೀವನದಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿಕೊಂಡರೂ ಜಾನಪದವು ಸಮಕಾಲೀನ ಬದುಕಿಗೆ ಸಂಗತವಾಗಿ ರೂಪು ಪಡೆಯುತ್ತಾ ಹೋಗುತ್ತದೆ.

ಜಾನಪದವನ್ನು ಶೈಕ್ಷಣಿಕ ದೃಷ್ಟಿಯಿಂದ ವಿಶ್ಲೇಷಿಸುವುದರಿಂದ ಅದರ ಸೃಷ್ಟಿಕರ್ತ ಮತ್ತು ಅಭ್ಯಾಸಿ ಇಬ್ಬರಿಗೂ ಲಾಭ ಉಂಟು. ಅಧ್ಯಯನಕಾರರು ಜನರಿಂದ ಕಲಿಯುವುದು ಬಹಳ ಇರುತ್ತದೆ. ಅಂತೆಯೇ ಜನರು ಕೂಡ. ಆದರೆ ಜನರಿಗೆ ಬೋಧಿಸುವ ಹಕ್ಕು ಮಾತ್ರ ಅಧ್ಯಯನಕಾರರಿಗಿರುವುದಿಲ್ಲ. ಮಾನವ ಸಂಸ್ಕೃತಿ ಮತ್ತು ಸಮಾಜವನ್ನು ಕುರಿತು ಅಭ್ಯಾಸ ಮಾಡುವ ವಿಷಯಗಳಲ್ಲಿ ಜಾನಪದ ಬಹಳ ಮುಖ್ಯವಾದುದು. ಹಿಂದೆಂದಿಗಿಂತ ಈಗ ಜಾನಪದ ಸಾಮಗ್ರಿಯನ್ನು ವಿಪುಲವಾಗಿ ಕಲೆ ಹಾಕುವ ಅಗತ್ಯ ಬಹಳ ಇದೆ. ಎಷ್ಟೋ ಜಾನಪದ ರೂಪಗಳು ಇನ್ನೂ ಬೆಳಕು ಕಾಣದೆ ಹಾಗೆಯೇ ಇವೆ. ಇನ್ನೊಂದೆಡೆ ಎಷ್ಟೋ ಜಾನಪದ ರೂಪಗಳು ಸಾಮಾಜಿಕ ಬದಲಾವಣೆಯ ಒತ್ತಡಕ್ಕೊಳಗಾಗಿ ನಶಿಸಿ ಹೋಗುತ್ತಿವೆ. ಹಾಗಾಗುವುದಕ್ಕೆ ಮೊದಲು ಅವನ್ನು ಸಂಗ್ರಹಿಸುವ ಪ್ರಾಮಾಣಿಕ ಪ್ರಯತ್ನ ನಡೆಯಬೇಕಾಗಿದೆ.

ಜಾನಪದವನ್ನು, ಅದರ ಎಲ್ಲ ಮುಖಗಳನ್ನು, ಅದರ ಎಲ್ಲ ಅರ್ಥಗಳಲ್ಲಿ ಗ್ರಹಿಸಲು ಜನಪದ ಪರಂಪರೆಯ ಮಹತ್ವ ಏನೆಂಬುದನ್ನು ಅರಿತುಕೊಳ್ಳಬೇಕು. ಸಾಮಾನ್ಯ ಪರಂಪರೆ ಮತ್ತು ಶ್ರೇಷ್ಠ ಪರಂಪರೆ ಎಂದು ವಿಭಾಗ ಮಾಡುವುದು ತುಂಬಾ ಅಸಮರ್ಪಕ. ಇದಕ್ಕಾಗಿ ಕಂಠಸ್ಥ ಮಹಾಕಾವ್ಯಗಳನ್ನು ಅಭ್ಯಸಿಸಬೇಕು. ಮುಖ್ಯವಾಗಿ ವಾಲ್ಮೀಕಿ ರಾಮಾಯಣ, ಮಹಾಭಾರತಗಳನ್ನು ಆರಂಭದಿಂದ ಕೊನೆಯವರೆಗೆ ಅಭ್ಯಾಸ ಮಾಡಬೇಕು. ಜೊತೆಗೆ ಜನಪದ ಶಬ್ದರೂಪಗಳ-ನಿರೂಪಣೆಗಳ ಮಹತ್ವವನ್ನು ಮನಗಾಣಬೇಕು.

ಜಾನಪದ ಅಧ್ಯಯನಕಾರರು ಜಾನಪದವನ್ನು ಅಭ್ಯಾಸಮಾಡುವುದರಿಂದ ಜನರಿಗೆ ಹೆಚ್ಚು ಪ್ರಯೋಜನಗಳಾಗುತ್ತವೆ. ಶೈಕ್ಷಣಿಕ ಅಧ್ಯಯನಕ್ಕೆ ಅವನ್ನು ತೊಡಗಿಸುವುದರಿಂದ ಅದರ ಸೃಷ್ಟಿಕರ್ತರಿಗೆ ಅದರ ಬೆಲೆ ಏನೆಂಬುದು ತಿಳಿಯುತ್ತದೆ. ಆ ಪರಂಪರೆಯನ್ನು ಉಳಿಸಿಕೊಂಡು ಹೋಗುವುದರ ಮಹತ್ತ್ವದ ಬಗ್ಗೆ ಅರಿವುಂಟಾಗುತ್ತದೆ. ಗಮನಾರ್ಹ ಅಂಶವೆಂದರೆ ಈ ಬಗೆಯ ಅಧ್ಯಯನದಿಂದ ಜಾನಪದ ಸಾಮಗ್ರಿ ತನ್ನ ಮೊದಲಿನ ರೂಪವನ್ನು ಕಳೆದುಕೊಳ್ಳುವ ಸಂಭವವಿರುತ್ತದೆ. ಜಾನಪದ ಮೂಲಾಂಶಗಳು ಆಧುನಿಕ ಮೌಲ್ಯಗಳ ಸೇರ್ಪಡೆಯಿಂದಾಗಿ ಪರಿವರ್ತನೆಗೊಳ್ಳುತ್ತವೆ. ಎಲ್ಲಕ್ಕಿಂತ ಮುಖ್ಯವಾದ ವಿಚಾರವೆಂದರೆ ಜಾನಪದ ಅಧ್ಯಯನ ವಿದ್ಯಾವಂತರಿಗೆ ಶಿಕ್ಷಣ ನೀಡುವುದು. ಅಷ್ಟೇ ಅಲ್ಲ, ಅವರಿಗೆ ತಮ್ಮ ಪರಂಪರೆಯ, ಸಂಸ್ಕೃತಿಯ ಬಗೆಗೆ ಗೌರವ ಮೂಡುವಂತೆ ಮಾಡುತ್ತವೆ. ಆ ಮೂಲಕ ಜನ ತಮ್ಮನ್ನು ತಾವೇ ಗೌರವಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತವೆ; ವಿನಾಕಾರಣ ಜನರ ತಿರಸ್ಕಾರಕ್ಕೆ ಗುರಿಯಾದ ಪರಂಪರೆಯ ಬಗ್ಗೆ ಸದ್ಭಾವನೆಯನ್ನು ಹುಟ್ಟಿಸುತ್ತದೆ. ಇಂದು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಲಿತವಿರುವ ಎಷ್ಟೋ ಕಲೆಗಳು ಯೋಗ್ಯ ಪ್ರೋತ್ಸಾಹವಿಲ್ಲದೆ ಮೂಲೆಗುಂಪಾಗುತ್ತಿವೆ. ಅದರಲ್ಲೂ ವೃತ್ತಿಗಾಯಕರು ತಮ್ಮ ಜೀವನೋಪಾಯವಾಗಿದ್ದ ಹಾಡುಗಾರಿಕೆ ವೃತ್ತಿಯನ್ನು ಕೈಬಿಟ್ಟು ಬೇರೆ ವೃತ್ತಿಯನ್ನು ಅವಲಂಬಿಸುತ್ತಿರುವ ನಿದರ್ಶನಗಳು ಹಲವಿವೆ. ಹೀಗೆ ಕಲೆಯಿಂದ ಜೀವನ

ನಡೆಸುವುದು ದುರ್ಭರವೆನಿಸಿ ಅನೇಕರು ಕಲೆಯನ್ನು ಕೈಬಿಡುತ್ತಿದ್ದಾರೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಸರ್ಕಾರ ಕಲಾವಿದರ ಹೊಟ್ಟೆಪಾಡಿಗೆ ಸುಗಮದಾರಿ ಕಲ್ಪಿಸಿ ಆ ಮೂಲಕ ಕಲೆಯನ್ನು ಪ್ರೋತ್ಸಾಹಿಸಿದರೆ ಕಲೆಗಳು ಉಳಿದುಬರುವುದು ಸಾಧ್ಯ.

ಜಾನಪದದ ವ್ಯಾವಹಾರಿಕ ಪ್ರಯೋಜನಗಳು ಮೇಲಿನವಕ್ಕಿಂತ ಭಿನ್ನ. ಜಾನಪದ, ಯಾವತ್ತೂ ತನಗೆ ತಾನೆ ಬದಲಾವಣೆಯನ್ನು ನಿರೀಕ್ಷಿಸುವುದಿಲ್ಲ (ಇಲ್ಲಿ ಜಾನಪದ ಹಳೆಯದು, ಆಧುನೀಕರಣವಾಗಬೇಕೆಂಬ ಅಭಿಪ್ರಾಯವಿಲ್ಲ). ಜನಜೀವನದಲ್ಲಿ ಅದು ಸರ್ವವ್ಯಾಪಿ. ಆದ್ದರಿಂದಲೇ, ಇಂದು, ಮಾನವ ಬದುಕಿನ ಹಲವು ಕ್ಷೇತ್ರಗಳಲ್ಲಿ ಅದರ ಉಪಯೋಗ ಪಡೆದುಕೊಳ್ಳುವಂತೆ, ವೈದ್ಯಕೀಯ ಕ್ಷೇತ್ರದಲ್ಲೂ ಕಾರ್ಯಕ್ರಮಗಳ ಪ್ರಚಾರಕ್ಕಾಗಿ ಜಾನಪದವನ್ನು ಹೇರಳವಾಗಿ ಬಳಸಿಕೊಳ್ಳಲಾಗುತ್ತಿದೆ. ಇದರಿಂದ ಜನರ ನೋವು, ಸಂಕಷ್ಟಗಳನ್ನು ದೂರಮಾಡಲು ಸಾಧ್ಯ ಎಂಬುದು ಮನವರಿಕೆಯಾಗಿದೆ. ಮಹತ್ತ್ವದ ಜನಪದ ಸಂಪ್ರದಾಯಾಚರಣೆಗಳನ್ನು ಸರ್ಕಾರದ ಕಾರ್ಯಕ್ರಮಗಳ ಪ್ರಸಾರದಲ್ಲಿ ಬಳಸಿಕೊಂಡರೆ ಆ ಕಾರ್ಯಕ್ರಮಗಳು ಬಹುಬೇಗ ಜನರನ್ನು ತಲುಪುವ ಸಾಧ್ಯತೆಯಿದೆ. ಅವೈಜ್ಞಾನಿಕ ರೀತಿಯಲ್ಲಿ ತನ್ನ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ಯತ್ನಿಸಿ ವಿಫಲವಾಗಿರುವ ಸರ್ಕಾರ ಈ ದಿಸೆಯಲ್ಲಿ ಹೆಜ್ಜೆಯಿಡಬೇಕಾಗಿದೆ. ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮೊದಲು ಜನರಲ್ಲಿ ಮನೆಮಾಡಿರುವ ಮೂಢನಂಬಿಕೆಗಳನ್ನು ತೊಲಗಿಸಲು ಸೂಕ್ತ ಪ್ರಚಾರ ವ್ಯವಸ್ಥೆ ಮಾಡಬೇಕು. ಇತ್ತೀಚೆಗೆ, ಸರಕಾರ ಕೋಳಿಸಾಕಾಣಿಕೆಯಲ್ಲಿ ಅಳವಡಿಸಿಕೊಂಡಿರುವ ಅತ್ಯಾಧುನಿಕ ಕ್ರಮದಿಂದಾಗಿ ಕೋಳಿಕಾಲುಗಳು ಬಿಳಿಬಣ್ಣಕ್ಕೆ ತಿರುಗಿರುವುದು ಅಪಶಕುನದ ಸೂಚನೆ ಎಂದು ಜನ ತಿಳಿದಿದ್ದಾರೆ. ಇಂತಹ ನಂಬಿಕೆಗಳನ್ನು ತೊಲಗಿಸಲು ಸರ್ಕಾರ ಯತ್ನಿಸಬೇಕು. ಇವತ್ತು ಯಾವ ಮಾಧ್ಯಮಗಳು (ದೂರದರ್ಶನ, ಚಲನಚಿತ್ರ) ಜಾನಪದದ ವಿನಾಶಕ್ಕೆ ಮೂಲವಾಗಿವೆಯೋ ಅದೇ ಮಾಧ್ಯಮಗಳಲ್ಲಿ ಜಾನಪದವನ್ನು ಪರಿಣಾಮಕಾರಿ ರೀತಿಯಲ್ಲಿ ಬಳಸಿಕೊಳ್ಳಲು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಜಾನಪದವನ್ನು ಜೀವಂತಗೊಳಿಸಲು, ಹೊಸಜೀವನ ಮೌಲ್ಯಗಳನ್ನು ಜಾನಪದಕ್ಕೆ ಹಾಯಿಸಲು, ಹೊಸ ಸಮಸ್ಯೆಗಳನ್ನು ಯುಕ್ತ ರೀತಿಯಲ್ಲಿ ಪರಿಚಯಿಸಿ ಜನರನ್ನು ಜಾಗೃತಗೊಳಿಸಲು, ಭಾರತೀಯ ಸಮಾಜ ಜೀವನದ ಬೇರೆ ಬೇರೆ ಮುಖಗಳನ್ನು ಪರಿಚಯಿಸಲು ಜಾನಪದ ಅಧ್ಯಯನ ತೀವ್ರಗೊಳ್ಳಬೇಕಿದೆ. ಜನಪದ ಸಂಸ್ಕೃತಿಯ ಪ್ರಸಾರ, ಸಂಗ್ರಹ–ಅಧ್ಯಯನ ಸಮಗ್ರವಾಗಿ ನಡೆಯಬೇಕಾಗಿದೆ.

ಪ್ರಚಾರ ಮಾಧ್ಯಮವಾಗಿ ಜಾನಪದವನ್ನು ಬಳಸುವುದು ಈಗ ಹೆಚ್ಚು ಚಾಲ್ತಿಗೆ ಬಂದಿದೆ. ಚುನಾವಣಾ ಪ್ರಚಾರಕಾರ್ಯಗಳಿಗೆ, ಕುಟುಂಬ ಕಲ್ಯಾಣ ಮತ್ತು ಸಂತಾನ ನಿಯಂತ್ರಣ ಯೋಜನೆಗಾಗಿ, ಸಾಮಾಜೀಕರಣಕ್ಕಾಗಿ ಜಾನಪದವನ್ನು ಹೆಚ್ಚಾಗಿ ಬಳಸಿಕೊಳ್ಳಲಾಗುತ್ತಿದೆ. ಈ ಬಳಕೆ ಸಮರ್ಪಕವಾಗಿ ಆಗುತ್ತಿಲ್ಲವಾದ್ದರಿಂದ ಕೆಲವು ದುಷ್ಪರಿಣಾಮಗಳು ಕಾಣಿಸಿಕೊಂಡಿವೆ :

(೧) ವಾಸ್ತವವಾಗಿ, ಪ್ರಚಾರಸಾಧನವಾಗಿ ಜಾನಪದ ಹೆಚ್ಚು ಯಶಸ್ವಿಯಾಗುವುದು ಸಂಶಯಾಸ್ಪದ. ಜಾನಪದದ ಅಗಾಧತೆಯಿಂದಾಗಿ ಅವರ ವಸ್ತುವಿಷಯಗಳು ಸಂದಿಗ್ಧವಾಗಿವೆ ; ದೇಶದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಅರ್ಥಗಳನ್ನು ಹೊಂದಿವೆ. ಹೊಸ ಅರ್ಥಗಳನ್ನು ಕಂಡುಕೊಳ್ಳಲು ಅವನ್ನು ನಿಜವಾದ ಸಂದರ್ಭದಿಂದ ಬೇರ್ಪಡಿಸಿದರೆ ತೀವ್ರತರವಾದ ತಪ್ಪು ಕಲ್ಪನೆಗಳಿಗೆ ದಾರಿ ಮಾಡಿಕೊಂಡಂತಾಗುತ್ತದೆ.

(೨) 'ಕಲ್ಪಿತ' (ಘನಪದ) ಜಾನಪದದೊಂದಿಗೆ ಸಂಸ್ಕೃತಿ ಪ್ರವಾಹವನ್ನು ಹರಿಸಹೋದರೆ ಶುದ್ಧ ಜಾನಪದ ದುರ್ಬಲಗೊಳ್ಳುತ್ತದೆ. ಅಷ್ಟೇ ಅಲ್ಲ, ನಿಜವಾದ ಜಾನಪದವನ್ನು ಕೊಂದಂತೆಯೇ ಸರಿ.

ಈ ಹಿನ್ನೆಲೆಯಲ್ಲಿ ಹೇಳುವುದಾದರೆ, ಒಟ್ಟಾರೆಯಾಗಿ ಜಾನಪದ ತನಗೆ ತಾನೆ ಎಂದೂ ತೀಕ್ಷ್ಣವಾಗಿರಲು ಅಪೇಕ್ಷಿಸಿಲ್ಲ ; ಸಂಗತವಾಗಿರಲು ಉದ್ದೇಶಿಸಿಲ್ಲ. ಈ ಕಾರಣಕ್ಕಾಗಿ ಅದರ ಸಾಮಾಜಿಕ ಮತ್ತಿತರ ಬಗೆಯ ಪ್ರಯೋಜನಗಳನ್ನು ವಿವರಿಸುವುದು ಕಷ್ಟಸಾಧ್ಯದ ಕೆಲಸ. ಏನೇ ಇರಲಿ, ಮಾನವ ನಾಗರಿಕತೆ ಸರಪಳಿಯ ಒಂದುಕೊಂಡಿಯಾಗಿರಲು ಜಾನಪದ ಅತ್ಯವಶ್ಯಕ.

ಕೆ. ಎಸ್. ರಾಮಕೃಷ್ಣರಾವ್

ಸಾಕ್ರಟೀಸ್ ಮತ್ತು ಪ್ಲೇಟೋ

ಸಾಕ್ರಟೀಸ್

ಕ್ರಿ.ಪೂ. 5 ನೇ ಶತಮಾನದ ಅಂತ್ಯಭಾಗದಲ್ಲಿ ಗ್ರೀಸ್ ದೇಶದಲ್ಲಿ ಕಂಡು ಬಂದ ಅವ್ಯವಸ್ಥೆ, ಅನಾಯಕತ್ವ, ಧಾರ್ಮಿಕ ಮತ್ತು ಜ್ಞಾನ ಪ್ರಪಂಚದ ಶೂನ್ಯವಾದವನ್ನು ಸರಿಪಡಿಸಿ ಜನರಿಗೆ ನವೀನವಾದ ಮತ್ತು ನ್ಯಾಯವಾದ ಮಾರ್ಗವೊಂದನ್ನು ತೋರಿಸಿ ಕೊಡುವ ಅವಶ್ಯಕವಿದ್ದಿತು. ಈ ಸಂದಿಗ್ಧ ಸಂದರ್ಭದಲ್ಲಿ ಸಾಕ್ರಟೀಸ್‌ನು ಜನ್ಮವೆತ್ತಿದನು. ಈತನ ಮನೋಭಾವನೆಗಳು, ಧ್ಯೇಯಗಳು ಪಾಶ್ಚಾತ್ಯ ನಾಗರಿಕತೆ ಮತ್ತು ಜ್ಞಾನೋದಯಕ್ಕೆ ಕಾರಣವಾಯಿತು.

ಸಾಕ್ರಟೀಸನು ಕ್ರಿ ಪೂ. 469 ನೇ ವರ್ಷದಲ್ಲಿ ಅಥೆನ್ಸ್ ನಗರದಲ್ಲಿ ಬಡ ತಂದೆ ತಾಯಿಗಳ ಮಗನಾಗಿ ಹುಟ್ಟಿದನು. ಇವನ ತಾಯಿ ಸೂಲಗಿತ್ತಿ, ತಂದೆ ಶಿಲ್ಪಿ. ಈತನು ಯಾವ ವಿಧದಲ್ಲಿ ವಿದ್ಯಾಭ್ಯಾಸ ಪಡೆದನೆಂಬುದು ನಮಗೆ ತಿಳಿಯದು. ಆದರೆ ಈತನು ಹೊಂದಿದ್ದ ಅಪಾರ ಜ್ಞಾನದಿಂದ ಇವನಿಗೆ ಒಳ್ಳೆಯ ಪಂಡಿತರಿಂದ, ವಿದ್ವಾಂಸರಿಂದ ಮಾರ್ಗದರ್ಶನ ದೊರೆತಿರಬಹುದೆಂದು ಭಾವಿಸಬಹುದು. ಸಾಕ್ರಟೀಸನು ಪ್ರಾರಂಭದಲ್ಲಿ ತಂದೆಯ ವೃತ್ತಿಯನ್ನು ಅವಲಂಬಿಸಿದ್ದನು. ಸ್ವಲ್ಪಕಾಲದಲ್ಲಿಯೇ ಒಂದು ಉನ್ನತ ಧ್ಯೇಯದ ಆಶಾಭಾವನೆಯಿಂದ ತನ್ನ ತಂದೆಯ ವೃತ್ತಿಯನ್ನು ತ್ಯಜಿಸಿದನು. ಆ ಉನ್ನತ ಧ್ಯೇಯವು ಇತರರನ್ನು ಪ್ರಶ್ನೆ ಮಾಡುತ್ತಾ ತನ್ನ ತಿಳುವಳಿಕೆಯನ್ನು ಸರಿಪಡಿಸಿಕೊಳ್ಳಬೇಕು ಎಂಬುದು. ಈ ಆಸೆಯು ಹೃದಯದಲ್ಲಿ ಸ್ಫೂರ್ತಿಗೊಳ್ಳುತ್ತಲೇ ತನ್ನ ವೃತ್ತಿಯನ್ನು ತ್ಯಜಿಸಿ ಆ ಉನ್ನತ ಧ್ಯೇಯ ಸಾಧನೆಗೆ ಪ್ರಯತ್ನಪಟ್ಟನು. ಈತನು ಅಥೆನ್ಸ್‌ನ ರಾಜಬೀದಿಗಳಲ್ಲಿ, ಪೇಟೆ ಬೀದಿಗಳಲ್ಲಿ, ವ್ಯಾಯಾಮ ಶಾಲೆಗಳಲ್ಲಿ ಗಂಡಸರು, ಹೆಂಗಸರು ಧನಿಕರು, ದರಿದ್ರರು, ಜ್ಞಾನಿಗಳು, ಸಾಮಾನ್ಯರೆಂಬ ಭೇದಭಾವವಿಲ್ಲದೆ ಎಲ್ಲಾ ವರ್ಗದ, ಜನರೊಡನೆ ತರ್ಕ-ಮಾಡುತ್ತಾ ಪ್ರಶ್ನೆಯ ಮೇಲೆ ಪ್ರಶ್ನೆ ಹಾಕುತ್ತಿದ್ದನು. ನೀತಿ, ಧರ್ಮ, ಮತ, ವಿದ್ಯೆ, ಕಲಾಕೌಶಲ್ಯ, ವಾಣಿಜ್ಯ, ವಿಧವಿಧವಾದ ಕಸಬುಗಳು, ರಾಜ್ಯ ವಿಚಾರಗಳು, ವಿಜ್ಞಾನ, ಕಾವ್ಯ, ಚರಿತ್ರೆ, ಮಮತೆ, ಪ್ರಾಮಾಣಿಕತೆ, ಸಮಾಜ ಸಂಸ್ಥೆ

ಗಳು, ಜನಜೀವನದ ಸಮಸ್ತ ವಿಧವಾದ ಇಹ-ಪರಗಳು, ಆಶಯಗಳು ಇವೆಲ್ಲಾ ಸಾಕ್ರೆಟೀಸ್‌ನ ಚರ್ಚಾಂಶಗಳಾಗಿದ್ದವು. ಶೀಲ ವಿಚಾರಗಳಲ್ಲಂತೂ ಈ ಚರ್ಚೆಗಳು ಪ್ರಾಮುಖ್ಯ ಪಡೆದಿದ್ದವು. ಸಾಕ್ರೆಟೀಸನು ಬಹು ತೀಕ್ಷ್ಣ ಬುದ್ಧಿಯುಳ್ಳವನು, ಮೇಧಾವಿಯಾಗಿದ್ದನು. ಚರ್ಚಾಂಶದ ವಿಷಯದ ತಿರುಳನ್ನು ಹೊರಗೆಡಹುವವರೆಗೆ ವಾದವನ್ನು ಬಿಡುತ್ತಿರಲಿಲ್ಲ. ಸಾಧು ಹೃದಯನು, ನಮ್ರಶೀಲನೂ ಆಗಿದ್ದನು. ಕುತರ್ಕಿಗಳಾದ ಸೋಫಿಷ್ಟರ ತರ್ಕಾಭಾಸಗಳನ್ನು, ಅಲ್ಪಬುದ್ಧಿಯನ್ನು ಬಹಿರಂಗಪಡಿಸದ ಹೊರತು ಸುಮ್ಮನಾಗುತ್ತಿರಲಿಲ್ಲ.

ತಾನು ಬೋಧಿಸಿದ ಸೌಜನ್ಯ, ಸೌಹಾರ್ದ, ಸುಗುಣಗಳನ್ನೆಲ್ಲಾ ಸಾಕ್ರೆಟೀಸನು ತನ್ನ ಸ್ವಂತ ಜೀವನದಲ್ಲಿ ಆಚರಿಸಿ ಸರ್ವರಿಗೂ ತಿಳಿಯುವಂತೆ ಉದಾಹರಿಸುತ್ತಿದ್ದನು. ಈತನ ಘನತೆ, ಬುದ್ಧಿಯ ಮಟ್ಟ, ಮನೋವೈಶಾಲ್ಯ, ಇಂದ್ರಿಯ ನಿಗ್ರಹ, ಕಷ್ಟ ಸಹಿಷ್ಣುತೆ, ಉದಾರ ಬುದ್ಧಿಗಳಲ್ಲಿ ಇದುವರೆಗೆ ತತ್ವಶಾಸ್ತ್ರ ಚರಿತ್ರೆಯಲ್ಲಿ ಈತನನ್ನು ಮೀರಿಸಿದವರೇ ಇಲ್ಲವೆಂದು ಹೇಳಬಹುದು. ಈತನು ಬದುಕಿದ್ದ 70 ವರ್ಷಗಳ ಜೀವಮಾನದಲ್ಲಿ ರಾಜ ಕಾರ್ಯಗಳಲ್ಲಿಯೂ, ಯುದ್ಧ ರಂಗಗಳಲ್ಲಿಯೂ, ಸ್ವಂತ ವ್ಯವಹಾರಗಳಲ್ಲಿಯೂ ತನ್ನ ಮಾನಸಿಕ ಧೈರ್ಯ-ಸ್ಥೈರ್ಯಗಳನ್ನು ಸಂಪೂರ್ಣವಾಗಿ ವ್ಯಕ್ತಪಡಿಸಿದನು. ಆ ಕಾಲದಲ್ಲಿ ಈತನು ತೋರ್ಪಡಿಸಿದ ಆತ್ಮಗೌರವ, ಬುದ್ಧಿ ಸ್ಥೈರ್ಯವು, ನಿಶ್ಚಲ ವರ್ತನೆಯು, ನ್ಯಾಯ ಪಕ್ಷಪಾತವು ಮತ್ತು ನಿರ್ಮಲ ಮನಸ್ಸು, ಪ್ರಾಣಿ ಸಮಸ್ತಕ್ಕೂ ಮಂಗಳವಾಗಬೇಕೆಂಬ ತೀಕ್ಷ್ಣ ಆಕಾಂಕ್ಷೆಯು ಸಮಸ್ತ ಲೋಕವನ್ನೇ ಬೆರಗುಗೊಳಿಸುತ್ತವೆ. ಸಾಕ್ರೆಟೀಸನು ತನ್ನ ಜೀವಮಾನದಲ್ಲಿ ಎಷ್ಟು ಸುಗುಣಿಯಾಗಿ ಬದುಕಿದ್ದನೋ, ಅಂತ್ಯ ಕಾಲದಲ್ಲಿಯೂ ಅಷ್ಟೇ ಸುಂದರವಾದ ರೀತಿಯಲ್ಲಿ ಮರಣ ಹೊಂದಿದನು. ತನ್ನ ಸ್ವದೇಶಿಯರೇ ಈತನನ್ನು ನಾಸ್ತಿಕನೆಂದು, ಯುವಕರನ್ನು ದುರ್ಮಾರ್ಗಕ್ಕೆ ಎಳೆದನೆಂದು ದೋಷಾರೋಪಣೆ ಮಾಡಿ ವಿಷವನ್ನು ಕುಡಿಸಿದರು. ಸಾಕ್ರೆಟೀಸನು ಕಾರಾಗೃಹದಲ್ಲಿರುವಾಗ ತಪ್ಪಿಸಿಕೊಂಡು ಹೋಗುವುದು ಸಾಧ್ಯವೆಂದು, ಹಾಗೆ ಮಾಡುವುದು ಕ್ಷೇಮಕರವೆಂದು ಸ್ನೇಹಿತರು ಉಪದೇಶ ಮಾಡಿದಾಗ ಸಾಕ್ರೆಟೀಸನು ಅದಕ್ಕೆ ಒಪ್ಪದೇ ತಾನು ಬದುಕಿರುವವರೆಗೆ ದೇಶದ ಕಾನೂನುಗಳಿಂದ ರಕ್ಷಣೆ ಪಡೆಯುತ್ತಿರುವುದರಿಂದ, ಈಗ ಸಾಯುವ ಕಾಲದಲ್ಲಿ ಆ ಕಾಯಿದೆ, ಕಾನೂನುಗಳಿಗೆ ಅಗೌರವ ತರಬಾರದೆಂದು ಹೇಳಿ ಸಂತೋಷದಿಂದ ಸಾವನ್ನು ಸ್ವಾಗತಿಸಿದನು. ಮರಣ ಸನ್ನಿಹಿತವಾದಾಗಲೂ ಕೂಡ ತನ್ನ ಸ್ನೇಹಿತರಿಗೆ ಶ್ರೇಷ್ಠ ಜ್ಞಾನವನ್ನು ಬೋಧಿಸುತ್ತಾ ಪ್ರಾಣ ಬಿಟ್ಟನು. ಇದರಿಂದ ರಾಜ್ಯದ ಅಧಿಕಾರಿಗಳಿಗೆ ಸನ್ಮಾನ ತೋರಿಸಬೇಕೆಂದು ತನ್ನ ದೇಶದ ಕಾನೂನುಗಳಿಗೆ ಗೌರವ ಕೊಡಬೇಕೆಂದು, ದೇಶ ಭಕ್ತಿಯನ್ನು ಆಚರಣೆಯಲ್ಲಿಡಬೇಕೆಂದು ತನ್ನ ಜೀವಿತಕಾಲದಲ್ಲಿ ಉಪದೇಶಿಸಿದಂತೆ ಮರಣ ಕಾಲದಲ್ಲಿಯೂ ಘಂಟಾಘೋಷವಾಗಿ ಘೋಷಿಸಿದನು.

ಸಾಕ್ರಟೀಸ್‌ನು ನಾಗರಿಕ ಗ್ರೀಕ್ ಪ್ರಪಂಚದ ಪ್ರಥಮ ಗುರುವಾದರೂ ತನ್ನ ಬೋಧನೆಯ ವಿಚಾರವಾಗಿ ತಾನೇ ಸ್ವಂತವಾಗಿ ಏನನ್ನೂ ಬರೆದಿಡಲಿಲ್ಲ. ಆತನನ್ನು ಕುರಿತು ಆತನ ಜೀವನದ ಬಗ್ಗೆ ತಿಳಿಸುವವರು ಇಬ್ಬರೇ. ಅವರುಗಳು ಜೆನೋಫೆನ್ ಮತ್ತು ಪ್ಲೇಟೋ. ಪ್ಲೇಟೋ ಚಿತ್ರ ವಿದ್ಯೆಯಲ್ಲಿ, ನಿರ್ಮಾಣ ಕಲೆಯಲ್ಲಿ ಜೆನೋಫೆನ್‌ನಿಗಿಂತ ಅತಿ ಕುಶಲನು. ಈತನು ತನ್ನ ಸಂಭಾಷಣೆಗಳಲ್ಲೆಲ್ಲಾ ಸಾಕ್ರಟೀಸನನ್ನೇ ನಾಯಕನನ್ನಾಗಿ ಮಾಡಿದನು. ಎಷ್ಟೋ ಕಡೆ ಆತನ ಬೋಧನೆಗೆ ಬಣ್ಣ ಕಟ್ಟುವವನೆಂದು ಅನೇಕ ವೇಳೆ ತನ್ನ ಸ್ವಂತ ಸಿದ್ಧಾಂತಗಳನ್ನು ನೆಪಮಾತ್ರ ಗುರುವಿನ ಬಾಯಲ್ಲಿ ಹೇಳಿಸಿರುವನೆಂದೂ ಸಂಶಯಪಟ್ಟು ಇದುವರೆಗೂ ಚರಿತ್ರಕಾರರೂ, ತತ್ವ ವಿಮರ್ಶಕಾರರೂ ಪ್ಲೇಟೋವಿನ ಸಾಕ್ಷ್ಯವನ್ನು ಕಡೆಗಣಿಸಿ ಜೆನೋಫೆನ್‌ನ ಮಾತನ್ನೇ ನಿಜವೆಂದು ನಂಬಿದ್ದರು. ಇತ್ತೀಚೆಗೆ ಪ್ಲೇಟೋವಿನ ನಿರೂಪಣೆಗೆ ಮಾನ್ಯತೆ ಉಂಟಾಯಿತು. ಏಕೆಂದರೆ ಜೆನೋಫೆನ್‌ನು ಸಾಕ್ರಟೀಸನ ಜೊತೆಯಲ್ಲಿ ಕೇವಲ ಸ್ವಲ್ಪ ದಿನಗಳಿದ್ದನೆಂದು ಪ್ಲೇಟೋ ಸಾಕ್ರಟೀಸನ ವಿಷಯವನ್ನು ಸರಿಯಾಗಿ ಅರಿತಿರುವನೆಂದು ಅನೇಕರು ವಾದಿಸಿರುವರು. ಹೀಗೆ ವಾದ ಮಾಡಿದವರಲ್ಲಿ ಇಂಗ್ಲೆಂಡಿನ ಟೇಲರ್, ಜಾನ್ ಬರ್ನೆಟ್, ಅಮೆರಿಕಾದ ಎ. ಕೆ. ರೊಜರ್ಸ್ ಮುಂತಾದವರು ಪ್ರಮುಖರು.

ಸಾಕ್ರಟೀಸ್‌ನ ಸಮಸ್ಯೆಗಳು

ಸೋಫಿಸ್ಟರು ಯಾವ ವಿಧವಾದ ಸಿದ್ಧಾಂತ ಜ್ಞಾನವೂ ಸಾಧ್ಯವಿಲ್ಲವೆಂದು ಸಾಧಿಸಿದರು. ಇವರಿಂದ ಧರ್ಮ, ಆಚರಣೆ, ರಾಜ್ಯ ಮತ್ತು ಸಾಮಾಜಿಕ ಸಂಸ್ಥೆಗಳ ವಿಷಯದಲ್ಲಿ ನಿಶ್ಚಿತ ಜ್ಞಾನ ಸಾಧ್ಯವಿಲ್ಲವೆಂದು ಬೋಧಿಸಿದರು. ಸಾಕ್ರಟೀಸ್ ಈ ವಿಧವಾದ ಬೋಧನೆಯನ್ನು ಖಂಡಿಸಿದನು. ಸರಿಯಾದ ಪ್ರಯತ್ನದಿಂದ ಸಿದ್ಧಾಂತಜ್ಞಾನವನ್ನು ಪಡೆಯಬಹುದೆಂಬುದನ್ನು ತೋರಿಸಿಕೊಟ್ಟು ಆ ಮೂಲಕ ಜನರನ್ನು ಸನ್ಮಾರ್ಗಪ್ರವರ್ತಕರು, ಸತ್ಯಸಂಕಲ್ಪವುಳ್ಳವರು ಆಗುವಂತೆ ಮಾಡುವುದೇ ಸಾಕ್ರಟೀಸನ ಉದ್ದೇಶವಾಗಿದ್ದಿತು. ಆ ಕಾಲದಲ್ಲಿ ಪ್ರಚಲಿತವಾಗಿದ್ದ ಅನ್ಯಾಯ, ಅವ್ಯವಸ್ಥೆ, ಅನಾಯಕತ್ವ ಇವುಗಳಿಗೆ ವಿರುದ್ಧವಾಗಿ ತನ್ನ ಬೋಧನೆಗಳನ್ನು ಬೋಧಿಸಿದನು.

ಸತ್ಯ ಜ್ಞಾನವಿಲ್ಲನೆಂದೂ ಅದು ಇದ್ದರೂ ತಿಳಿಯಲಾಗುವುದಿಲ್ಲವೆಂದೂ ಸೋಫಿಸ್ಟರು ವಾದಿಸಿದ್ದರು. ಯಾವ ವಿಷಯದಲ್ಲಿಯೂ ಸರ್ವಸಮ್ಮತವಾದ ಅಭಿಪ್ರಾಯವಿಲ್ಲ. ಒಬ್ಬರ ಮತ ಮತ್ತೊಬ್ಬರ ಮತಕ್ಕೆ ವಿರುದ್ಧವಾಗಿರುತ್ತದೆ; ಅಭಿಪ್ರಾಯಗಳು ಒಂದರಂತೆ ಇನ್ನೊಂದು ಇರುವುದು ಅಪರೂಪ. ಈ ಕಲ್ಪನೆಯು ನಿಜ. ಆದರೆ ಈ ದೃಷ್ಟಿಯಿಂದ ಯಥಾರ್ಥ ಜ್ಞಾನವೇ ಇಲ್ಲವೆಂದು ಹೇಳುವುದು ಸರಿಯಲ್ಲ. ಲೋಕದಲ್ಲಿ ಭಿನ್ನಾಭಿಪ್ರಾಯವಿದ್ದರೂ ಈ ಭಿನ್ನಾಭಿಪ್ರಾಯಗಳ ಮೂಲದಲ್ಲಿ ಒಂದು ಏಕಮತವಿದ್ದೇ ಇರುತ್ತದೆ. ಈ ಏಕಮತವು ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಳ್ಳುವ ಎಲ್ಲರ ಅನುಭವಕ್ಕೂ ಸಿಕ್ಕಬಹುದಾದ ಸರ್ವಸಾಮಾನ್ಯ ತತ್ವವಾಗಿರುತ್ತದೆ. ಇಂತಹ (ಸರ್ವ

ಸಮ್ಮತವಾದ) ಸರ್ವಸಾಮಾನ್ಯವಾದ ಪ್ರಮೇಯಗಳನ್ನು ವಿಚಾರದ ಮೂಲಕ ಶೋಧಿಸಿ, ಕಂಡುಹಿಡಿದು ಜ್ಞಾನಾಭಿವೃದ್ಧಿ ಹೊಂದುವುದು ಸಾಧ್ಯವೆಂದು ತೋರಿಸುವುದು ಸಾಕ್ರಟೀಸನ ತೀವ್ರ ಆಕಾಂಕ್ಷೆಯಾಗಿದ್ದಿತು.

ಸಾಕ್ರಟೀಸನ ವಾದ ವಿಧಾನ

ಈತನ ವಾದ ವಿಧಾನವು ಬಹು ಯುಕ್ತಿಪೂರ್ಣವಾದುದು, ಸ್ವಾರಸ್ಯವಾದುದು. ಚರ್ಚೆ ಮಾಡಬೇಕೆಂದಿರುವ ವಿಷಯಗಳ ರಹಸ್ಯಗಳೆಲ್ಲವನ್ನು ಅನೇಕ ವೇಳೆ ಮೊದಲೇ ತಾನು ತಿಳಿದಿದ್ದರೂ, ತಿಳಿಯದವನಂತೆ ವರ್ತಿಸಿ, ಎದುರಾಳಿಗಳನ್ನು ತನಗೆ ತಿಳಿಸಿಕೊಡಬೇಕೆಂದು ಪ್ರಾರ್ಥಿಸಿ ಪ್ರಶ್ನೆ ಮಾಡಲು ಪ್ರಾರಂಭಿಸಿ ಅವರ ಉತ್ತರಗಳಲ್ಲಿರಬಹುದಾದ ಹುಳುಕುಗಳನ್ನು ಒಂದೊಂದಾಗಿ ಆರಿಸಿ ಪುನಃ ಅವುಗಳ ಮೇಲೆ ಪ್ರಶ್ನೆ ಮಾಡುತ್ತಾ ಮೊದಲು ಅವರಿತ್ತ ಉತ್ತರಕ್ಕೂ, ಎರಡನೇ ಉತ್ತರಕ್ಕೂ ಇರಬಹುದಾದ ಅಸಮಂಜಸತೆಯನ್ನು ತೋರಿಸಿಕೊಡುತ್ತಾ ಈ ರೀತಿಯಲ್ಲಿ ತನ್ನ ಎದುರಾಳಿಗಳು ತಾವೇ ತಲೆಬಾಗುವಂತೆ ಮಾಡಿ ಈ ಮಧ್ಯೆ ತನ್ನ ವಿಚಾರ ಧಾರೆಯು ಹೇಗೆ ಸಕಲ ವಿಧವಾದ ನ್ಯೂನತೆ ಅತಿರೇಕಗಳನ್ನು ದಾಟಬಲ್ಲದೆಂದು ಸಾಧಿಸಿ ವ್ಯಕ್ತಗೊಳಿಸುತ್ತಿದ್ದನು. ಸಾಧಾರಣವಾಗಿ ಜನಸಾಮಾನ್ಯರು ನಿಜವೆಂದು ನಂಬಿರುವ, ವಿಮರ್ಶೆ ಮಾಡಲ್ಪಡದಿರುವ ಮುಸುಕಿನ ಭಾವಗಳನ್ನು ಆರಂಭದಲ್ಲಿ ಹಾಕಿಕೊಂಡು ಅವರ ಯಥಾರ್ಥಜ್ಞಾನವನ್ನು ತಿಳಿಯಪಡಿಸುವ ಸಲುವಾಗಿ ಜನಜೀವನದಲ್ಲಿ ದೊರೆಯಬಹುದಾದ ಸಾಮಾನ್ಯ ಉದಾಹರಣೆಗಳನ್ನು ಕೊಟ್ಟು ನ್ಯಾಯವೆನಿಸಲ್ಪಟ್ಟಿರುವ ಆ ಭಾವ ಅನೇಕ ಸಂದರ್ಭಗಳಲ್ಲಿ ಹೇಗೆ ಅಪಾರ್ಥವಾಗಿ ಪರಿಣಮಿಸುತ್ತದೆ ಎಂಬುದನ್ನು ಸ್ಪಷ್ಟಪಡಿಸಿ ಈ ಕಾರಣದಿಂದ ಆ ಭಾವವನ್ನು ಯಾವ ರೀತಿಯಲ್ಲಿ ತಿದ್ದಿಕೊಳ್ಳಬೇಕೆಂಬುದನ್ನು ಸೂಚಿಸಿ ಕಡೆಯಲ್ಲಿ ಯಥಾರ್ಥ ಅಂಶ ಹೊರ ಬೀಳುವವರೆಗೂ ಸಾಕ್ರಟೀಸನು ಚರ್ಚೆಯನ್ನು ಬಿಡುತ್ತಿರಲಿಲ್ಲ.

ಸಾಕ್ರಟೀಸನ ವಾದ ವಿಧಾನದ ಮುಖ್ಯಾಂಶಗಳು

ಸಾಕ್ರಟೀಸನು ತನ್ನ ವಾದ ವಿಧಾನದಲ್ಲಿ ಅನುಸರಿಸಿದ ಶೂನ್ಯವಾದವು ಸೋಫಿಸ್ಟರ ಶೂನ್ಯವಾದಕ್ಕಿಂತ ವಿಭಿನ್ನವಾಗಿತ್ತು. ಸೋಫಿಸ್ಟರು ಅಂತಿಮವಾಗಿ ತಿಳಿಯತಕ್ಕ ಜ್ಞಾನವನ್ನು ತಿಳಿಯಲು ಸಾಧ್ಯವಿಲ್ಲವೆಂದು ಬೋಧಿಸಿದ್ದಾರೆ. ಆದರೆ ಸಾಕ್ರಟೀಸಿನ ಬೋಧನೆ ಇದಕ್ಕೆ ವಿರುದ್ಧವಾಗಿತ್ತು. ಸಾಕ್ರಟೀಸನು ಸಂಭಾಷಣೆಯ ಮೂಲಕ ಸತ್ಯವನ್ನು ಹೊರಕ್ಕೆ ತರುತ್ತಿದ್ದನು. ಈ ಸಂದರ್ಭದಲ್ಲಿ ತಾನು ಏನೂ ತಿಳಿಯದವನಂತೆ ನಟಿಸಿ ಜನರನ್ನು ಉಚಿತವಾಗಿ ಪ್ರಶ್ನೆ ಹಾಕುತ್ತಾ ಅವರ ಅಜ್ಞಾನವನ್ನು ಹೋಗಲಾಡಿಸಿ ಜ್ಞಾನೋದಯ ಉಂಟಾಗುವಂತೆ ಮಾಡುತ್ತಿದ್ದನು. ಸಾಕ್ರಟೀಸನು ಅನುಸರಿಸಿದ ಕ್ರಮವು ವಿಷಯವನ್ನು ಸಂಭಾಷಣೆಯಿಂದ ಪರಸ್ಪರ ಚರ್ಚಿಸಿ ವಿಮರ್ಶೆ ಮಾಡಿ ಸತ್ಯದ ಅರಿವುಂಟು ಮಾಡುವುದಾಗಿತ್ತು. ಸಾಕ್ರಟೀಸನ ವಾದ ವಿಧಾನದಲ್ಲಿ ಚರ್ಚಿಸುವ ಯಾವ

ವಿಷಯವೇ ಆಗಲಿ, ಆ ವಿಷಯದ ನಿರ್ದಿಷ್ಟ ಲಕ್ಷಣ ನಿರೂಪಣೆ ನೀಡುವುದು. ಉಪಯೋಗಿಸುವ ಪದಗಳ ಮೂಲಾರ್ಥವನ್ನು ತಿಳಿಯುವುದು. ಇದಲ್ಲದೆ ಆ ವಿಷಯದ ಮೂಲ ಭಾವನೆಯನ್ನೇ ಪರಿಶೀಲಿಸಲಾಗುತ್ತಿತ್ತು. ಸಾಕ್ರಟೀಸನು ಜನರಿಗೆ ಸೂಕ್ತ ತಿಳುವಳಿಕೆಯನ್ನುಂಟುಮಾಡಲು, ವಾದ ಕ್ರಮದಲ್ಲಿ ಅನುಭವಕ್ಕೆ ಸಂಬಂಧಿಸಿದ ವಿಷಯಗಳನ್ನೇ ಉದಾಹರಣೆಯಾಗಿ ತೆಗೆದುಕೊಂಡು ಆದರಿಂದ ಕ್ರಮ ಕ್ರಮವಾಗಿ ಜನರಲ್ಲಿ ಸತ್ಯತೆಯ ಅರಿವನ್ನುಂಟುಮಾಡುತ್ತಿದ್ದನು. ಸಾಕ್ರಟೀಸನು ತಾನು ವಾದಿಸುವ ವಿಷಯಗಳಲ್ಲಿ ಸಾಮಾನ್ಯ ಸಿದ್ಧಾಂತವನ್ನು ಕಂಡು ಹಿಡಿಯುವುದಲ್ಲದೆ ಆ ಸಾಮಾನ್ಯ ಸಿದ್ಧಾಂತಗಳಿಂದ ನಿಗಮನ ರೀತಿ ತರ್ಕ ಮಾಡಿ ಆ ತೀರ್ಮಾನವನ್ನು ಪರೀಕ್ಷಿಸುತ್ತಿದ್ದನು.

ಸಾಕ್ರಟಿಸನ ನೀತಿ ಮಾರ್ಗ ಮತ್ತು ತತ್ವ ಬೋಧನೆ

ಸೋಫಿಸ್ಟರಿಗೆ ಜ್ಞಾನ, ನೀತಿ, ಧರ್ಮಗಳಿರಲಿಲ್ಲ. ಅವುಗಳಿದ್ದರೂ ಅವುಗಳನ್ನು ತಿಳಿಯಲಾಗುವುದಿಲ್ಲ ಎಂದು ಬೋಧಿಸಿದರು. ಆದರೆ ಸಾಕ್ರಟೀಸನು ಸರ್ವಸಮ್ಮತವಾದ ಸ್ವತಂತ್ರವಾದ ಜ್ಞಾನವಿದೆ, ಅದನ್ನು ಹೊಂದಬಹುದೆಂದು ಹೇಳಿದನು. ಅದೇ ಪ್ರಕಾರವಾಗಿ ಸರ್ವ ಸಮ್ಮತವಾದ ನೀತಿ ಧರ್ಮವಿದೆ ಎಂದು ತೋರಿಸಿ ಕೊಡಲು ಧರ್ಮವೆಂದರೇನು? ನಮ್ಮ ಜೀವನವನ್ನು ಯಾವ ರೀತಿಯಲ್ಲಿ ಸುಸೂತ್ರವುಳ್ಳದ್ದಾಗಿ ಮಾಡಿಕೊಳ್ಳಬೇಕು ? ಪ್ರಜ್ಞಾಪೂರ್ವಕವಾಗಿ ಹುಡುಕುವುದು ಹೇಗೆ ? ಇವೇ ಮೊದಲಾದ ಪ್ರಶ್ನೆಗಳನ್ನು ಕೇಳುತ್ತಿದ್ದನು. "ಎಲ್ಲ ವಿಷಯಗಳಲ್ಲೂ ಮಾನವನೇ ತನ್ನ ಅಳತೆ ಗೋಲು" ಎಂಬ ಸೋಫಿಸ್ಟರ ವ್ಯಾಖ್ಯೆ ನಿಜವೆನ್ನಲಾಗದು. ಏಕೆಂದರೆ ತನ್ನ ಮಟ್ಟಿಗೆ ನಿಖರವಾದ ಯಾವುದೇ ಭಾವನೆ ಅಸೇ ನಿನಗೆ ಸುಖದಾಯಕವೆಂದು ಹೇಳಲಾಗುವುದಿಲ್ಲ. ಸಕಲರಿಗೆ ಹಿತಕರವಾದ, ಸರ್ವಸಮ್ಮತವಾದ ಕಟ್ಟಳೆ ಇರಬೇಕು. ಎಲ್ಲರ ನಡತೆಗೂ ಮೂಲಾಧಾರವಾದ ವಿಚಾರ ಬದ್ಧವಾದ ನಿಯಮವಿರಬೇಕು. ಅಂತಹ ಯಾವುದರ ಸಲುವಾಗಿ ಮಿಕ್ಕವುಗಳೆಲ್ಲವೂ ಒಳಿತಾಗುವವೋ ಅಂತಹ ಪರಮಶ್ರೇಷ್ಠ ಧರ್ಮವು ಯಾವುದು ?

ಸಾಕ್ರಟೀಸನು ಕೊಟ್ಟಿರುವ ಈ ಪ್ರಶ್ನೆಗೆ ಉತ್ತರ ಕೇಳಿದರೆ ಮೊದಲು ವಿಸ್ಮಯವುಂಟಾಗಬಹುದು. ಜ್ಞಾನವೇ ಮಾನವರ ಪರಮ ಧ್ಯೇಯ, ಪರಮಧರ್ಮ. ಜ್ಞಾನವು ಸತ್ಯ, ಶೀಲ, ಸಕಲ ಸದ್ಗುಣ ಸಂಪತ್ತು. ಇದೇ ಸಾಕ್ರಟೀಸನ ನೈತಿಕ ಸಿದ್ಧಾಂತದ ತಳಹದಿ. ಇದಕ್ಕೆ ಸಂಬಂಧಪಟ್ಟ ಹಾಗೆ ಇದರಿಂದಲೇ ಅವಶ್ಯಕವಾಗಿ ಹೊರ ಬೀಳುವ ಮತ್ತೆರಡು ಅನುಮಾನಗಳನ್ನು ಸಾಕ್ರಟೀಸನು ಹೇಳುತ್ತಿದ್ದನು. ಅವುಗಳು :

1 ಅಜ್ಞಾನದಿಂದಲೇ ಜ್ಞಾನಶೂನ್ಯವಾಗಿ ದುರಾಚಾರ ಮತ್ತು ದುಷ್ಟತನ, ಉಂಟಾಗುತ್ತದೆ.

2 ಜ್ಞಾನವಿದ್ದವನು ಯಾರಿಗೂ ಕೆಟ್ಟದ್ದನ್ನು ಮಾಡುವದಿಲ್ಲ. ನಾವು ಮಾಡಿದ ದುಷ್ಟತನ, ಪಾಪ ಕೃತ್ಯಗಳು ಅಜ್ಞಾನದಿಂದ ನಡೆಯುವುದಾಗಿದೆ.

ಜ್ಞಾನಜನಿತವಿವೇಕವೇ ನಿಜವಾಗಿ ಅಜ್ಞಾನವನ್ನು ನಿವಾರಿಸುವುದಕ್ಕೆ ದಾರಿ

ನಾವು ಜೀವನದ ಸುಖ ಸಾಧನಗಳೆಂದು ಕರೆಯುವವೆಲ್ಲವೂ ವಿವೇಕಿಯ ಕೈಯಲ್ಲಿದ್ದರೆ ಮಾತ್ರ ಸಹಕಾರಿಯಾಗುವುವು. ಅವುಗಳು ಅವಿವೇಕಿಯ ವಶದಲ್ಲಿದ್ದರೆ ಸುಖವನ್ನು ತರುವುದಕ್ಕೆ ಬದಲಾಗಿ ಅನರ್ಥ ಪರಂಪರೆಯನ್ನು ತಂದೊಡ್ಡುವುವು. ಜ್ಞಾನ ಪೂರ್ವಕವಾಗಿ, ವಿವೇಚನಾ ಪೂರ್ವಕವಾಗಿ ನಮ್ಮ ಮೇಲ್ಮೆ ಯಾವುದು, ನಮಗೆ ಕೆಡಕು ಮಾಡುವುದು ಯಾವುದು ಎಂದು ನಾವು ತಿಳಿದುಕೊಳ್ಳದಿದ್ದರೆ ಇತರರು ಹೇಳಿದಂತೆ ನಡೆಯುವುದಾದರೆ ಅದರಿಂದ ಅನರ್ಥವುಂಟಾಗುತ್ತದೆ. ನ್ಯಾಯ ಅನ್ಯಾಯಗಳ ವಿವೇಚನೆ ಮಾಡುವ ಶಕ್ತಿ ಇಲ್ಲದಿದ್ದರೆ ಅನ್ಯಾಯವನ್ನು ತೊರೆದು ನ್ಯಾಯ ಮಾರ್ಗವನ್ನು ಅನುಸರಿಸುವುದು ಕಷ್ಟವಾಗುತ್ತದೆ. ಒಬ್ಬ ನಾವಿಕನು ದೋಣಿಯನ್ನು ನಡೆಸಬೇಕಾದರೆ ಅವನು ದೋಣಿಯನ್ನು ಕಟ್ಟುವ ರೀತಿ ಹೇಗೆ, ಅದರ ಯಾವ ಭಾಗದಿಂದ, ಯಾವ ಕೆಲಸ ನಡೆಯುತ್ತದೆ ಇವುಗಳನ್ನು ತಿಳಿದಿರಬೇಕು. ಒಬ್ಬ ರಾಜ ರಾಜ್ಯವಾಳಬೇಕಾದರೆ ರಾಜ್ಯವೆಂದರೇನು ? ಅದರಲ್ಲಿರುವ ಅಂಗಗಳಾವುವು ಎಂಬುದನ್ನು ತಿಳಿದಿರಬೇಕು. ಒಬ್ಬ ವೈದ್ಯನು ರೋಗಿಯನ್ನು ಗುಣ ಪಡಿಸಬೇಕಾದರೆ ರೋಗದ ಕಾರಣಗಳೇನು, ಅದರ ಚಿಹ್ನೆಗಳಾವುವು ಎಂದು ತಿಳಿದಿರಬೇಕು. ಈ ರೀತಿಯಾಗಿ ವ್ಯಕ್ತಿಗಳು ಅವರಿಗೆ ಸಂಬಂಧಿಸಿದ ವಿಷಯಗಳಲ್ಲಿ ಪ್ರಾಥಮಿಕ ವಿಷಯಗಳನ್ನೇ ತಿಳಿಯದಿದ್ದ ಪಕ್ಷದಲ್ಲಿ ತಮ್ಮ ಕೆಲಸಗಳನ್ನು ಸ್ವತಂತ್ರವಾಗಿ ಹೇಗೆ ನಡೆಸಬಲ್ಲರು ! ಇದರಂತೆಯೇ ಸದ್ಗುಣಿಯಾಗಿ ಬಾಳಬೇಕಾದರೆ ಧೈರ್ಯ, ಧರ್ಮ, ವ್ಯವಹಾರ, ಸಮತ್ವಧರ್ಮ ಇವುಗಳು ಅತ್ಯಂತ ಅವಶ್ಯಕವಾದದ್ದು.

ಪ್ಲೇಟೋ ಇಲ್ಲಿ ಹೇಳಿರುವಂತೆ ಜ್ಞಾನವೆಂದರೆ ಕೇವಲ ಇಂದ್ರಿಯ ಜ್ಞಾನವಾಗಲಿ, ಅದರಿಂದ ಜನಿಸುವ ಬುದ್ಧಿಯ ತಿಳುವಳಿಕೆಯಾಗಲಿ ಅಲ್ಲ. ಅಥವಾ ಅನೇಕ ವಿಷಯಗಳನ್ನು ಶೇಖರಿಸಿ, ಮನಸ್ಸಿನಲ್ಲಿ, ನೆನಪಿನಲ್ಲಿ ಇಟ್ಟುಕೊಳ್ಳುವುದಲ್ಲ. ಅದೊಂದು ವಿಧವಾದ ನಿರೂಪಿಸಲು ಅಸಾಧ್ಯವಾದ ಶಕ್ತಿ. ಇದು ಮೊದಲು ಬುದ್ಧಿಯನ್ನು ಆಕ್ರಮಿಸುತ್ತದೆ, ಅನಂತರ ಆತ್ಮದಲ್ಲಿ ವ್ಯಾಪಿಸಿ ಚಿತ್ತವನ್ನು, ಭಾವವನ್ನು ಸಂಕಲ್ಪವನ್ನು ವಶಮಾಡಿಕೊಂಡು ತನ್ನ ಹಾದಿಯಲ್ಲಿಯೇ ನಡೆಯುವಂತೆ ಅವುಗಳನ್ನು ಸಮ್ಮಿಳನ ನಡೆಸಿ ತನ್ಮೂಲಕ ಆತ್ಮ ಸಾಕ್ಷಾತ್ಕಾರವನ್ನು ಸ್ಥಾಪಿಸುತ್ತದೆ. ಈ ಆತ್ಮಸಾಕ್ಷಾತ್ಕಾರವೇ ಧೈರ್ಯ, ಮಿತವ್ಯವಹಾರ, ಧರ್ಮ. ಧರ್ಮವೆಂದರೆ ಸದ್ಗುಣಗಳ ಆವಾಸಸ್ಥಾನ. ಪ್ಲೇಟೋ ಇಲ್ಲಿ ಹೇಳುವಂತೆ ಅದು ಆತ್ಮವೇ ಆಗಿದೆ. ಆತ್ಮ ಸ್ವತಂತ್ರ ಜೀವಿ. ಅದು ನಮ್ಮ ಸ್ವಭಾವದಲ್ಲಿ ಸಾಮರಸ್ಯವನ್ನೇರ್ಪಡಿಸುತ್ತದೆ.

ಈ ಶಕ್ತಿಯನ್ನು ಪಡೆದ ಮನುಷ್ಯನ ಜೀವನ, ಆತನ ಸ್ವಭಾವ ನೂತನ ರೀತಿಯಲ್ಲಿ ಮಾರ್ಪಾಡಾಗುತ್ತದೆ. ಆದರೆ ಈ ವಿಧವಾದ ಶಕ್ತಿ ಎಲ್ಲಿಂದ ಬಂತು ಎಂಬುದನ್ನು ತಿಳಿಯಬೇಕು. ಇದನ್ನು ಸಾಮಾನ್ಯವಾದದ ಆಧಾರದ ಮೇಲೆ ತಿಳಿಯುತ್ತೇವೆ. ಅಂದರೆ

ನಿರ್ಮಿಸಿಟ್ಟ ಸತ್ಯಂ, ಶಿವಂ, ಸುಂದರಂ ಎನ್ನ ತಕ್ಕಂತಹ ಸಾಮಾನ್ಯಗಳು, ಮಿಶ್ರ ವಸ್ತು ಗಳಿಗೆ ಸೃಷ್ಟಿ ಕೊಟ್ಟಿವೆ. ಇವುಗಳನ್ನು ಸಾಮಾನ್ಯಗಳೆನ್ನುತ್ತಾರೆ. ಈ ಸಾಮಾನ್ಯಗಳೆ ಪರಸ್ಪರ ಮಿಶ್ರವಾಗುವುದರಿಂದ ಉಂಟಾಗುವ ಅವ್ಯವಸ್ಥೆಗಳನ್ನೊಳಗೊಳ್ಳದೆ ಪರಸ್ಪರ ಯೋಗ್ಯವಾದ, ಸಾಮರಸ್ಯವಾದ, ಸಂಬಂಧಗಳನ್ನು ಹೊಂದಿ ಸಮಾಜೋಪಾದಿಯಲ್ಲಿ ಸುವ್ಯವಸ್ಥಿತವಾಗಿರುವುವು. ಎಲ್ಲ ಸಾಮಾನ್ಯಗಳಿಗಿಂತಲೂ ಅತ್ಯಂತ ಶ್ರೇಷ್ಠವಾದ ಮಿಕ್ಕ ಸಾಮಾನ್ಯಗಳೆಲ್ಲಕ್ಕೂ ಆಧಾರಬದ್ಧವಾದ ಅವುಗಳೆಲ್ಲವನ್ನೂ ಸಮ್ಮೇಳನಗೊಳಿಸುವ ಮೂಲ ಸಾಮಾನ್ಯ ಹೊಂದಿದೆ. ಇದೇ ಪರಮ ಶ್ರೀ ಎಂಬ ಸಾಮಾನ್ಯ. ಅಂದರೆ ಸತ್ಯಂ ಎಂದಿವರ ಅರ್ಥ. ಈ ಸಾಮಾನ್ಯಗಳನ್ನು ಜ್ಞಾನ ಚಕ್ಷುವಿನಿಂದ ಸಾಕ್ಷಾತ್ಕಾರಿಸಿ ಕೊಳ್ಳುವುದೇ ಜೀವನದ ಮುಖ್ಯ ಗುರಿಯೆಂದು ಸಾಕ್ರಟೀಸನು ಹೇಳಿದ್ದಾನೆ. ಸತ್ಯಂ, ಶಿವಂ, ಸುಂದರಗಳೆಂಬ ಪರಮಶ್ರೀಗಳ ಸಾಕ್ಷಾತ್ಕಾರವೇ ಜ್ಞಾನ ಶಕ್ತಿಯಾಗಿದೆ. ಈ ಸಾಮಾನ್ಯಗಳ ಅಪರೋಕ್ಷವಾದ ಅನುಭೂತಿಯೇ ಸಮ್ಯಕ್ ಜ್ಞಾನವೆನಿಸುವುದು. ಇಂತಹ ಅನುಭೂತಿಯನ್ನು ಹೊಂದಬೇಕಾದರೆ ಮನಸ್ಸು, ಶಬ್ದ, ಸ್ಪರ್ಶ ರೂಪಾದಿ ಪಂಚೇಂದ್ರಿಯಗಳ ವ್ಯಾಪಾರಗಳಿಂದಲೂ, ಸುಖ ದುಃಖಾನುಭವಗಳಿಂದ ಪೂರ್ಣವಾಗಿ ಬಿಡುಗಡೆ ಹೊಂದಿ ಶುಭ್ರವಾದ ತಮ್ಮ ಸ್ವಯಂ ಪ್ರಕಾಶದಿಂದ ಪ್ರತಿಯೊಂದು ಸಾಮಾನ್ಯ ವನ್ನು ಒಳ ಹೊಕ್ಕು ಅದರ ಸತ್ಯಾರ್ಥವನ್ನು ಕಂಡುಹಿಡಿಯಬೇಕೆಂದು ಪ್ಲೇಟೋವಿನ ಸಂಭಾಷಣೆಯಲ್ಲಿ ಸಾಕ್ರಟೀಸನು ಹೇಳುತ್ತಾನೆ. ಇದೇ ಧ್ಯಾನ ಯೋಗ. ಇದರ ಅಭ್ಯಾಸವನ್ನು ಮಾಡುವವರು ಆತ್ಮ ಸಂಯಮ ಪಡೆದು ಪವಿತ್ರ ಜೀವನವನ್ನು ಅನುಷ್ಠಾನ ಮಾಡುವವರಾಗಿರಬೇಕು. ಇದರಿಂದ ಲಭಿಸುವುದು ಕೇವಲ ತಿಳಿವಳಿಕೆಯಲ್ಲ, ವಿವೇಕ ವಲ್ಲ, ವಸ್ತುಗಳ ಅಂತರಾತ್ಮ ಸತ್ಯಗಳು. ಅದರಲ್ಲಿಯೂ ಪರಮಶ್ರೀಯದ ದರ್ಶನ ಮತ್ತು ಇಂತಹ ದರ್ಶನದಿಂದ ಉಂಟಾಗುವ ಭಾವ, ಬುದ್ಧಿ ಕ್ರಿಯಾಶಕ್ತಿಗಳ ಸಾಮರಸ್ಯ ಮತ್ತು ಸದ್ವರ್ತನೆಗಳಿಗಿರುವ ಸಂಸ್ಕಾರ, ಪರಮ ಸತ್ಯವನ್ನು, ಪರಮ ಸೌಂದರ್ಯವನ್ನು, ಪರಮಶಿವನನ್ನು ಅಂತರಾತ್ಮದ ಮೂಲಕ ಅನುಭವಿಸಿದವನಿಗೆ ಅವನ ಜೀವನವೇ ಸುಂದರವಾಗುವುದು.

ಸಾಕ್ರಟೀಸನ ಸದ್ಗುಣಗಳ ಉದ್ದೇಶ ಮತ್ತು ಪ್ರೇಮ ಮೀಮಾಂಸೆ

ಸದ್ಗುಣಕ್ಕೆ ಮೂಲವಾದುದು ಸಾಮಾನ್ಯ ದರ್ಶನ. ಆತ್ಮ ಜ್ಞಾನದಿಂದುಂಟಾದ ಆತ್ಮ ಸಾಮರಸ್ಯ, ಭಾವ, ಬುದ್ಧಿ, ಕ್ರಿಯಾಪದಗಳ ಸಮಾಕಾರ. ಹೀಗೆ ಜೀವನದ ಆಂತರಿಕ ಸತ್ಯ ಸ್ಥಿತಿ ಒಂದಾಗಿರುವಲ್ಲಿ ಬಾಹ್ಯದಲ್ಲಿ ನಾವು ಮಾಡುವ ಕರ್ಮಗಳೆಲ್ಲಾ, ನಾವು ಹೊಂದುವ ಚಿತ್ತ ಸಂಕಲ್ಪಗಳಿಗೆಲ್ಲಾ ಶಕ್ತಿ ನೀಡುವ ಮೂಲ ಕಾರಣ, ಮಾನವನ ಆಂತರಿಕ ಸ್ಥಿತಿ ಎಂದು ಹೇಳುತ್ತೇವೆ. ಇದು ಜೀವನದ ವಿವಿಧ ಸನ್ನಿವೇಶಗಳಲ್ಲಿ, ವಿಧ ವಿಧ ರೂಪಗಳನ್ನು ಹೊಂದಿ ಒಂದು ಸನ್ನಿವೇಶದಲ್ಲಿ ಧೈರ್ಯ ಮತ್ತೊಂದು ಸನ್ನಿವೇಶದಲ್ಲಿ

ಇಂದ್ರಿಯ ನಿಗ್ರಹ ಇನ್ನೊಂದರಲ್ಲಿ ವಿವೇಕವೆನಿಸಿಕೊಳ್ಳುವುದು. ಈ ಸದ್ಗುಣಗಳ ಪ್ರವಾಹಗಳಿಗೆ ಮೂಲವಾದುದು ಆತ್ಮ ಸೌಂದರ್ಯ.

ಸತ್ಯಂ, ಶಿವಂ, ಸುಂದರಂ ಎನ್ನುವ ಪರಮ ಸಾಮಾನ್ಯಗಳ ಸಂದರ್ಶನವೇ ಸಮ್ಯಕ್ ಜ್ಞಾನ ಅಥವಾ ಆತ್ಮ ಜ್ಞಾನ. ಅದೇ ಆತ್ಮದ ಆನಂದ, ಕಲ್ಮಷವಿಲ್ಲದ ಕಲ್ಯಾಣ. ಇಂತಹ ಭಾಗ್ಯ ದೊರಕುವುದಕ್ಕೆ ಮೊದಲು ಅದನ್ನು ಹೊಂದಬೇಕೆಂಬ ಉತ್ಕಟವಾದ ಆಕಾಂಕ್ಷೆ. ಇದು ತನು-ಮನಗಳೆಲ್ಲವನ್ನು ಪ್ರವೇಶಿಸಿ ಆತ್ಮದಲ್ಲಿ ಉನ್ನತವಾದ ಭಾವಗಳು ಅರಳುವುದಕ್ಕೆ ಯೋಗ್ಯವಾದ ಹುಟ್ಟ ಆಧ್ಯಾತ್ಮಿಕ ಸ್ಥಿತಿಗೇರಬೇಕು. ಇಂತಹ ಉಜ್ವಲ ಆಕಾಂಕ್ಷೆಯನ್ನು ಸಾಕ್ರಟೀಸನು ಪ್ರೇಮವೆಂದು ಕರೆಯುತ್ತಾನೆ.

ಈ ಪ್ರೇಮವು ಕೇವಲ ಬೌದ್ಧಿಕ ಅಥವಾ ಶಾರೀರಕವಲ್ಲ. ಪರಮಧ್ಯೇಯವನ್ನು ಸಾಧಿಸಬೇಕೆನ್ನುವ ಮನದ ಉದ್ವೇಗ ಸೌಂದರ್ಯದಲ್ಲಿ ಕಾಣಬರುವ ದಿವ್ಯಶ್ರೀಯನ್ನು ಹೊಂದಬೇಕೆನ್ನುವ ಆತುರ, ಆಸಕ್ತಿ, ಸತ್ವಪೂರಿತವಾದ ಸಾಮಾನ್ಯಗಳ ಮೇಲಿನ ಅಪಾರ ಅನುರಾಗ. ಪ್ರಥಮದಲ್ಲಿ ಸುಂದರವಾದ ಶರೀರಗಳ ಅವಲೋಕನದಿಂದ ಈ ಪ್ರೀತಿ ಅಂಕುರಿಸಬಹುದು. ಅನಂತರ ಸುಂದರವಾದ ಮನೋಭಾವಗಳಿಗೂ, ಸಿದ್ಧಾಂತಗಳಿಗೂ ಅದು ಆಕರ್ಷಿಸಲ್ಪಡುವುದು. ತನ್ಮೂಲಕ ಸುಂದರವಾದ ಸಂಸ್ಥೆಗಳಿಗೂ, ಸಮಾಜಶಾಸನಗಳಿಗೂ ಒಯ್ಯಲ್ಪಡುವುದು. ಕೊನೆಯಲ್ಲಿ ಈ ಅಂತರಗಳೆಲ್ಲವನ್ನು ಒಂದೊಂದಾಗಿ ಹೇಳುವಾಗ ತನ್ನಲ್ಲಿರಬಹುದಾದ ಕಲ್ಮಷಗಳೆಲ್ಲವನ್ನು ತೊರೆದು ಪುಟ ಹಾಕಿದ ಚಿನ್ನದಂತೆ ಪರಿಶುದ್ಧವಾಗಿ ತಾನೇ ತಾನಾಗಿರುವ ನಿರುಪಮ ನಿತ್ಯಸೌಂದರ್ಯ ರಾಶಿಯಲ್ಲಿಯೇ ಸ್ಥಿತವಾಗಿ ಲಯವಾಗಿರುವುದು.

ಪ್ಲೇಟೋ

ಗ್ರೀಕರ ನಾಗರೀಕತೆಯನ್ನು ಪುನರುಜ್ಜೀವನಗೊಳಿಸಿದವರಲ್ಲಿ ಪ್ಲೇಟೋ ಎರಡನೆಯವನು. ಆತನು ತತ್ವ ಶಾಸ್ತ್ರ ಪ್ರವೇಶಿಸಲು ಎರಡು ಮುಖ್ಯ ಕಾರಣಗಳಿದ್ದವು. ಮೊದಲನೆಯದಾಗಿ ತನ್ನ ಗುರುವಾದ ಸಾಕ್ರಟೀಸನು ಕೈಗೊಂಡ ಕಾರ್ಯಗಳನ್ನು ಸಂಪೂರ್ಣಗೊಳಿಸಲು, ಈ ದಾರಿಯಲ್ಲಿ ಅವನು ಸಾಕ್ರಟೀಸನ ತತ್ವೋಪದೇಶಗಳನ್ನು ಬೆಳಸಿ ಯೋಗ್ಯ ರೀತಿಯಲ್ಲಿ ಅಥವಾ ವ್ಯವಸ್ಥಿತ ರೀತಿಯಲ್ಲಿ ನಿರೂಪಿಸಿದನು. ಈ ವ್ಯವಸ್ಥಿತ ತತ್ವ ನಿರೂಪಣೆಯನ್ನು ಪ್ಲೇಟೋ ಬರೆದ ಹಲವಾರು ಸಂವಾದಗಳಲ್ಲಿ ನಾವು ಕಾಣಬಹುದು. ಈ ಸಂವಾದಗಳೆಲ್ಲೆಲ್ಲಾ ಸಾಕ್ರಟೀಸನು ಮುಖ್ಯಪಾತ್ರವನ್ನು ವಹಿಸಿದಂತೆ ಪ್ಲೇಟೋ ನಿರೂಪಿಸಿರುವನು. ಅವನ ಎರಡನೆಯ ಧ್ಯೇಯ ತನ್ನ ಗುರುವಾದ ಸಾಕ್ರಟೀಸನನ್ನು ಅಮರನನ್ನಾಗಿ ಮಾಡುವುದು. ಪ್ಲೇಟೋವಿನ ದೃಷ್ಟಿಯಲ್ಲಿ ಸಾಕ್ರಟೀಸನು ಕೇವಲ ಗುರುವಾಗಿರದೆ ದೇವತಾ ಸಮಾನನಾಗಿದ್ದನು. ಪ್ಲೇಟೋವಿನ ಮಾತಿನಲ್ಲಿ ಹೇಳಬೇಕಾದರೆ "ನಾನು ಅನಾಗರಿಕನಾಗಿ ಹುಟ್ಟದೆ ಒಬ್ಬ ಗ್ರೀಕ್ ಪ್ರಜೆ

ಯಾಗಿ ಹುಟ್ಟಿದ್ದೇನೆ, ಗುಲಾಮನಾಗಿರದೆ ಸ್ವತಂತ್ರನಾಗಿದ್ದೇನೆ, ಸ್ತ್ರೀಯಾಗಿ ಹುಟ್ಟದೆ ಪುರುಷನಾಗಿ ಹುಟ್ಟಿದ್ದೇನೆ. ಇವಕ್ಕಾಗಿ ನಾನು ಹರ್ಷಿಸುತ್ತೇನೆ. ಆದರೆ ಈ ಎಲ್ಲಾ ಸಂತೋಷಗಳಿಗಿಂತಲೂ ಮುಖ್ಯವಾದುದು ನಾನು ಸಾಕ್ರಟೀಸನ ಕಾಲದಲ್ಲಿ ಹುಟ್ಟಿರುವುದು". ಕ್ರಿ. ಪೂ. 427ರಲ್ಲಿ ಶ್ರೀಮಂತರ ರಾಜವಂಶದಲ್ಲಿ ಹುಟ್ಟಿದ ಪ್ಲೇಟೋ ತಾನು 20 ವರ್ಷ ವಯಸ್ಸಿನವನಿದ್ದಾಗಲೇ ಸಾಕ್ರಟೀಸನ ಶಿಷ್ಯನಾದನು. ಆದರೆ ಮುಂದೆ 8 ವರುಷ ಕಳೆಯುವುದರಲ್ಲಿ ತನ್ನ ಆತ್ಮೀಯನಾದ ಗುರುವನ್ನು ಕಳೆದುಕೊಂಡನು. ಜೀವನದಲ್ಲಿ ಜೇಸತ್ತ ಪ್ಲೇಟೋ ಹಲವಾರು ವರ್ಷಗಳವರೆಗೆ ಬೇರೆ ಬೇರೆ ದೇಶಗಳಲ್ಲಿ ಸಂಚರಿಸಿ ಮರಳಿ ಅಥೆನ್ಸ್ ನಗರಕ್ಕೆ ಬಂದು ಕ್ರಿ.ಪೂ. 387 ರಲ್ಲಿ ಅಕಾಡೆಮಿ ಎಂಬ ಶಿಕ್ಷಣ ಶಾಲೆಯನ್ನು ಪ್ರಾರಂಭಿಸಿದನು. ತನ್ನ ಜೀವಿತನ್ನೆಲ್ಲಾ ತತ್ವಶಾಸ್ತ್ರದ ಅಧ್ಯಯನಕ್ಕೆ ಮುಡಿಪಾಗಿಟ್ಟ ಪ್ಲೇಟೋ ಕ್ರಿ.ಪೂ. 347 ರಲ್ಲಿ ತನ್ನ 80 ನೇ ವಯಸ್ಸಿನಲ್ಲಿ ಮರಣ ಹೊಂದಿದನು.

ಪ್ಲೇಟೋವಿನ ಸಿದ್ಧಾಂತಗಳು

ಪ್ಲೇಟೋವಿನ ತತ್ವ ಮೀಮಾಂಸೆಗೆ ಇನ್ನೊಂದು ಹೆಸರು ಸಾಮಾನ್ಯ ಸಿದ್ಧಾಂತ. ಈ ಸಿದ್ಧಾಂತನ ಸಂಪೂರ್ಣ ನಿರೂಪಣೆಯನ್ನು ಅವನು ಬರೆತಿರುವ "ರಿಪಬ್ಲಿಕ್" ಗ್ರಂಥದಲ್ಲಿ ಕಾಣಬಹುದು. ಅವನು ತನ್ನ ಸಿದ್ಧಾಂತವನ್ನು 2 ಭಾಗಗಳಾಗಿ ವಿಂಗಡಿಸಿದ್ದಾನೆ (1) ತಾರ್ಕಿಕ ಭಾಗ (2) ತಾತ್ವಿಕ ಭಾಗ (ಸತ್ಯಸಿದ್ಧಾಂತದ ಭಾಗ)

ತಾರ್ಕಿಕ ಭಾಗ

ಸತ್ಯ ಸಿದ್ಧಾಂತದ ಮುಖ್ಯ ಗುರಿ ಪ್ರಪಂಚದ ಸೃಷ್ಟಿಯಲ್ಲಿ ಯಾವುದು ಅತ್ಯಂತ ಸತ್ಯವಾದುದೆಂದು ಕಂಡು ಹಿಡಿಯುವುದು. ಸತ್ಯ ಮತ್ತು ಮಿಥ್ಯೆಗಳ ವ್ಯತ್ಯಾಸವನ್ನು ಈ ರೀತಿ ತಿಳಿಯುವ ಪ್ರಯತ್ನವನ್ನು ನಾವು ಪಾಶ್ಚಾತ್ಯ ತತ್ವ ಶಾಸ್ತ್ರದ ಬೆಳವಣಿಗೆಯ ಉದ್ದಕ್ಕೂ ಕಾಣಬಹುದು. ಆದರೆ ಅದು ಪ್ರಾರಂಭವಾದುದು ಪ್ಲೇಟೋವಿನಿಂದ.

ಸತ್ಯ ಎಂಬುದನ್ನು ತೋರಿಸಲು ಪ್ಲೇಟೋ ಒಂದು ನಿರ್ದಿಷ್ಟ ಮಿತಿಯನ್ನು ಅಳವಡಿಸಲು ಪ್ರಯತ್ನಿಸಿದ್ದಾನೆ. ಅವನ ಪ್ರಕಾರ ಸತ್ಯ ಎಂಬುದು ಸ್ಪಷ್ಟತೆಯನ್ನು, ನಿರ್ದಿಷ್ಟತೆಯನ್ನು ಹೊಂದಿರಬೇಕು. ಯಾವನೇ ವಸ್ತುವನ್ನು ನಿರ್ದಿಷ್ಟವಾಗಿ ತಿಳಿದುಕೊಳ್ಳಬೇಕಾದರೆ ಅದು ಮಾರ್ಪಾಡಾಗಬಾರದು. ಅದರ ಬದಲು ಒಂದು ವಸ್ತುವು ಕ್ಷಣ ಕ್ಷಣಕ್ಕೂ ಬದಲಾಗುತ್ತಿದ್ದರೆ ಒಂದು ಕ್ಷಣದಲ್ಲಿ ಅದರ ಬಗ್ಗೆ ತಿಳಿದ ಜ್ಞಾನವು ಇನ್ನೊಂದು ಕ್ಷಣಕ್ಕೆ ಬದಲಾಗುತ್ತದೆ. ಅಂದರೆ ವಸ್ತುಗಳು ಕ್ಷಣ ಕ್ಷಣಕ್ಕೂ ಬದಲಾಗುತ್ತಿದ್ದು ಕ್ಷೀಣಿಸುತ್ತಾ ನಶಿಸಿ ಹೋದರೆ ಅದರ ಬಗ್ಗೆ ನಿರ್ದಿಷ್ಟ ಜ್ಞಾನದ ಸಾಧ್ಯತೆ ಇಲ್ಲ.

ಆದ್ದರಿಂದ ಯಾವುದೇ ವಸ್ತುವಾಗಲಿ ಅದು ಸತ್ಯವಾದದ್ದು ಎಂದೆನಿಸಿಕೊಳ್ಳಬೇಕಾದರೆ ಅದು ವ್ಯಾಪಾರ್ಡದಾಗದೆ ನಿತ್ಯವಾದುದಾಗಿರಬೇಕು.

ಪ್ಲೇಟೋ ಹೇಳಿದ ಸತ್ಯದ ಮಟ್ಟದ ಸಹಾಯದಿಂದ ಸತ್ಯ ಏನೆಂಬುದನ್ನು ಈ ಕೆಳ ಕಂಡ ಉದಾಹರಣೆಯ ಮೂಲಕ ವಿಶದ ಪಡಿಸುತ್ತಾನೆ. ಪ್ರಪಂಚವು ವೈವಿಧ್ಯತೆಯಿಂದ ಕೂಡಿದ್ದು ಅದರಲ್ಲಿ ವಸ್ತುಗಳು, ಗುಣಗಳು, ಸಂಬಂಧಗಳು, ಮೌಲ್ಯಗಳು ಇವೇ ಮುಂತಾದುವುಗಳಿಂದ ತುಂಬಿದೆ. ಬೆಕ್ಕಿನ ಒಂದು ಉದಾಹರಣೆಯನ್ನು ಗಿಸುಕೊಂಡರೆ ಪ್ರಪಂಚದಲ್ಲಿ ಅಸಂಖ್ಯಾತ ಬೆಕ್ಕುಗಳಿವೆ. ಈ ಎಲ್ಲ ಬೆಕ್ಕುಗಳು ಹುಟ್ಟುತ್ತವೆ, ಬೆಳೆಯುತ್ತವೆ, ಸಾಯುತ್ತವೆ. ಇವುಗಳು ಸ್ವರೂಪ ಬದಲಾವಣೆಗೆ ಒಳಪಟ್ಟಿವೆ. ಅದ್ದರಿಂದ ಪ್ಲೇಟೋವಿನ ಪ್ರಕಾರ ಬೆಕ್ಕುಗಳೆಲ್ಲವೂ ಅಸತ್ಯ. ಆದರೆ ಈ ಬೆಕ್ಕುಗಳಲ್ಲಿರುವ ಒಂದು ಸಾಮಾನ್ಯ ಅಂಶವಾದ ಬೆಕ್ಕುತನವು ಎಲ್ಲ ಬೆಕ್ಕುಗಳಗೂ ಅನ್ವಯಿಸಿದ್ದು ಸಾರ್ವತ್ರಿಕವಾದುದ್ದಾಗಿದೆ. ಇಂತಹ ಸಾಮಾನ್ಯ ಪದಗಳನ್ನು ನಮ್ಮ ಅನುಭವದಲ್ಲಿ ವಸ್ತುಗಳು, ಘಟನೆಗಳು, ಪ್ರಾಣಿಗಳ ಗುಂಪಿಗೆ ಅನ್ವಯಿಸುತ್ತೇವೆ. ಇಂತಹ ಸಾಮಾನ್ಯ ಪದಗಳನ್ನು, ಸಾರ್ವತ್ರಿಕ ಪದಗಳನ್ನು ಸಾಮಾನ್ಯಗಳೆಂದು ಕರೆದಿದ್ದಾನೆ. ಬೆಕ್ಕು ಎಂಬ ಸಾಮಾನ್ಯವು ತನ್ನ ಕೆಳಗೆ ಬರುವ ಎಲ್ಲ ಬೆಕ್ಕುಗಳನ್ನು ಸೂಚಿಸುವುದಲ್ಲದೆ ತಾನು ಯಾವುದೊಂದು ವೈಯಕ್ತಿಕ ಬೆಕ್ಕನ್ನು ಅವಲಂಬಿಸಿಲ್ಲ ಎಂಬುದನ್ನು ಸೂಚಿಸುತ್ತದೆ. ಬೆಕ್ಕು ಎಂಬ ಸಾಮಾನ್ಯವು ಅಸಂಖ್ಯಾತ ಬೆಕ್ಕುಗಳ ಹುಟ್ಟನೊಡನೆ ಬರುವುದಿಲ್ಲ. ವೈಯಕ್ತಿಕವಾದ ಬೆಕ್ಕುಗಳಲ್ಲಿ ಉಂಟಾಗುವ ಬದಲಾವಣೆಗಳು, ಸಾಮಾನ್ಯ ಬೆಕ್ಕಿನ ಮೇಲೆ ಯಾವ ಪರಿಣಾಮವನ್ನು ಬೀರುವುದಿಲ್ಲ. ಆದುದರಿಂದ ಆ ಬೆಕ್ಕು, ಈ ಬೆಕ್ಕು ಎಂಬ ವೈಯಕ್ತಿಕತೆಯು ಸತ್ಯವಲ್ಲ. ಬೆಕ್ಕುತನ ಎಂಬ ಸಾಮಾನ್ಯ ಮಾತು ಸತ್ಯ. ಇದೇ ವಾದವು ಎಲ್ಲಾ ವಸ್ತುಗಳಿಗೂ, ಘಟನೆಗಳಿಗೂ ಮತ್ತು ಮೌಲ್ಯಗಳಿಗೂ ಅನ್ವಯಿಸುತ್ತದೆ. ಮನುಷ್ಯ ಸಮಾಜದ ಬಗ್ಗೆ ಹೇಳುವುದಾದರೆ ಈ ಮನುಷ್ಯ ಆ ಮನುಷ್ಯ ಎಂಬ ವೈಯಕ್ತಿಕ ವ್ಯತ್ಯಾಸ ಅಸತ್ಯ. ಮನುಷ್ಯತ್ವ ಎಂಬ ನಿತ್ಯವೇ ಸತ್ಯ. ಇದೇ ವಾದವು ಎಲ್ಲಾ ವಸ್ತುಗಳಿಗೂ ಗುಣಗಳಿಗೂ, ಘಟನೆಗಳಿಗೂ ಮತ್ತು ಮೌಲ್ಯಗಳಿಗೂ ಅನ್ವಯಿಸುತ್ತದೆ.

ತಾತ್ವಿಕ ವಿಭಾಗ

ಪ್ಲೇಟೋ ತಾರ್ಕಿಕವಾಗಿ ನಿರ್ಧರಿಸಿದ ಪರಮ ಸತ್ಯಗಳಾದ ಸಾಮಾನ್ಯಗಳು ತಮ್ಮಷ್ಟೇ ಆದ ವಿಶಿಷ್ಟತೆಯನ್ನು, ಪರಿಪೂರ್ಣತೆಯನ್ನು ಹೊಂದಿವೆ ಎಂದು ಆತನು ಅಭಿಪ್ರಾಯಪಡುತ್ತಾನೆ. ಆದರೆ ಈ ವಿಶಿಷ್ಟತೆ ಮತ್ತು ಪರಿಪೂರ್ಣತೆಗಳು ವಸ್ತುಗಳಲ್ಲಿ ತನ್ನಷ್ಟಕ್ಕೆ ತಾನೇ ಉಂಟಾಗದೆ ದೇವರಿಂದ ನೀಡಲ್ಪಟ್ಟ ಕೊಡುಗೆ ಎಂದು ಪ್ಲೇಟೋ ವಾದಿಸುತ್ತಾನೆ. ಅವನ ಪ್ರಕಾರ ದೇವರು ಸಾಮಾನ್ಯ ಸತ್ಯದ ಕೆಳಗೆ ಒಂದು ಕ್ಷೇತ್ರ (ವರ್ಗ)ಕ್ಕೆ ಸೇರಿರುವ ಎಲ್ಲಾ ವಸ್ತುಗಳಿಗೂ ಅನ್ವಯಿಸುವ ಸಾಮಾನ್ಯವನ್ನು ಸೃಷ್ಟಿಸಿದ್ದಾನೆ. ಈ ಸಾಮಾನ್ಯಗಳು ದೇವರಿಂದ ಉಂಟಾದುದರಿಂದ ಅವು ಪರಿಪೂರ್ಣತೆ

ಯನ್ನು ಹೊಂದಿರಬೇಕು. ದೇವರು ಮಾಡಿದ ಎಲ್ಲಾ ಕೆಲಸಗಳು ಪರಿಪೂರ್ಣತೆಯಿಂದ ಕೂಡಿರಬೇಕು ಎಂಬ ಪ್ಲೇಟೋವಿನ ನಂಬಿಕೆಯೇ ಈ ವಾದಕ್ಕೆ ಕಾರಣ.

ನಾವು ಜೀವಿಸುವ ಈ ಪ್ರಪಂಚವು ಸದಾ ಬದಲಾವಣೆಗೆ ಒಳಪಟ್ಟಿರದ ನಿತ್ಯಸತ್ಯಗಳಾದ ಸಾಮಾನ್ಯಗಳು ಈ ಪ್ರಪಂಚದಲ್ಲಿರಲು ಸಾಧ್ಯವಿಲ್ಲ. ಪ್ಲೇಟೋವಿನ ಪ್ರಕಾರ ಅವುಗಳು ತಮ್ಮದೇ ಆದ "ಸಾಮಾನ್ಯಗಳ ಪ್ರಪಂಚ"ದಲ್ಲಿರುತ್ತವೆ. ನಾವು ಜೀವಿಸಿರುವ ಈ ಪ್ರಪಂಚವು ಕಾಲ ಮತ್ತು ದೇಶ (ಆಕಾಶ)ಗಳಿಂದ ಕೂಡಿದ್ದು ತಾತ್ಕಾಲಿಕವಾದುದಾಗಿದೆ. ಇಲ್ಲಿಯ ಪ್ರತಿಯೊಂದು ವಸ್ತುವೂ ತಾತ್ಕಾಲಿಕ. ಪ್ಲೇಟೋವಿನ ಪ್ರಕಾರ ತಾತ್ಕಾಲಿಕವಾಗಿರುವ ಯಾವ ವಸ್ತುವೂ ಸತ್ಯವಲ್ಲ. ಆದುದರಿಂದ ಸತ್ಯವಾದುವುಗಳಿಗೆ ಬೇರೆಯೇ ಪ್ರಪಂಚವಿರಬೇಕೆಂದು ಪ್ಲೇಟೋ ವಾದಿಸುತ್ತಾನೆ. ನಿತ್ಯಸತ್ಯಗಳಾದ ಸಾಮಾನ್ಯಗಳು ಮತ್ತು ತಾತ್ಕಾಲಿಕ ಹಾಗೂ ಸಾಪೇಕ್ಷ ಸತ್ಯಗಳಿಂದ ಕೂಡಿದ ಕೂಡಿದ ಇಲ್ಲಿಯ ವಸ್ತುಗಳಿಗೆ ಬೇರೆ ಬೇರೆ ಪ್ರಪಂಚವನ್ನು ಕಲ್ಪಿಸಿರುವ ಪ್ಲೇಟೋವಿನ ಈ ಸಿದ್ಧಾಂತವನ್ನು 'ದ್ವೈತ' ಸಿದ್ಧಾಂತವೆನ್ನುತ್ತಾರೆ. ಈ ದ್ವೈತ ಸಿದ್ಧಾಂತವು ಆತನ ವಿಶ್ವಶಾಸ್ತ್ರದ ವಿವರಣೆಯಾಗಿದೆ. ಅದರ ಪ್ರಕಾರ ಈ ವಿಶ್ವ ಸೃಷ್ಟಿಯಾಗುವ ಮೊದಲು ದೇವರು ಎರಡು ಮೂಲವಸ್ತುಗಳನ್ನು (ನಿತ್ಯಗಳಾದ ಸಾಮಾನ್ಯಗಳು ಮತ್ತು ಯಾವ ಆಕಾರವೂ ಇಲ್ಲದ ಮೂಲವಸ್ತು ಮೂಲ ಭೌತ ವಸ್ತು) ಆಧಾರವಾಗಿಟ್ಟುಕೊಂಡು ಈ ಪ್ರಪಂಚವನ್ನು ಸೃಷ್ಟಿಸಿದನು. ಪ್ರಪಂಚವು ಸೃಷ್ಟಿಸಲ್ಪಟ್ಟಲ್ಲಿ ದೇವರು ಕೇವಲ ನಿಮಿತ್ತ ಕಾರಣ. ಆದುದರಿಂದ ಪ್ಲೇಟೋ ಇಂತಹ ದೇವರನ್ನು "ಡೆಮ್ಮಿ ಅರ್ಜ್" (Demiurge) ಎಂದು ಕರೆದಿದ್ದಾನೆ. ಸೃಷ್ಟಿಯ ಎರಡು ಮೂಲ ಅಂಶಗಳಲ್ಲಿ ಒಂದು ಸಾಮಾನ್ಯಗಳ ಪ್ರಪಂಚದಲ್ಲಿ ಇರುವ ಪರಿಶುದ್ಧ ಸಾಮಾನ್ಯಗಳಾಗಿವೆ. ಮತ್ತೊಂದು ಯಾವ ಆಕಾರ ಮತ್ತು ಲಕ್ಷಣಗಳು ಇಲ್ಲದ ಶುದ್ಧ ಭೌತ ದ್ರವ್ಯ.

ದೇವರು ವಿಶ್ವದ ವಸ್ತುಗಳನ್ನು ಸೃಷ್ಟಿಸುವಾಗ ಸಾಮಾನ್ಯಗಳ ಲೋಕದಲ್ಲಿರುವ ಸಾಮಾನ್ಯಗಳ ರೂಪವನ್ನು ದ್ರವ್ಯದ ಮೇಲೆ ಮುದ್ರಿಸಿ ಆ ಭೌತ ದ್ರವ್ಯವು ಬೇರೆ ಬೇರೆ ಆಕಾರಗಳುಳ್ಳ ವಸ್ತುಗಳಾಗಿ ಮಾರ್ಪಾಡು ಹೊಂದುವಂತೆ ಮಾಡುತ್ತಾನೆ. ಆದರೆ ಆ ಭೌತ ದ್ರವ್ಯವು ಸಾಮಾನ್ಯಗಳ ಸಂಪೂರ್ಣ ರೂಪವನ್ನು ಪಡೆಯದೇ ಕೇವಲ ಅಸ್ಪಷ್ಟ ರೂಪವನ್ನು ಮಾತ್ರ ಪಡೆಯುತ್ತದೆ. ಭೌತ ದ್ರವ್ಯದ ಈ ವಿರೋಧದಿಂದ ಅದು ಸಾಮಾನ್ಯಗಳನ್ನು ಸಂಪೂರ್ಣವಾಗಿ ಪ್ರತಿಬಿಂಬಿಸಲು ಸಾಧ್ಯವಾಗುವುದಿಲ್ಲ. ಆದುದರಿಂದಲೇ ಅದು ಅಸಂಪೂರ್ಣವಾಗಿದೆ. ಭೌತ ಮೂಲವಸ್ತು ಈ ರೀತಿಯಾಗಿ ಅಸ್ಪಷ್ಟ ರೂಪಗಳನ್ನು ಪಡೆಯುವುದರಿಂದಲೇ ಪ್ರಪಂಚದ ವಸ್ತುಗಳು ವೈವಿಧ್ಯಮಯವಾಗಿ ಕಂಡುಬರುತ್ತವೆ. ಬೆಳಕಿನ ಒಂದು ಕಿರಣ ಪಟ್ಟಕದ ಮೂಲಕ ಹರಿದಾಗ ಹೇಗೆ ಬೇರೆ ಬೇರೆ ಬಣ್ಣಗಳಾಗಿ ಪರಿವರ್ತಿತವಾಗುತ್ತದೋ ಅದೇ ರೀತಿ ಒಂದು ಪರಿಪೂರ್ಣ ಸಾಮಾನ್ಯವು ಭೌತದ್ರವ್ಯದ ಮೂಲಕ ಹರಿದಾಗ ಅಸಂಖ್ಯಾತ ಅಪರಿಪೂರ್ಣ ವಸ್ತುಗಳಾಗಿ ಮಾರ್ಪಾಡು ಹೊಂದುತ್ತದೆ. ಉದಾಹರಣೆಗೆ "ಮಾನವ" ಎಂಬ ಸಾಮಾನ್ಯವು ಪರಿ

ಪೂರ್ಣವಾಗಿದ್ದರೂ ಅದು ಭೌತ ದ್ರವ್ಯದ ಮೂಲಕ ಹರಿದಾಗ ಈ ನಶ್ವರ ಪ್ರಪಂಚದ ಅಸಂಖ್ಯಾತ ಅಪರಿಪೂರ್ಣ ಮಾನವರಾಗಿ ಮಾರ್ಪಾಡು ಹೊಂದುತ್ತದೆ. ಇದೇ ರೀತಿ ಎಲ್ಲ ವಸ್ತುಗಳು ಅವುಗಳ ಸಾಮಾನ್ಯಗಳ ಅಪರಿಪೂರ್ಣ ಮುದ್ರೆಗಳಾಗಿವೆ.

ಪ್ಲೇಟೋವಿನ ಈ ವಿಶ್ವ ಶಾಸ್ತ್ರವು ಎರಡು ಮುಖ್ಯ ಅಂಶಗಳನ್ನು ಸೂಚಿಸುತ್ತವೆ. ಮೊದಲನೆಯದಾಗಿ ಈ ಪ್ರಪಂಚದ ಭೌತ ವಸ್ತುಗಳಿಗೆಲ್ಲಾ ಮೂಲವಾದುವುಗಳು ಸಾಮಾನ್ಯಗಳ ಲೋಕದಲ್ಲಿರುವ ಸಾಮಾನ್ಯ ತತ್ವಗಳಾಗಿವೆ ಎಂಬ ಸಿದ್ಧಾಂತ.

ಎರಡನೆಯದಾಗಿ ಇಲ್ಲಿಯ ಪ್ರತಿಯೊಂದು ವಸ್ತುವು ತನ್ನ ನಿಜಸ್ಥಾನವಾದ ಸಾಮಾನ್ಯವನ್ನು ಮರಳಿ ಸೇರುವ ಧ್ಯೇಯವನ್ನೊಳಗೊಂಡಿದೆ ಎಂಬ ಸಿದ್ಧಾಂತ. ಇವುಗಳೆಲ್ಲವೂ ಅಪರಿಪೂರ್ಣಗಳಾದರೂ ಪರಿಪೂರ್ಣತೆಯನ್ನು ಹೊಂದುವ ಸಾಮರ್ಥ್ಯವನ್ನು ಪಡೆದಿವೆ. ತನ್ನ ಗುರಿ ಮುಟ್ಟುವವರೆಗೂ ಪ್ರತಿಯೊಂದು ವಸ್ತುವು ಪರಿಪೂರ್ಣತೆಯನ್ನು ತಲುಪುವ ಪ್ರಯತ್ನವನ್ನು ನಿತ್ಯವೂ ನಡೆಸುತ್ತದೆ. ಈ ಪ್ರಪಂಚದ ಸೃಷ್ಟಿಗಳಲ್ಲೆಲ್ಲಾ ಶ್ರೇಷ್ಠನಾದ ಮಾನವನೂ ಕೂಡ ಆದರ್ಶ ಮಾನವನಾಗಬೇಕೆಂಬ ಉದ್ದೇಶ ಇದ್ದೇ ಇದೆ. ಈ ಉದ್ದೇಶ ಬಾಹ್ಯವಾಗಿರಬಹುದು ಅಥವಾ ಕೇವಲ ಆಂತರಿಕವಾಗಿರಬಹುದು.

ಪ್ಲೇಟೋವಿನ ಮನಶ್ಶಾಸ್ತ್ರ ಮತ್ತು ಆತ್ಮಸಿದ್ಧಾಂತ

ಪ್ಲೇಟೋ ತನ್ನ ಜ್ಞಾನ ಮೀಮಾಂಸೆಯಲ್ಲಿ ಜ್ಞಾನವನ್ನು ಎರಡು ಮುಖ್ಯ ಭಾಗಗಳನ್ನಾಗಿ ವಿಂಗಡಿಸಿದ್ದಾನೆ. ಅವು (1) ಇಂದ್ರಿಯಾನುಭವವನ್ನು ಅವಲಂಬಿಸಿರುವ ಅಭಿಪ್ರಾಯದ ಭಾಗ ಮತ್ತು (2) ಶುದ್ಧಜ್ಞಾನ ಅಥವಾ ವಿಚಾರದ ಆಧಾರವಿರುವ ಭಾಗ. ಈ ಎರಡು ಭಾಗಗಳನ್ನು ಮತ್ತೆ ವಿಂಗಡಿಸಿ ಜ್ಞಾನವೆಂಬ ರೇಖೆಯಲ್ಲಿ ನಾಲ್ಕು ಬೇರೆ ಬೇರೆ ಭಾಗಗಳಿರುವಂತೆ ವಿಭಜಿಸಿದ್ದಾನೆ. ಜ್ಞಾನವನ್ನು ಈ ರೀತಿ ನಾಲ್ಕು ಹಂತಗಳನ್ನಾಗಿ ವಿಂಗಡಿಸಿರುವುದನ್ನು ಆತನ "ವಿಭಜನಾ ರೇಖೆ" ಸಿದ್ಧಾಂತ ಎಂದು ಕರೆಯಲಾಗಿದೆ. ಈ ಸಿದ್ಧಾಂತದ ಪ್ರಕಾರ (1) ಅತ್ಯಂತ ಕೆಳಮಟ್ಟದಲ್ಲಿ ಊಹೆಗಳ ಸಮುದಾಯವಾವಿರುತ್ತದೆ. ಇದು ಭ್ರಾಂತಿ ಮತ್ತು ಸ್ವಪ್ನದ ಹಂತವಾಗಿದೆ (2) ಎರಡನೇ ಹಂತವು ಇಂದ್ರಿಯಾನುಭವಗಳ ಹಂತ. ಇಲ್ಲಿ ಇಂದ್ರಿಯಗಳ ಸಹಾಯದಿಂದ ಪಡೆಯುವ ಬಣ್ಣ, ಶಬ್ದ, ಗಂಧ, ಸ್ಪರ್ಶ ಇವೇ ಮುಂತಾದ ಅಸಂಪೂರ್ಣ ತಿಳುವಳಿಕೆಗಳಿವೆ. ಇವುಗಳಲ್ಲಿ ಸಂಪೂರ್ಣ ಸತ್ಯತೆ ಇಲ್ಲದಿರುವುದರಿಂದ ಅವುಗಳನ್ನು ಜ್ಞಾನವೆನ್ನಲಾಗುವುದಿಲ್ಲ. (3) ಮೂರನೇ ಹಂತವು ವಿಚಾರಗಳ ಹಂತ. ಇದು ಇಂದ್ರಿಯಾನುಭವಗಳ ಸಹಾಯದಿಂದ ಗ್ರಹಿಸಿದ ವಸ್ತುಗಳ ಕಲ್ಪನೆಗಳ ಹಂತ. ಈ ಹಂತವು ಕೂಡ ಪ್ಲೇಟೋವಿನ ಅಭಿಪ್ರಾಯದಲ್ಲಿ ಜ್ಞಾನವಾಗುವುದಿಲ್ಲ. ಇಲ್ಲಿರುವ ಕಲ್ಪನೆಗಳು ಭಿನ್ನ ಭಿನ್ನವಾಗಿರುವ ಇಂದ್ರಿಯಾನುಭವಗಳ ಒಂದು ಕೃತಕ ಸಂಯೋಜನೆಯಾಗಿರುವುದರಿಂದಲೇ ಅವನ್ನು ಜ್ಞಾನವೆಂದು ಪರಿಗಣಿಸಲಾಗುವುದಿಲ್ಲ. (4) ಶುದ್ಧ ಜ್ಞಾನವು ಕೊನೆಯದಾದ

ಆಧ್ಯಾತ್ಮಿಕ ಹಂತದ ಜ್ಞಾನವಾಗಿದೆ. ಈ ಹಂತದಲ್ಲಿ ವಸ್ತುಗಳ ಸಂಪೂರ್ಣ ಹಾಗೂ ವಾಸ್ತವಿಕ ಜ್ಞಾನವಿದ್ದು ಇಂದ್ರಿಯಾನುಭವಗಳಿಗೆ ಯಾವ ಪ್ರಾಶಸ್ತ್ಯವೂ ಇಲ್ಲ.

ಕೆಳಮಟ್ಟದಲ್ಲಿರುವ ಅಭಿಪ್ರಾಯಗಳು ಇಂದ್ರಿಯಾನುಭವಗಳ ಮೂಲವನ್ನು ಹೊಂದಿರುವುದರಿಂದ ಅವು ತಾತ್ಕಾಲಿಕವಾಗಿವೆ ಮತ್ತು ಅಸ್ಪಷ್ಟವಾಗಿವೆ. ಈ ಪ್ರಪಂಚದ ಸಮಸ್ತ ವಸ್ತುಗಳು ಮತ್ತು ಅವುಗಳನ್ನು ಗ್ರಹಿಸುವ ಜ್ಞಾನೇಂದ್ರಿಯಗಳು ಬದಲಾವಣೆಗೆ ಒಳಗಾಗಿರುವುದರಿಂದ ಅವುಗಳಾವುವೂ ಸಂಪೂರ್ಣವಲ್ಲ, ಸತ್ಯವೂ ಅಲ್ಲ. ಸಂಪೂರ್ಣ ಜ್ಞಾನವು ಇಂದ್ರಿಯಗಳ ಆಧಾರವನ್ನು ಅಪೇಕ್ಷಿಸದ ವಿಚಾರದಿಂದ ಮಾತ್ರ ಸಾಧ್ಯ. ಸಂಪೂರ್ಣ ಜ್ಞಾನವನ್ನು ಪಡೆಯುವ ವಿಭಾಗವೇ ಆತ್ಮವಾಗಿದೆ. ಇಂದ್ರಿಯಾನುಭವ ಮತ್ತು ಅಭಿಪ್ರಾಯಗಳನ್ನು ಪಡೆಯುವಲ್ಲಿ ಅದು ಭೌತ ದ್ರವ್ಯವಾದ ಶರೀರವನ್ನು ಅವಲಂಬಿಸಿರುತ್ತದೆ. ಆದರೆ ಸಾಮಾನ್ಯಗಳ ಪ್ರಪಂಚವನ್ನು ಅವಲೋಕಿಸುವಲ್ಲಿ ಅದು ವಿಚಾರವನ್ನು ಮಾತ್ರ ಅವಲಂಬಿಸಿರುತ್ತದೆ. ಪ್ಲೇಟೋವಿನ ಅಭಿಪ್ರಾಯದಲ್ಲಿ ಶರೀರವು ಜ್ಞಾನದ ದಾರಿಯಲ್ಲಿ ಒಂದು ತೊಡಕು.

ಆತ್ಮವು ಪ್ರಪಂಚದ ವಸ್ತುಗಳನ್ನು ವೀಕ್ಷಿಸಿದಾಗ ಅವುಗಳ ಮೂಲವಾದ ಸಾಮಾನ್ಯಗಳ ನೆನಪು ಅದಕ್ಕೆ ಉಂಟಾಗುತ್ತದೆ. ಪ್ಲೇಟೋವಿನ ಪ್ರಕಾರ ಆತ್ಮವು ಸಾಮಾನ್ಯಗಳೆಲ್ಲವನ್ನು ಮೊದಲೇ ಅರಿತಿದ್ದರೂ ಈಗ ಅವುಗಳನ್ನು ಮರೆತು ಅವುಗಳ ಒಗ್ಗೆ ಜ್ಞಾನವಿಲ್ಲದಂತಾಗಿದೆ. ಆತ್ಮವು ಶರೀರದೊಂದಿಗೆ ಬೆರೆತುಕೊಂಡಿರುವುದೇ ಅದರ ಮರೆಯುವಿಕೆಗೆ ಕಾರಣ. ಪ್ರಪಂಚದ ವಸ್ತುಗಳನ್ನು ವೀಕ್ಷಿಸಿದಾಗ ಆತ್ಮಕ್ಕೆ ತಾನು ಹಿಂದೆ ಏನಾಗಿದ್ದೆ, ಯಾವ ಜ್ಞಾನವನ್ನು ಹೊಂದಿದ್ದೆ ಎನ್ನುವುದು ಭಾಸವಾಗುತ್ತದೆ. ಪ್ಲೇಟೋವಿನ ಪ್ರಕಾರ ಮರೆತು ಹೋದುದನ್ನು ಪುನಃ ಸರಿಯಾಗಿ ಜ್ಞಾಪಿಸಿಕೊಳ್ಳುವುದೇ ಜ್ಞಾನವಾಗಿದೆ. ಶರೀರದೊಂದಿಗೆ ಸೇರುವ ಮೊದಲು ಆತ್ಮವು ಶುದ್ಧ ವಿಚಾರವನ್ನು ಹೊಂದಿತ್ತು. ಆದರೆ ಈ ಮಿಳಿತದ ನಂತರ ಆತ್ಮವು ಅಜ್ಞಾನವನ್ನು ಪಡೆಯುತ್ತದೆ. ಶರೀರದೊಡನೆ ಸಂಬಂಧ ಹೊಂದಿರುವುದು ಆತ್ಮಕ್ಕಿರುವ ಒಂದು ತೊಡಕು. ಅದು ಸ್ವತಂತ್ರವಾಗಬೇಕಾದರೆ ಸ್ವಪ್ರಯತ್ನದಿಂದ ತನ್ನ ಮೂಲಜ್ಞಾನವನ್ನು ಮರಳಿ ಪಡೆಯಬೇಕಾಗುತ್ತದೆ.

ಪ್ಲೇಟೋ ಆತ್ಮವನ್ನು ಮೂರು ಭಾಗಗಳನ್ನಾಗಿ ವರ್ಗೀಕರಿಸಿದ್ದಾನೆ.

1) ಅತ್ಯುನ್ನತವಾದ ವಿಚಾರಯುಕ್ತ ಭಾಗ
2) ಮಧ್ಯಮ ತರಗತಿಯ ಚೈತನ್ಯಯುಕ್ತ ಭಾಗ
3) ಕೆಳಮಟ್ಟದ ಆಸೆ–ಆಕಾಂಕ್ಷೆಗಳಿಂದ ಕೂಡಿದ ಭಾಗ

ಮೊದಲ ಭಾಗವು ಪ್ರಧಾನವಾಗಿ ಬೌದ್ಧಿಕ ಭಾಗವಾಗಿದ್ದು ನಮ್ರತೆ, ದಯಾಶೀಲತ್ವ, ವಿನಯ, ಪೂಜ್ಯಭಾವನೆ, ಭಕ್ತಿ ಮುಂತಾದ ಸದ್ಗುಣಗಳಿಂದ ಕೂಡಿದೆ. ಈ ವಿಭಾಗದಲ್ಲಿ ಆತ್ಮವು ಸಾಮಾನ್ಯಗಳ ಚಿಂತನೆಯನ್ನು ಮಾತ್ರ ಮಾಡುತ್ತದೆ.

ಚೈತನ್ಯಯುಕ್ತವಾದ ಎರಡನೇ ಭಾಗವು ಕಾರ್ಯರಂಗದ ಭಾಗವಾಗಿದೆ. ಈ ವಿಭಾಗವು ಚಲನಾಶಕ್ತಿಯಿಂದ ಕೂಡಿದ್ದು ಆಕಾಂಕ್ಷೆ, ಕ್ರೋಧ, ಅಸಮಾಧಾನ, ರೋಷ ಮುಂತಾದ ಗುಣಗಳನ್ನು ಹೊಂದಿದೆ. ಈ ಪ್ರಪಂಚದಲ್ಲಿರುವಷ್ಟು ಕಾಲ ಪ್ರಪಂಚದ ಗತಿಗೆ ಅನುಗುಣವಾಗಿ ಆತ್ಮನನ್ನು ನಡೆಸಿಕೊಳ್ಳುವುದು ಈ ವಿಭಾಗದ ಕಾರ್ಯ.

ಮೂರನೆಯ ಭಾಗವು ಅತಿ ಕೆಳಮಟ್ಟದ ಆಸೆಗಳಿಂದ ಕೂಡಿದ್ದು ಆಹಾರ, ಸಂಪತ್ತು, ವಸತಿ ಮುಂತಾದ ಶಾರೀರಿಕ ತೃಪ್ತಿಯನ್ನು ನಿರೀಕ್ಷಿಸುವ ಭಾಗವಾಗಿದೆ. ಇಲ್ಲಿಯ ಗುಣಗಳು ಸಾಮಾನ್ಯವಾಗಿ ಕೆಳಮಟ್ಟದ ಪ್ರಾಣಿಗಳಲ್ಲಿ ಕಂಡುಬರುವ ಹುಟ್ಟು ಗುಣಗಳಿಗೆ ಸಮಾನವಾಗಿದೆ.

ಆತ್ಮದ ಈ ಮೂರು ಭಾಗಗಳು ಬೇರೆ ಬೇರೆಯಾದರೂ ಒಂದೇ ಆದ ಆತ್ಮವು ಇವುಗಳ ಮಧ್ಯಾಂತರ ಸಮಾನತೆಯಿಂದ ತನ್ನ ಕಾರ್ಯವನ್ನು ನಿರ್ವಹಿಸುತ್ತದೆ. ಈ ಭಾಗಗಳ ಒಂದು ವಿಶಿಷ್ಟತೆಯೆಂದರೆ ಯಾವುದೇ ಒಂದು ಭಾಗವು ಮಾಡುವ ಕೆಲಸವನ್ನು ಮತ್ತೊಂದು ಭಾಗವು ಮಾಡಲಾರದು. ಆದರೆ ಈ ಭಾಗಗಳ ಪ್ರತ್ಯೇಕತೆ, ಅವುಗಳ ಪರಸ್ಪರ ಸಹಕಾರದಿಂದ ಕಾರ್ಯ ನಿರ್ವಹಿಸಲು ಅಡ್ಡಿ ಮಾಡುವುದಿಲ್ಲ. ಆದುದರಿಂದಲೇ ಆತ್ಮದ ಭಾಗಗಳಲ್ಲಿ ಬಹುತ್ವವಿದ್ದು ಪ್ರತ್ಯೇಕ ಕಾರ್ಯಗಳು ಇದ್ದಾಗ್ಯೂ ಆತ್ಮ ಒಂದು ಅವಿಭಾಜ್ಯ ಏಕತೆಯನ್ನು ಪಡೆದಿರುವಂತಿದೆ.

ಆತ್ಮದ ಅಮರತ್ವ

ಪ್ಲೇಟೋವಿನ ಪ್ರಕಾರ ಆತ್ಮವು ನಿತ್ಯವಾದುದು, ಅಮರವಾದುದು ಆಗಿದೆ. ಆತ್ಮ ಎನ್ನುವುದು ಮಾನವನ ವ್ಯಕ್ತಿತ್ವವನ್ನು ನಿರೂಪಿಸುವ ಒಂದು ಸಾಮಾನ್ಯ ತತ್ವವಾಗಿದೆ. ಪ್ಲೇಟೋ ನಿರೂಪಿಸಿರುವ ಸಾಮಾನ್ಯಗಳು ಮಾತ್ರ ನಿತ್ಯವಾದುದರಿಂದ ಅದೇ ಗುಂಪಿಗೆ ಬರುವ ಆತ್ಮನೂ ಅಮರವಾಗಿದೆ. ಆತ್ಮವು ಅಮರ ಎನ್ನುವುದನ್ನು ಪ್ರತಿಪಾದಿಸಲು ಪ್ಲೇಟೋ ಮೂರು ವಾದಗಳನ್ನು ಮಂಡಿಸಿರುತ್ತಾನೆ.

1) ಜ್ಞಾನಮೀಮಾಂಸೆಯ ಆಧಾರವುಳ್ಳ ವಾದ
2) ತತ್ವಮೀಮಾಂಸೆಯ ಆಧಾರವುಳ್ಳ ವಾದ ಮತ್ತು
3) ನೈತಿಕ ತತ್ವದ ಆಧಾರವುಳ್ಳ ವಾದ

ಜ್ಞಾನಮೀಮಾಂಸೆಯ ಆಧಾರದ ವಾದದಂತೆ ನಿತ್ಯವಾದ ಸಾಮಾನ್ಯಗಳನ್ನು ಅವುಗಳ ನಿಜಸ್ಥಿತಿಯಲ್ಲಿ ಅರಿಯುವ ಆತ್ಮವು ತಾನು ಸ್ವತಃ ನಿತ್ಯವೇ ಆಗಿರಬೇಕು. ಅಂದರೆ ನಿತ್ಯ–ಸತ್ಯವಾದ ಅಂಶಗಳನ್ನು ಇಂದ್ರಿಯಾನುಭವವೇ ಮುಂತಾದ ಅನಿತ್ಯವಾದ ಅಂಶಗಳಿಂದ ತಿಳಿಯಲು ಸಾಧ್ಯವಿಲ್ಲ. ಸಾಮಾನ್ಯ ಪ್ರಪಂಚದಲ್ಲಿರುವ ಸಾಮಾನ್ಯಗಳನ್ನು ಅರಿಯಲು ಈ ಪ್ರಪಂಚದ ಯಾವ ಮಾಧ್ಯಮವೂ ಸಹಕಾರಿಯಾಗದೆ ಇರುವುದರಿಂದ ಆತ್ಮ ಒಂದರಿಂದ ಮಾತ್ರ ಅದು ಸಾಧ್ಯ. ಜ್ಞಾನವೆನ್ನುವುದು ಪುನಃಸ್ಮೃತಿ ಆಗು

ವುದರಿಂದ ಆತ್ಮವು ಎಲ್ಲಾ ಸಾಮಾನ್ಯಗಳನ್ನು ಹಿಂದೆಯೇ ಅರಿತಿದ್ದು ಇಂದು ಅವು ಗಳನ್ನು ಸ್ಮರಿಸಿಕೊಳ್ಳುವಂತಹ ಅಮರ ಅಂಶವೇ ಆಗಿರಬೇಕು.

ಎರಡನೆಯದಾಗಿ ಆತ್ಮವು ತಾನು ಅರಿತಿರುವ ಸತ್ಯಗಳನ್ನು ಇಂದಿಗೂ ಸ್ಮರಿಸಿ ಕೊಳ್ಳುವುದರಿಂದ, ಹಿಂದಿದ್ದ ಆತ್ಮವೇ ಇಂದೂ ಇದೆ ಎಂದು ಅರ್ಥವಾಗುತ್ತದೆ. ಆದುದರಿಂದ ಆತ್ಮವು ಅಮರ.

ತತ್ವ ಮೀಮಾಂಸೆಯ ಆಧಾರವನ್ನು ಪಡೆದ ವಾದದಲ್ಲಿಯೂ ಎರಡು ವಿಭಾಗಗಳಿವೆ.

ಮೊದಲನೆಯ ವಿಭಾಗವು ಆತ್ಮದ ಏಕತೆ ಮತ್ತು ಸರಳತೆಯನ್ನು ಪ್ರತಿಪಾದಿಸಿ ಅದು ಅಮರವೆಂದು ಸಾಧಿಸುತ್ತದೆ. ವಾಸ್ತವವಾಗಿ ಆತ್ಮವು ಸರಳವಾಗಿದ್ದು ಅವಿಭಾಜ್ಯವಾದುದಾಗಿದೆ. ಅಂದರೆ ಅದು ಬೇರೆ ಬೇರೆ ಭಾಗಗಳ ಜೋಡಣೆಯಿಂದ ಕೂಡಿಲ್ಲವೆಂದು ಅಥವಾ ಭಾಗಗಳ ಬೇರ್ಪಡುವಿಕೆಯಿಂದ ನಾಶ ಹೊಂದುವಂತಹದಲ್ಲ ವೆಂದು ಅರ್ಥವಾಗುತ್ತದೆ. ಸಂಯೋಜನೆ ಮತ್ತು ವಿಭಜನೆ ನಿಯಮಕ್ಕೆ ಒಳಗಾದ ಪ್ರತಿಯೊಂದು ವಸ್ತುವೂ ಅನಿತ್ಯವಾದುದು. ಆತ್ಮವು ಈ ನಿಯಮಕ್ಕೆ ಹೊರತಾಗಿರು ವುದರಿಂದ ಅದು ನಿತ್ಯವಾಗಿರಬೇಕು.

ಈ ವಾದದ ಎರಡನೇ ಭಾಗವು ಆತ್ಮದ ಚೈತನ್ಯವನ್ನು ಪ್ರತಿಪಾದಿಸುತ್ತದೆ. ಆತ್ಮ ವೆನ್ನುವುದು ಪ್ರತಿಯೊಂದು ಜೀವಿಯ ಮೂಲಾಂಶವಾಗಿದೆ. ಈ ಮೂಲಾಂಶವೇ ನಶಿಸು ತ್ತದೆ ಎಂದರೆ ಜೀವ ಎನ್ನುವುದು ನಶ್ವರ ಅಥವಾ ಸಾವು ಎಂಬ ವ್ಯಾಘಾತಕ (ವಿರುದ್ಧ) ಅರ್ಥವನ್ನು ಕೊಡುತ್ತದೆ. ಆದುದರಿಂದ ಜೀವನ ಮೂಲಾಧಾರವಾದ ಆತ್ಮವು ನಾಶ ಹೊಂದಲು ಸಾಧ್ಯವೇ ಇಲ್ಲ. ಆದುದರಿಂದ ಆತ್ಮ ಅಮರ.

ನೀತಿ ತತ್ವದ ಆಧಾರವಿರುವ ವಾದವು ಕೂಡ ಎರಡು ಅಂಶಗಳಿಂದ ಕೂಡಿದೆ.

ಮೊದಲನೆಯದಾಗಿ ಒಂದು ಮಿತಿಗೊಳಪಟ್ಟಿರುವ ಭೌತ ಶರೀರದ ಅಸ್ತಿತ್ವದ ಉದ್ದಕ್ಕೂ ಅದರೊಡನಿರುವ ಮತ್ತು ಆ ಶರೀರಕ್ಕಿಂತಲೂ ಉನ್ನತ ಸ್ಥಾನವನ್ನು ಪಡೆದಿ ರುವ ಆತ್ಮವು ಅಮರವಾಗಿರಲೇಬೇಕು. ಹುಟ್ಟಿನಿಂದ ಸಾಯುವವರೆಗೆ ಶರೀರದಲ್ಲಿ ಏನೇ ಬದಲಾವಣೆಗಳಾದರೂ ಈ ಬದಲಾವಣೆಗಳ ಹಿಂದೆ ಯಾವ ಬದಲಾವಣೆಯನ್ನೂ ಕಾಣದ ಪ್ರಜ್ಞೆಯು ಆತ್ಮದ ಅಮರತ್ವಕ್ಕೆ ಒಂದು ನಿದರ್ಶನ.

ಎರಡನೆಯದಾಗಿ ನ್ಯಾಯದ ದೃಷ್ಟಿಯಿಂದಲೂ ಆತ್ಮ ಅಮರವಾಗಿರಲೇಬೇಕು. ನಾವು ಮಾಡಿದ ಪ್ರತಿಯೊಂದು ಕೆಲಸ ಕಾರ್ಯಕ್ಕೂ ಪ್ರತಿಫಲವಿದ್ದೇ ಇರುತ್ತದೆ. ಇದು ಕಾರ್ಯ ಕಾರಣ ನಿಯಮ, ಇದನ್ನೇ ನೀತಿ ಶಾಸ್ತ್ರದಲ್ಲಿ ಕರ್ಮ ನಿಯಮವೆನ್ನುತ್ತೇವೆ. ನಮ್ಮ ಜೀವಿತ ಒಂದರಲ್ಲಿ ನಾವು ಮಾಡಿದ ಎಲ್ಲಾ ಕರ್ಮಗಳ ಪರಿಣಾಮಗಳನ್ನು ಅನುಭ ವಿಸಲು ಸಾಧ್ಯವಿಲ್ಲ. ನಶ್ವರವಾದ ಶರೀರದ ಅವಧಿ ಮುಗಿದ ಬಳಿಕ ಇನ್ನು ಅನುಭವಿಸದೇ ಉಳಿದಿರುವ ಪರಿಣಾಮಗಳನ್ನು ಅನುಭವಿಸಲು ಅನುಭೋಗಿಯೊಬ್ಬ ಇರಲೇಬೇಕು. ಈ ಅನುಭೋಗಿಯೇ ಆತ್ಮ. ಆದುದರಿಂದ ಆತ್ಮವು ಒಂದು ಶರೀರದಿಂದ ಬೇರ್ಪಟ್ಟು ಬೇಕಿದ್ದರೆ ಮತ್ತೊಂದು ಶರೀರವನ್ನು ಸೇರುವ ಅಮರತ್ವವನ್ನು ಪಡೆದಿದೆ.

ಸಂಪೂರ್ಣ ವಿಚಾರದಿಂದ ಕೂಡಿದ ಆತ್ಮ ಅಚೇತನವಾದ ಶರೀರದೊಂದಿಗೆ ಹೇಗೆ ಸೇರಿಕೊಳ್ಳುತ್ತದೆ ಎಂಬ ಪ್ರಶ್ನೆಗೆ ಪ್ಲೇಟೋ ಆಧ್ಯಾತ್ಮಿಕ ಸ್ವರೂಪದ ಉತ್ತರವನ್ನು ಕೊಡುತ್ತಾನೆ. ಆದರೆ ಈ ಉತ್ತರ ಸಮರ್ಪಕವಾದ ವಿವರಣೆಯನ್ನು ಕೊಡುವುದಿಲ್ಲ. ಆತನ ಪ್ರಕಾರ ಪರಿಶುದ್ಧವಾದ ಆತ್ಮವು ಯಾವುದೋ ಘಳಿಗೆಯಲ್ಲಿ ಸಂಪರ್ಕ ಹೊಂದಬೇಕೆಂಬ ಆಸಕ್ತಿಯಿಂದ ಭವ ಬಂಧನಕ್ಕೆ ಒಳಗಾಗುತ್ತದೆ. ಕಾಲಾನಂತರದಲ್ಲಿ ಭೌತ ವಸ್ತುಗಳೊಡನೆ ಜೀವನ ನಡೆಸುತ್ತಿರುವಾಗ ಅದಕ್ಕೆ ತನ್ನ ಹಿಂದಿನ ಪರಿಪೂರ್ಣಾವಸ್ಥೆಯು ನೆನಪು ಮರುಕಳಿಸುತ್ತದೆ. ಅದರೊಡನೆ ತಾನು ಹಿಂದೆ ತಿಳಿದಿದ್ದ ಸಾಮಾನ್ಯಗಳ ಬಗ್ಗೆಯೂ ಒಂದೊಂದಾಗಿ ಸ್ಮೃತಿಯನ್ನು ಪಡೆಯುತ್ತದೆ. ಆತ್ಮದ ಈ ಜ್ಞಾನವು ಅದು ಪುನಃ ತನ್ನ ಸ್ವಸ್ಥಾನವನ್ನು ಸೇರಲು ಪ್ರೇರೇಪಿಸುತ್ತದೆ. ಈ ಪ್ರೇರಣೆಯ ಪರಿಣಾಮದಿಂದಾಗಿ ಅದು ತನ್ನಲ್ಲಿರುವ ಕೆಳಮಟ್ಟದ ವಸ್ತು ವಿಷಯವನ್ನು ಒಂದೊಂದಾಗಿ ಕಳಚಿಕೊಳ್ಳುತ್ತಾ ಮುಂದುವರಿಯಲು ಪ್ರಯತ್ನಿಸುತ್ತದೆ. ಈ ಪ್ರಯತ್ನದಲ್ಲಿ ಅದು ಜಯಗಳಿಸಿದರೆ ದ್ರವ್ಯ ಬಂಧನದಿಂದ ಬಿಡುಗಡೆಯಾಗಿ ನೈಜ ಅಸ್ತಿತ್ವವನ್ನು ಮರಳಿ ಪಡೆಯುತ್ತದೆ. ಈ ದಾರಿಯಲ್ಲಿ ನಡೆಯುವ ಒಂದು ವೇಳೆ ಅದು ಇನ್ನೂ ದ್ರವ್ಯಾಕಾಂಕ್ಷೆಯನ್ನು ಪಡೆದಿದ್ದರೆ ಹಂತ ಹಂತವಾಗಿ ಇನ್ನೂ ಕೆಳಮಟ್ಟಕ್ಕೆ ಇಳಿಯುತ್ತದೆ.

ಬಂಧನಕ್ಕೊಳಗಾದ ಆತ್ಮದ ಆರೋಹಣವು ಸಾಮಾನ್ಯಗಳ ಆದರ್ಶ, ಸೌಂದರ್ಯ ಮತ್ತು ಮೌಲ್ಯಗಳ ಸ್ಮೃತಿಯಿಂದ ಪ್ರಾರಂಭವಾಗುತ್ತದೆ. ಈ ಸಾಮಾನ್ಯಗಳ ಮತ್ತು ಸೌಂದರ್ಯ ಪ್ರಜ್ಞೆ ಆತ್ಮದ ಏಳಿಗೆಗೆ ಸ್ಫೂರ್ತಿಯನ್ನು ನೀಡುತ್ತದೆ. ಸೌಂದರ್ಯವು ಕೂಡ ಇತರ ಸಾಮಾನ್ಯಗಳಂತೆ ಆತ್ಮಕ್ಕೆ ಪುನಃ ಸ್ಮೃತಿಯನ್ನು ನೀಡುತ್ತದೆ ಎಂಬ ಪ್ಲೇಟೋವಿನ ಸಿದ್ಧಾಂತವನ್ನು ಈರಾಸ್ (Eros) ಸಿದ್ಧಾಂತ ಎಂದು ಕರೆಯುತ್ತಾರೆ. ಇದರ ಪ್ರಕಾರ ಮೌಲ್ಯವನ್ನು ಮತ್ತು ಪರಮ ಸೌಂದರ್ಯವನ್ನು ಹೊಂದಲು ಅಪೇಕ್ಷಿಸುವ ಆತ್ಮವು ಅವುಗಳ ಸಂಪೂರ್ಣ ಜ್ಞಾನವನ್ನು ಪಡೆಯುವುದರ ಮೂಲಕ ಅಮರತ್ವವನ್ನು ಗಳಿಸುತ್ತದೆ.

ಪ್ಲೇಟೋವಿನ ನೀತಿಶಾಸ್ತ್ರ

ಸಾಕ್ರಟೀಸನು ಇದಕ್ಕೆ ಪರಿಹಾರವನ್ನು ಕಂಡುಹಿಡಿಯಲು ಪ್ರಯತ್ನಿಸಿದ. ನೀತಿಶಾಸ್ತ್ರದ ಹಲವಾರು ಸಮಸ್ಯೆಗಳನ್ನು ಪ್ಲೇಟೋ ಪುನಃ ಪರಿಶೀಲಿಸುತ್ತಾನೆ. ಶ್ರೇಯಸ್ಸಿನ ಜೀವನ ಎಂದರೇನು ? ವಿಚಾರಶೀಲರಾದವರ ಬದುಕಿನ ರೀತಿ ನೀತಿಗಳೇನು ? ಯಾವ ಯಾವ ತತ್ವಗಳು ನಮ್ಮ ಜೀವನವನ್ನು ನಿಯಂತ್ರಿಸಬೇಕು ಮುಂತಾದ ಪ್ರಶ್ನೆಗಳು ಪ್ಲೇಟೋ ಪರಿಶೀಲನೆಗೊಳಪಡಿಸಿದ ಕೆಲವು ಪ್ರಮುಖವಾದ ನೈತಿಕ ಪ್ರಶ್ನೆಗಳಾಗಿವೆ. ಇವುಗಳಿಗೆ ಉತ್ತರವನ್ನು ಕೊಡುವ ಪ್ಲೇಟೋನ ಪ್ರಯತ್ನವು ಆತನ ಆಧ್ಯಾತ್ಮ ಶಾಸ್ತ್ರದ ಬೆಂಬಲವನ್ನು ಪಡೆದಿವೆ.

ಪ್ಲೇಟೋವಿನ ಪ್ರಕಾರ ಪ್ರಪಂಚವು ಆದಿಯಿಂದಲೂ ವಿಚಾರಯುಕ್ತವಾಗಿದ್ದ ಆಧ್ಯಾತ್ಮಿಕ ಅಥವಾ ಚಿದಾತ್ಮಕ ಸ್ವರೂಪವುಳ್ಳ ಒಂದು ವ್ಯವಸ್ಥೆಯಾಗಿದೆ. ಅದರ ಇಂದ್ರಿಯಗಳಿಗೆ ಗೋಚರವಾಗುವ ವಸ್ತುಗಳು ನಿತ್ಯಗಳಾಗಿರದೆ ಕೇವಲ ಸಾಮಾನ್ಯಗಳ ಚಲಿಸುವ ಪ್ರತಿಬಿಂಬಗಳಾಗಿವೆ. ನಿತ್ಯವಾದ ಸಾಮಾನ್ಯಗಳು ಮಾತ್ರ ಸತ್ಯ ಎನ್ನು ವುದು ಪ್ಲೇಟೋವಿನ ಸಿದ್ಧಾಂತ. ಆದುದರಿಂದ ಬದಲಾವಣೆಗೆ ಒಳಗಾಗಿರುವ ಯಾವ ವಸ್ತುವೂ ನಿರ್ದಿಷ್ಟ ಮೌಲ್ಯವನ್ನು ಹೊಂದಿರುವುದಿಲ್ಲ. ಇಂತಹ ಮೌಲ್ಯವನ್ನು ಅತ್ಯಂತ ಉನ್ನತವಾದ ಸತ್ಯವನ್ನು ಮತ್ತು ಶುಭವನ್ನು ಅರಿಯಲು ಶಕ್ತವಾಗಿರುವ ವಿಚಾರ ಮಾತ್ರ ಪಡೆದಿದೆ. ಆದುದರಿಂದ ಇದು ಮಾನವನಲ್ಲಿ ಭಾಗಶಃ ಪ್ರಕಟವಾಗಿದ್ದು ಮೂಲತಃ ಗೋಪ್ಯವಾಗಿರುವ ವಿಚಾರಾತ್ಮಕ ಭಾಗ ಮಾತ್ರ ಸರಿಯಾದ, ಸತ್ಯವಾದ ಮತ್ತು ಮೌಲ್ಯಯುಕ್ತವಾದ ಭಾಗವಾಗಿದೆ. ಈ ವೈಚಾರಿಕ ಭಾಗವನ್ನು ಬೆಳೆಸಿ ಪರಿ ಪೂರ್ಣಗೊಳಿಸುವುದೇ ಮಾನವ ಜೀವನದ ಮುಖ್ಯ ಧ್ಯೇಯವಾಗಿದೆ. ಈ ಭಾಗದಲ್ಲಿ ಮಾತ್ರ ಅಮರತ್ವದ ಅಂಶ ಕಂಡುಬರುತ್ತದೆ. ಶರೀರ ಎನ್ನುವುದು ಈ ವೈಚಾರಿಕ ಆತ್ಮ ಇರುವ ಒಂದು ಕಾರಾಗೃಹ. ಈ ಕಾರಾಗೃಹದಿಂದ ಪಾರಾಗುವುದೇ ಜೀವನದ ಮುಖ್ಯ ಧ್ಯೇಯ. ವಿಚಾರವನ್ನು ಪರಿಪೂರ್ಣವಾಗಿ ಬೆಳಸಿ ಆ ಮುಖಾಂತರ ಜೀವನ ವನ್ನು ನಿತ್ಯಸತ್ಯಗಳಾದ ಸಾಮಾನ್ಯಗಳಲ್ಲಿ ಧ್ಯಾನಾಸಕ್ತನಾಗಿರುವಂತೆ ಪರಿವರ್ತಿಸುವುದೇ ದೇಹದ ಬಂಧನದಿಂದ ಬಿಡಿಸಿಕೊಳ್ಳಲು ಇರುವ ಒಂದೇ ದಾರಿ.

ದ್ರವ್ಯದ ಬಂಧನದಿಂದ ಆತ್ಮದ ಬಿಡುಗಡೆಯಾಗಬೇಕಾದರೆ ಮೊಟ್ಟ ಮೊದಲಿಗೆ ಆತ್ಮದ ವಿಚಾರಯುಕ್ತ ಭಾಗದಲ್ಲಿ ರಚನಾತ್ಮಕ ಮುಂದಾಲೋಚನೆ ಬೆಳೆಯಬೇಕು. ಭವಿಷ್ಯವನ್ನು ಅರಿಯಲು ಮತ್ತು ನಿರ್ಧರಿಸಲು ಈ ವಿಚಾರಯುಕ್ತ ಭಾಗ ಮಾತ್ರ ಸಮರ್ಥವಾಗಿದೆ. ಮುಂದಾಲೋಚನೆ ಪಡೆದ ಈ ಭಾಗವು ಇತರ ಎರಡು ಭಾಗಗಳನ್ನು ಹತೋಟಿಯಲ್ಲಿಡಲು ಪ್ರಯತ್ನಿಸಬೇಕು. ಯಾವ ಮನುಷ್ಯನಲ್ಲಿ ವಿಚಾರಶಕ್ತಿಯು ಆಸೆ–ಆಕಾಂಕ್ಷೆಗಳಿಂದ ಕೂಡಿದ ಕೆಳಮಟ್ಟದ ಭಾಗಗಳನ್ನು ಹತೋಟಿಯಲ್ಲಿಡುವುದೋ ಅಂತಹ ವ್ಯಕ್ತಿಯು "ಜ್ಞಾನಿ" ಎನಿಸಿಕೊಳ್ಳುತ್ತಾನೆ. ವಿಚಾರ ಶಕ್ತಿಯ ಪ್ರಭಾವದಿಂದ ಈತ ಸರಿ–ತಪ್ಪುಗಳ, ಒಳಿತು–ಕೆಡಕುಗಳ ಸಂಪೂರ್ಣ ಅರಿವನ್ನು ಪಡೆದಿರುತ್ತಾನೆ. ಆತ್ಮದ ಚೈತನ್ಯಯುಕ್ತ ಭಾಗ ಯಾವಾಗಲೂ ವಿಚಾರಯುಕ್ತ ಭಾಗದ ಆಜ್ಞೆಗಳನ್ನು ಪಾಲಿಸುವಂತಿರಬೇಕು. ವಿಚಾರಯುಕ್ತ ಭಾಗ ಮತ್ತು ಚೈತನ್ಯದ ಭಾಗಗಳನ್ನು ಉತ್ತಮ ಶಿಕ್ಷಣ ಮತ್ತು ತರಬೇತಿಯ ಸಹಾಯದಿಂದ ಪರಿಪೂರ್ಣಗೊಳಿಸಿದರೆ ಅವೆರಡೂ ಸೇರಿ ಕೆಳಮಟ್ಟದ ಭಾಗವನ್ನು ನಿಯಂತ್ರಿಸುವುದು ಸುಲಭವಾಗುತ್ತದೆ. ಯಾವ ಮನುಷ್ಯ ನಲ್ಲಿ ಚೈತನ್ಯಯುಕ್ತ ಭಾಗವು ಸುಖ–ದುಃಖಗಳ, ಕಷ್ಟ–ಕಾರ್ಪಣ್ಯಗಳ ಪರಿವೆ ಇಲ್ಲದೆ ಒಂದೇ ರೀತಿಯಲ್ಲಿ ವರ್ತಿಸುವುದೋ ಆತನನ್ನು ಪ್ಲೇಟೋ ಧೈರ್ಯಶಾಲಿ ಎಂದು ಕರೆದಿ ದ್ದಾನೆ. "ಧೈರ್ಯ" ಎಂದರೆ ಈ ಪ್ರಪಂಚದಲ್ಲಿ ಇರಬಹುದಾದ ಯಾವುದೇ ವಿರೋಧಾ ಭಾಸವನ್ನು ಸಮುಸ್ಥಿತಿಯಿಂದ ಎದುರಿಸುವ ಕೆಚ್ಚು. ಚೈತನ್ಯಯುಕ್ತ ಭಾಗವು

ಕ್ರಿಯಾಶೀಲತೆಯಿಂದ ಕೂಡಿರುವುದರಿಂದ ಪ್ರಾಪಂಚಿಕ ವಿರುದ್ಧಗಳು ಅದರ ಮೇಲೆ ಪರಿಣಾಮವನ್ನು ಬೀರುವುದು ಸಹಜ. ಆದರೆ ಈ ಪರಿಣಾಮವನ್ನು ಎದುರಿಸುವ ಶಕ್ತಿ ಮತ್ತು ಧೈರ್ಯವನ್ನು ಚೈತನ್ಯದ ಭಾಗವು ವಿಚಾರ ಭಾಗದಿಂದ ಪಡೆಯುತ್ತದೆ. ಚೈತನ್ಯದ ಭಾಗವಲ್ಲಿ ವಿಚಾರದ ಅಧಿಕಾರದಿಂದ ಮತ್ತು ಹತೋಟಿಯಿಂದ ಪ್ರಾಪ್ತವಾದ ಧೈರ್ಯವು ಎಲ್ಲಾ ರೀತಿಯ ಸುಖ-ದುಃಖಗಳನ್ನು ಸಮಸ್ಥಿತಿಯಿಂದ ಎದುರಿಸಲು ಶಕ್ತವಾಗುತ್ತದೆ. ಇದರಿಂದಾಗಿ ಚೈತನ್ಯ ಭಾಗದೊಡನೆ ಆಸೆಯ ಭಾಗವು ವಿಚಾರ ಯುಕ್ತ ಭಾಗದ ಅಧಿಕಾರಕ್ಕೆ ಒಳಗಾಗುತ್ತದೆ. ಇದರಿಂದ ಆತ್ಮ ಸಂಯಮ ಉಂಟಾಗುತ್ತದೆ. ಪ್ರಪಂಚದೊಡನೆ ಸಂಪರ್ಕ ಪಡೆಯುವ ಇಂದ್ರಿಯಗಳು ಆಸೆಯ ವಿಭಾಗದಿಂದ ಪ್ರೇರಿತವಾಗುವ ಚಾಪಲ್ಯಗಳನ್ನು ಕಳೆದುಕೊಂಡು ವಿವೇಕದ ನಿಯಂತ್ರಣದೊಳಗೆ ಸೇರಿಕೊಳ್ಳುತ್ತವೆ. ಇಂದ್ರಿಯಗಳ ಹತೋಟಿ ಆತ್ಮದ ಏಳಿಗೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಯಾರಲ್ಲಿ ಈ ಗುಣದ ಕೊರತೆ ಇದೆಯೋ ಅತನು ಅನಾಗರಿಕನೆನಿಸಿಕೊಳ್ಳುತ್ತಾನೆ. "ಜ್ಞಾನ", "ಧೈರ್ಯ" ಮತ್ತು "ಆತ್ಮ ಸಂಯಮ"ಗಳು ಒಂದಕ್ಕೊಂದು ಸಹಕಾರಿಯಾಗಿ ಪರಿಪೂರ್ಣತೆಯನ್ನು ಪಡೆದಾಗ ಅದನ್ನು ಹೊಂದಿರುವ ವ್ಯಕ್ತಿ ಸದ್ವರ್ತನೆಯಿಂದ ಕೂಡಿದವನಾಗಿರುತ್ತಾನೆ. ಸದ್ವರ್ತನೆ ಎಂಬುದು ಆತ್ಮ ಸಾಮರಸ್ಯದ ಪರಮಾವಧಿಯಾಗಿದೆ. ಆತ್ಮದ ಪ್ರತಿಯೊಂದು ಭಾಗವು ತನ್ನ ಕರ್ತವ್ಯವನ್ನು ಈ ಸದ್ಗುಣಗಳ ಸಹಾಯದಿಂದ ನಿರ್ವಹಿಸಿದರೆ ಅದೊಂದು ನ್ಯಾಯವಾದ ಅಥವಾ ಸದ್ವರ್ತನಾಶೀಲ ಜೀವನವೆನಿಸಿಕೊಳ್ಳುತ್ತದೆ. ಪ್ಲೇಟೋವಿನ ಅಭಿಪ್ರಾಯದಲ್ಲಿ ನಿಯಮಬದ್ಧವಾದ ಜೀವನವು ಈ ನಾಲ್ಕು ಸದ್ಗುಣಗಳಿಂದ ಕೂಡಿರಬೇಕು. ಇಂತಹ ನ್ಯಾಯ ಜೀವಿಯಾದವನು ದೇವತೆಗಳಿಗೂ, ಮಾನವರಿಗೂ ಸಲ್ಲಬೇಕಾದ ಋಣವನ್ನು ಸಲ್ಲಿಸುವವನಾಗಿಯೂ, ಸುಳ್ಳು ಹೇಳದವನಾಗಿಯೂ, ಕಳ್ಳತನವನ್ನು ಮಾಡದವನಾಗಿಯೂ, ಮತ್ತು ದೇಶಕ್ಕೆ ದ್ರೋಹವನ್ನು ಬಗೆಯದವನಾಗಿಯೂ ಇರುತ್ತಾನೆ. ನ್ಯಾಯ ಅಥವಾ ಸದ್ವರ್ತನೆ ಎನ್ನುವುದು ಪ್ಲೇಟೋವಿನ ಪ್ರಕಾರ ಒಂದು ಮಹಾಸದ್ಗುಣ ಮತ್ತು ಇದನ್ನು ಹೊಂದಿದವರು ಯಾವ ಕ್ಷೇತ್ರದಲ್ಲಿಯೂ ತಪ್ಪು ಮಾಡಲಾರರು. ಆತ್ಮವು ತನ್ನ ಮೂರು ವರ್ಗಗಳಲ್ಲಿಯೂ ಪರಿಪೂರ್ಣತೆಯನ್ನು ಪಡೆದಿರಬೇಕು. ಅದು ನಾಲ್ಕು ಮಹಾಸದ್ಗುಣಗಳನ್ನು ಹೊಂದಿರಬೇಕು ಮತ್ತು ಈ ಸದ್ಗುಣಗಳ ಸಹಾಯದಿಂದ ಪ್ರತಿಯೊಂದು ಕಾರ್ಯವನ್ನು ತಪ್ಪಾಗದಂತೆ ನಿರ್ವಹಿಸಬೇಕು. ಇದು ಪ್ಲೇಟೋನ ಪ್ರಕಾರ ನೈತಿಕ ಜೀವನದ ಮುಖ್ಯ ಗುರಿ. ಆದುದರಿಂದ ವಿಚಾರಶೀಲವಾದ ಜೀವನವೇ ಸದ್ಗುಣಗಳಿಂದ ಕೂಡಿದ ಜೀವನ. ಅದುವೇ ಮಾನವ ಜೀವಿತದ ಧ್ಯೇಯ. ಸದ್ಗುಣಗಳ ಆಧಾರವನ್ನು ಪಡೆದಿರುವ ಜೀವನವೇ ಸಂತುಷ್ಟ ಜೀವನ ಮತ್ತು ಆತ್ಮ ಸಾಮರಸ್ಯವನ್ನು ಹೊಂದಿರುವ ಮನುಷ್ಯನೇ ಸಂತುಷ್ಟ ಜೀವಿ.

ಎಚ್. ಎಂ. ನಾಗರಾಜರಾವ್

ಶಾಸನಗಳಲ್ಲಿ ಅಧ್ಯಾತ್ಮದ ಎಳೆಗಳು

ಶಾಸನಗಳು ಮೂಲಭೂತವಾಗಿ ಐತಿಹಾಸಿಕ ದಾಖಲೆಗಳು. ಕಾಗದದ ಅಥವಾ ಓಲೆಗರಿಯ ಮೇಲಿನ ಬರಹವನ್ನು ಹೊರತುಪಡಿಸಿ ಉಳಿದೆಲ್ಲ ಬರಹ, ಲಿಪಿಕೆತ್ತನೆಗಳನ್ನು ಶಾಸನಗಳೆಂದು ಸ್ಥೂಲವಾಗಿ ಕರೆಯಬಹುದು. ನಾಣ್ಯಗಳ ಮೇಲಿನ ಲಿಪಿಕೆತ್ತನೆಯನ್ನು ಆಲೇಖವೆಂದು ಕರೆಯಲಾಗಿದ್ದು ಅದನ್ನು ಶಾಸನ ಬರಹದಿಂದ ಪ್ರತ್ಯೇಕಿಸಿದೆ.

ಇತಿಹಾಸದ ಪುನರ್ ರಚನೆಗೆ ನೆರವಾಗುವ ಆಕರ ಅಥವಾ ಆಧಾರಗಳಲ್ಲಿ ಶಾಸನಗಳ ಪಾತ್ರ ಗಣನೀಯವಾದುದು. ಯಾವುದೋ ದೇವಾಲಯದ ನಿರ್ಮಾಣ ಅಥವಾ ಅದರ ಜೀರ್ಣೋದ್ಧಾರ, ಕೆರೆ ಭಾವಿಗಳ ಅಗೆತ, ದೇವಬ್ರಾಹ್ಮಣರಿಗೆ, ದೇವಾಲಯಗಳಿಗೆ, ವಿದ್ವಾಂಸರಿಗೆ, ವೀರರಿಗೆ ಮತ್ತು ಇತರ ಖಾಸಗಿ ವ್ಯಕ್ತಿಗಳಿಗೆ ನೀಡಲಾದ ದಾನ ದತ್ತಿ ಇವೇ ಮುಂತಾದ ವಿಷಯಗಳು ಶಾಸನಗಳಲ್ಲಿ ನಿರೂಪಿತವಾಗಿರುತ್ತವೆ. ವಿಷಯ ನಿರೂಪಣೆಗಷ್ಟೇ ಸೀಮಿತವಾಗಿದ್ದ ಶಾಸನಗಳು ಕ್ರಮೇಣ ಸಾಹಿತ್ಯಿಕವಾಗಿಯೂ ಗಮನಾರ್ಹವೆನಿಸಿದವು ; ಶಾಸನ ಕಾವ್ಯಗಳೆನಿಸಿದವು. ಇತಿಹಾಸವನ್ನು ಸಾಹಿತ್ಯಿಕವಾಗಿ ಶ್ರೇಷ್ಠಮಟ್ಟದ ಭಾಷೆ ಶೈಲಿಗಳಲ್ಲಿ ನಿರೂಪಿಸಿರುವುದನ್ನು ಕಾಣುತ್ತೇವೆ. ಆದರೆ ಶಾಸನಗಳಲ್ಲಿ ಇತಿಹಾಸ ಪ್ರಾಥಮಿಕ ಮತ್ತು ಸಾಹಿತ್ಯ ಆನುಷಂಗಿಕ ಎಂಬುದನ್ನು ಮರೆಯಲಾಗದು. ಯಾಕೆಂದರೆ ಶಾಸನಗಳನ್ನು ಕಾವ್ಯವಾಗಲಿ ಎಂಬ ಉದ್ದೇಶದಿಂದ ರಚಿಸಲಿಲ್ಲ. "ಸುಪ್ರಸಿದ್ಧರು, ಸುಪ್ರಸಿದ್ಧರಲ್ಲದಿದ್ದರೂ ನಿಜವಾಗಿಯೂ ಪ್ರತಿಭಾಶಾಲಿಗಳಾಗಿದ್ದು ದುರದೃಷ್ಟವಶಾತ್ ತಾವು ಬರೆದ ಕಾವ್ಯಗಳು ಮುಂದೆ ಪ್ರಸಿದ್ಧಿಗೆ ಬಾರದೆ ಹಿನ್ನೆಲೆಯಲ್ಲಿ ಉಳಿದವರು, ಸಾಮಾನ್ಯರು — ಹೀಗೆ ಎಲ್ಲ ಬಗೆಯ ಜನರೂ ಶಾಸನಗಳನ್ನು ಬರೆದಿದ್ದಾರೆ. ಅವರು ಕಾವ್ಯವೆಂದು ಬರೆಯದಿದ್ದರೂ ಬರೆದದ್ದು ಕಾವ್ಯವಾಯಿತು." ಕೆಲವು ಶಾಸನಗಳಂತೂ ಶ್ರೇಷ್ಠಮಟ್ಟದ ಗದ್ಯ, ಪದ್ಯ ಹಾಗೂ ಚಂಪೂ ಕಾವ್ಯಗಳೆನಿಸಿದವು. "ಶಾಸನಗಳು ನೀರಸವಾಗಿ ಸಂಗತಿಗಳನ್ನು ಪಟ್ಟಿಮಾಡಿ ಕೊಡುವುದರಲ್ಲೇ ತೃಪ್ತವಾಗಿಲ್ಲ. ಅವು ಓದುಗರ ಹೃದಯಗಳಲ್ಲಿ ಶೌರ್ಯ, ಉತ್ಸಾಹ, ನಿರಾಸೆ, ತೀವ್ರ ವೈರಾಗ್ಯ, ಜೀವನಪ್ರೇಮ, ವಿನೋದ ಮುಂತಾದ ನೂರಾರು ಅನುಭವಗಳ ತೆರೆಯೆಬ್ಬಿಸಬಲ್ಲವು."

ಶಾಸನ ಸಾಹಿತ್ಯದಲ್ಲಿ ಅಲ್ಲೊಂದು ಇಲ್ಲೊಂದು ಅಧ್ಯಾತ್ಮದ ಎಳೆಗಳು ಗೋಚರವಾಗಿರುವುದುಂಟು. ಅಂಥ ಕೆಲವು ಎಳೆಗಳನ್ನು ಆರಿಸಿ ನಿರೂಪಿಸುವುದಕ್ಕಷ್ಟೇ ಈ ಕಿರು ಲೇಖನ ಸೀಮಿತವಾಗಿದೆ. ಸಹಸ್ರಾರು ಸಂಖ್ಯೆಯಲ್ಲಿ, ವಿವಿಧ ಲಿಪಿ, ಭಾಷೆ, ಶೈಲಿಗಳಲ್ಲಿ, ಲಭ್ಯವಾಗಿರುವ ಶಾಸನಗಳನ್ನು ಈ ದೃಷ್ಟಿಯಿಂದ ಅಧ್ಯಯನ ಮಾಡುವುದು — ಅವಶ್ಯವಾದರೂ ಸ್ವಾಗತಾರ್ಹವಾದುದಾದರೂ—ಸುಲಭವಲ್ಲ. ಅವಕ್ಕೆ ಸಾಕಷ್ಟು ಕಾಲಾವಕಾಶ ಅಗತ್ಯ ; ತುಂಬ ಭಾಷಾಪಾಂಡಿತ್ಯ, ಪರಿಶ್ರಮ ಬೇಕು ; ಸೂಕ್ಷ್ಮಾವಲೋಕನ, ಸಹನೆ ಕೂಡ ಇರಬೇಕು. ಈ ಲೇಖನದಲ್ಲಿ ಕೆಲವು ಸಂಸ್ಕೃತ-ಕನ್ನಡ ಶಾಸನಗಳಿಂದ ಆಯ್ದ ಪದ್ಯಗಳನ್ನು ಈ ದೃಷ್ಟಿಯಿಂದ ಉಲ್ಲೇಖಿಸಿ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ.

ಮತಧರ್ಮಕಾಲಭೇದಗಳ ಎಲ್ಲೆಗಳನ್ನೆಲ್ಲ ಮೀರಿ ನಿಲ್ಲುವ ಅಧ್ಯಾತ್ಮವು ಸರ್ವಶಕ್ತನಾದ, ಸರ್ವಜ್ಞನಾದ, ಸರ್ವವ್ಯಾಪಿಯಾದ, ಸಾರ್ವಕಾಲಿಕವಾದ, ಪರಮೋತ್ಕೃಷ್ಟವಾದ ಪರಬ್ರಹ್ಮನನ್ನು ಕುರಿತು ಜ್ಞಾನಮಾರ್ಗದಿಂದ ವಿವರಿಸುವ ಪ್ರಯತ್ನ ಮಾಡುತ್ತದೆ. ಭಕ್ತಿ ಕರ್ಮ ಮಾರ್ಗಗಳ ಉದ್ದೇಶವಾದರೂ ಈ ಪರಬ್ರಹ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವುದೇ ಆಗಿದೆ. ಮಾರ್ಗ ಬೇರೆಯಾದರೂ ಗುರಿ ಒಂದೇ. "ಏಕಂ ಸತ್ ವಿಪ್ರಾಃ ಬಹುಧಾ ವದಂತಿ" "ದೇವನೊಬ್ಬ ನಾಮ ಹಲವು" ಮುಂತಾದ ಪ್ರಸಿದ್ಧ ಸೂಕ್ತಿಗಳಿಂದಲೂ ಈ ಸತ್ಯದ, ಈ ತತ್ತ್ವದ ಅರಿವುಂಟಾಗುತ್ತದೆ. ವೇದೋಪನಿಷತ್ತುಗಳು ಭಾರತೀಯ ಸಂಸ್ಕೃತಿಯ ಕೆನೆ. ಶಾಸನ ಸಂಸ್ಕೃತಿಯಾದರೂ ಇದರಿಂದ ಭಿನ್ನವಾದುದಲ್ಲ. ಇತಿಹಾಸದ ದಾಖಲೆಗಳೆನಿಸಿದ ಶಾಸನಗಳಲ್ಲೂ ಅಪರೂಪಕ್ಕೆ ವೇದೋಪನಿಷತ್ತು ವಾಣಿಗೆ ಸಮೀಪವಾದ ಎಳೆಗಳು ಉಲ್ಲೇಖಗೊಂಡಿರುವುದುಂಟು. ಭಾಷೆಗಳು ಹಲವು ; ಲಿಪಿಗಳು ವಿವಿಧ; ಆದರೆ ಭಾವ ಒಂದೇ. ಎಷ್ಟೇ ಆದರೂ ಭಾಷೆ ದೇಹ, ಭಾವ ಆತ್ಮವಲ್ಲವೆ ?

ಯಾವುದೇ ಹೆಸರಿನಿಂದ ಕರೆದರೂ ಪರಬ್ರಹ್ಮ ಅಥವಾ 'ತತ್' ಒಂದೇ ಎಂಬ ಸತ್ಯ ದರ್ಶನ ಈ ಕೆಳಕಂಡ ಪದ್ಯದಿಂದ ಲಭ್ಯವಾಗುತ್ತದೆ :

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾಃ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹಸ್ಟೇತಿಹ ಜೈನಶಾಸನಮತಿಃ ಕರ್ಮೇತಿ ಮೀಮಾಂಸಕಾಃ
ಸೋಯಂ ವೋ ವಿದಧಾತು ವಾಂಛಿತ ಫಲಂ ಶ್ರೀ ಕೇಶವಸ್ಸದಾ ||

ಕ್ರಿ.ಶ. 14ನೆಯ ಶತಮಾನದ ಬೇಲೂರ ಶಾಸನವೊಂದರಲ್ಲಿ ಕಾಣಿಸಿಕೊಳ್ಳುವ ಈ ಪದ್ಯದ ಸಾರಾಂಶ ಇದು : ಶೈವರು ಶಿವನೆಂದು, ವೇದಾಂತಿಗಳು ಬ್ರಹ್ಮನೆಂದು, ಬೌದ್ಧರು ಬುದ್ಧನೆಂದು, ಪ್ರಮಾಣದಲ್ಲಿ ಸಮರ್ಥರಾದ ನೈಯಾಯಿಕರು ಕರ್ತೃವೆಂದು, ಜೈನರು ಅರ್ಹನೆಂದು, ಮೀಮಾಂಸಕರು ಕರ್ಮವೆಂದು ಯಾವನನ್ನು ಉಪಾಸನೆ ಮಾಡುವರೋ ಅವನೇ ಆದ ಈ ಶ್ರೀ ಕೇಶವನೆಂಬ ಈಶನು ನಮಗೆ ಇಷ್ಟಾರ್ಥವನ್ನು ಪಾಲಿಸಲಿ. ಈ ಪದ್ಯ ಸರ್ವಧರ್ಮ ಸಮನ್ವಯ ಸಿದ್ಧಾಂತಕ್ಕೆ ಒಂದು

ಉತ್ತಮ ಉದಾಹರಣೆಯಾಗಬಲ್ಲುದು. ಎರಡು ದಶಕಗಳ ಹಿಂದೆ ಮೈಸೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಅಂದಿನ ರಾಷ್ಟ್ರಪತಿಗಳಾಗಿದ್ದ ಡಾ. ಎಸ್. ರಾಧಾಕೃಷ್ಣನ್ ಅವರು ಮಾತನಾಡುತ್ತಾ ಈ ಶಾಸನ ಪದ್ಯವನ್ನು ಉದಾಹರಿಸಿ ಹೀಗೊಂದು ಸೇರ್ಪಡೆಯನ್ನೂ ಸೂಚಿಸಿದರಂತೆ : ಅಲ್ಲಾ ಇತಿ ಮುಸಲ್ಮಾನಾಃ ಕ್ರಿಸ್ತೇತಿ ಕ್ರೈಸ್ತಾಃ! ಇದೀಗ ಸಮಕಾಲೀನ ಧಾರ್ಮಿಕ ಕ್ಷೇತ್ರಕ್ಕೆ, ಸಮಾಜಕ್ಕೆ ಹೊಂದಿಕೊಳ್ಳುವಂತಾಯಿತಷ್ಟೆ ?

ಮಾರ್ಗಾನುಸರಣೆಯ ವಿಷಯದಲ್ಲಿ ಭೇದ ಭಿನ್ನಾಭಿಪ್ರಾಯಗಳು ಇವೆಯಾದರೂ ಗುರಿಯಲ್ಲಿ, ತತ್ವದಲ್ಲಿ, ಭೇದವಿಲ್ಲ — ಭೇದವಿರಕೂಡದು — ಎಂಬುದನ್ನು ಸುಂದರವಾಗಿ ಹನ್ನೆರಡನೆ ಶತಮಾನದ ಶಾಸನವೊಂದು ತಿಳಿಸುತ್ತದೆ:

ಭೇದಂ ಮೂರ್ತ್ತಿಯೊಳಲ್ಲದೆ
ಭೇದಂ ಪರಮಾರ್ತ್ಥ ತತ್ವದೊಳು ಸಲ್ಲವೆನಲ್
ಮೂದೇವರಾಗಭೇದದ
ಮಾದೇವಂ ದೇವನೀಗೆ ಸುಖಸಂಪದಮಂ ||

ಇತರ ಮತಧರ್ಮಗಳನ್ನು ನಿಂದಿಸುವ, ಅಲ್ಲಿನ ದೇವದಿಂಡರನ್ನು ಪರಿಹಾಸಗೈಯುವ ಜನರು ಈ ಮೇಲಿನ ಪದ್ಯವನ್ನು ಗಮನಿಸಬೇಕು. ದೈವಸಾಕ್ಷಾತ್ಕಾರಕ್ಕೆ ಮೂರ್ತಿ ಪೂಜೆ ಅಥವಾ ವಿಗ್ರಹಾರಾಧನೆ ಒಂದು ಸೋಪಾನ. ನಿರಾಕಾರನಾದ ಬ್ರಹ್ಮನನ್ನು ಕುರಿತು ಎಲ್ಲರಿಗೂ ಧ್ಯಾನಿಸಲು ಆಗಲಾರದು. ಒಂದು ಸಂಕೇತವಾಗಿ ವಿಗ್ರಹ ಅಥವಾ ಮೂರ್ತಿ ಹೆಚ್ಚಿನ ಜನರಿಗೆ ಅಗತ್ಯವಾಗುತ್ತದೆ. ಮೂರ್ತಿ ಬೇರೆ ಬೇರೆ ಇದ್ದರೂ, ಮೂರ್ತಿಯ ವಿಷಯದಲ್ಲಿ ಭಿನ್ನಾಭಿಪ್ರಾಯ ಭೇದಗಳಿದ್ದರೂ ದೇವರು 'ಅಭೇದ'.

ಹೀಗಿದ್ದರೂ ಈ ಜಗತ್ತಿನಲ್ಲಿ ತಮ್ಮ ದೇವರೇ ಶ್ರೇಷ್ಠನೆಂದು ಜಗಳಾಡುವವರೇ ಹೆಚ್ಚು ಜನರು. ಇತರ ಮತಧರ್ಮಗಳನ್ನು ಇವರು ಅವಹೇಳನ ಮಾಡುತ್ತಾರೆ; ಇತರರ ದೇವದೇವತೆಗಳನ್ನು ನಿಂದಿಸುತ್ತಾರೆ. ಆದರೆ ಇದು ಹೀನಮಾರ್ಗ. ನಿಜವಾಗಿ ಹೇಳುವುದಾದರೆ ಇತರ ಧರ್ಮಗಳನ್ನು ದೇವರನ್ನು ಗೌರವದಿಂದ ಕಾಣದವರು ಖಂಡಿತವಾಗಿಯೂ ತಮ್ಮ ಧರ್ಮವನ್ನು ನೈಜವಾಗಿ ಗೌರವಿಸಿರುವುದಿಲ್ಲ; ತಮ್ಮ ದೇವರನ್ನು ಪರಿಶುದ್ಧ ಭಕ್ತಿಯಿಂದ ಆರಾಧಿಸಿರುವುದಿಲ್ಲ. ಅವರಲ್ಲಿ ಅಂಧಶ್ರದ್ಧೆ ಕುರುಡು ಅಭಿಮಾನಗಳಿರುತ್ತವೆ ಅಷ್ಟೇ. ಈ ದೃಷ್ಟಿಯಿಂದ ದಾವಣಗೆರೆ ತಾಲ್ಲೂಕಿನ ಈ ಶಾಸನ ಪದ್ಯವನ್ನು ನೋಡಬಹುದು:

ಹರಿಯಿಂದಂ ಬಿಟ್ಟು ದೈವಂ ಧರಣಿತಳದೊಳಿಲ್ಲೆಂದು ಪೇಳ್ವರ್ಕೆಲಂಬರು
ಹರನಿಂದಂ ಬಿಟ್ಟು ದೈವಂ ಧರಣಿತಳದೊಳಿಲ್ಲೆಂದು ಪೇಳ್ವರ್ಕೆಲಂಬರು
ನರರಾ ಸಂದೇಹಮಂ ಪಿಂಗಿಸಲತಿಶಯದಿಂ ಕೂಡಲೂರಲ್ಲಿ ಶೋಭಾ
ಕರಮಪ್ಪಂ ದ್ವಂದ್ವರೂಪಂ ತಾಳ್ದು ಹರಿಹರಂ ಕೂರ್ತು ರಕ್ಷಿಕ್ಕೆಸಂಮಂ||

ಈ ಪದ್ಯದಲ್ಲಿನ ಹರಿಹರನನ್ನು ಒಂದು ಸಂಕೇತವಾಗಿ ಪರಿಗಣಿಸಿದರೆ ಈ ಪದ್ಯದ ಆಧ್ಯಾತ್ಮಿಕ ಅರ್ಥವನ್ನು ತಿಳಿಯಬಹುದು. ಹರಿ ದೊಡ್ಡವನು ಹರ ದೊಡ್ಡವನು ಎಂಬುದು ನರರ ಸಂದೇಹ ಮಾತ್ರ. ದಾವಣಗೆರೆ ತಾಲ್ಲೂಕಿನ ಇನ್ನೊಂದು ಶಾಸನ ಪದ್ಯ ಹೆಚ್ಚು ಗಮನಾರ್ಹ. ಈ ಪದ್ಯವೂ ಹರಿಹರನ ಸ್ತುತಿಯೇ.

> ನಿರವದ್ಯಂ ನಿರ್ವಿಕಲ್ಪಂ ನಿರತಿಶಯ ಸುಖಾನಂದಮಾದ್ಯಂತ ಶೂನ್ಯಂ
> ಪರಿಪೂರ್ಣಂ ಚಿನ್ಮಯಂ ವಾಕ್ಕರಣರಹಿತವಾದಾ ನಿರಾಕಾರಮಿಂತೀ
> ಧರೆಯೊಳ್ ಸಾಕಾರಮಾದಂತಿರೆ ನೆಗಳ್ದ ಗುಹಾರಣ್ಯದೊಳು ನಿಂದ ದೇವಂ
> ಪರಿರಕ್ಷಿಕ್ಕೆರ್ವಿನಂ ಶ್ರೀಹರಿಹರನಮರಾಧೀಶ ಸಂಸ್ತೋತ್ರ ಪಾತ್ರಂ ॥

ಈ ಪದ್ಯದ ಮೊದಲ ಎರಡು ಪಾದಗಳೊಡನೆ, ಅಕ್ಷರಬ್ರಹ್ಮನನ್ನು ಕುರಿತು ಉಪನಿಷತ್ತುಗಳು ನೀಡುವ ಅದ್ರೇಶ್ಯಂ, ಅಗ್ರಾಹ್ಯಂ, ಅಗೋತ್ರಂ, ಅವರ್ಣಂ, ಅಚಕ್ಷುಃ ಅಶ್ರೋತ್ರಂ, ಅಪಾಣಿ, ಅಪಾದಂ, ಹಾಗೂ ಅದೃಶ್ಯಂ, ಅವ್ಯವಹಾರ್ಯಂ, ಅಲಕ್ಷಣಂ, ಅಚಿಂತ್ಯಂ, ಅವ್ಯಪದೇಶ್ಯಂ........ಮುಂತಾದ ವರ್ಣನೆಗಳನ್ನು ಹೋಲಿಸಬಹುದು.

ಇದೇ ಪರಿಕಲ್ಪನೆಗೆ ಪೂರಕವಾಗಿರುವ ಶೃಂಗೇರಿಯ ಶಾಸನವೊಂದರಲ್ಲಿ ಕಂಡುಬರುವ ಪ್ರಾರ್ಥನಾ ಪದ್ಯವಿದು :

> ಚಿದ್ಘನ ಏಕೋವ್ಯಾಪೀ ನಿತ್ಯಃ ಸತತೋದಿತಃ ಪ್ರಭುಃ ಶಾಂತಃ
> ಜಯತಿ ಜಗದೇಕಬೀಜಂ ಸರ್ವಾನುಗ್ರಾಹಕ ಶಂಭುಃ ॥

ಶಿಕಾರಿಪುರ ತಾಲ್ಲೂಕಿನ ಶಾಸನವೊಂದು ಶಿವನನ್ನು "ಸಮಸ್ತ ತತ್ತ್ವಾಧಾರಾಯ ಜ್ಯೋತಿಃಸ್ತಂಭಾಯ ಶಂಭವೇ" ಎಂದು ಸ್ತುತಿಸುತ್ತದೆ. ಇಲ್ಲಿನ 'ಜ್ಯೋತಿಃಸ್ತಂಭ' ಎಂಬ ಮಾತು ಗಮನಾರ್ಹ. ಕತ್ತಲೆ ಬೆಳಕಿನ ಆಟ ಮಾನವ ದೇವರ ಸಂಬಂಧ. ಬೆಳಕು ಮೂಡಿದಾಗ ಅಥವಾ ಬೆಳಕಿನ ದರ್ಶನವಾದಾಗ ಕತ್ತಲೆಯೆಲ್ಲ ಬೆಳಕಿನಲ್ಲಿ ಲೀನವಾಗಿ ಒಂದಾಗಿರುತ್ತದೆ.

ಕ್ರಿ.ಶ. 11 ನೆಯ ಶತಮಾನಕ್ಕೆ ಸೇರುವ ಶಿಕಾರಿಪುರ ತಾಲ್ಲೂಕಿನ ಶಾಸನವೊಂದು ಸೃಷ್ಟಿಸ್ಥಿತಿ ಲಯಕಾರ್ಯ ಕಾರಣನಾದ, ಸರ್ವಜೀವಾತ್ಮ ಸ್ವರೂಪನಾದ ಮೂರು ಲೋಕದೊಡೆಯನಾದ ಶಿವನನ್ನು ಪ್ರಾರ್ಥಿಸುವುದು ಹೀಗೆ :

> ಪ್ರತ್ಯಕ್ಷ ವಸ್ತು ವಿಷಯಾಯ ಜಗದ್ಧಿತಾಯ
> ವಿಶ್ವಸ್ಥಿತಿ ಪ್ರಳಯ ಸಂಭವ ಕಾರಣಾಯ
> ಸರ್ವಾತ್ಮನೇ ವಿಜಿತಕೋಪ ಮನೋಭವಾಯ
> ತುಭ್ಯಂ ನಮಃ ತ್ರಿಭುವನ ಪ್ರಭವೇ ಶಿವಾಯ

ಸೃಷ್ಟಿಕಾರ್ಯಕ್ಕೆ ಬ್ರಹ್ಮ, ಸ್ಥಿತಿಕ್ರಿಯೆಗೆ ವಿಷ್ಣು ಮತ್ತು ಲಯಕಾರ್ಯಕ್ಕೆ ಈಶ್ವರ ಎಂಬುದು ಹಿಂದೂಗಳಲ್ಲಿ ಸಾಧಾರಣವಾಗಿ ಪ್ರಚಲಿತವಿರುವ ಭಾವನೆ. ಆದರೆ ತ್ರಿಮೂರ್ತಿ ಎಂದರೆ ಮೂರು ಬೇರೆ ಬೇರೆ ದೇವರಲ್ಲ; ಒಬ್ಬ ದೇವನ ಮೂರು 'ಲೀಲೆ'ಗಳು ಮಾತ್ರ.

* * * *

ಈ ಜಗತ್ತು ಕ್ಷಣಿಕ, ಮಾಯೆಯಿಂದ ಆವೃತವಾದುದು ಎಂದು ದಾರ್ಶನಿಕರು ಹೇಳಿದ್ದಾರೆ. ಜೈನಮುನಿಯೊಬ್ಬನನ್ನು ವರ್ಣಿಸುವಾಗ ಕ್ರಿ. ಶ. 7 ನೆಯ ಶತಮಾನದ, ಶ್ರವಣಬೆಳಗೊಳದ ಶಾಸನವೊಂದು ತುಂಬ ಸುಂದರ ಉಪಮೆಗಳಿಂದ ಹೀಗೆ ಸಾರುತ್ತದೆ:

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಜವೋಲ್ ಮಂಜುವೋಲ್
 ತೋಱಿಬೇಗಂ
ಪಿರಿಗುಂ ಶ್ರೀರೂಪಲೀಲಾಧನ ವಿಭವ ಮಹಾರಾಶಿಗಳ್ ನಿಲ್ಲವಾರ್ಗಂ
ಪರಮಾರ್ಥಂ ಮೆಚ್ಚಿನಾನೀ ಧರಣಿಯುಳಿರವಾನೆಂದು ಸನ್ಯಾಸನಂಗೆ
ಯ್ದುರು ಸತ್ವನ್ ನಂದಿಸೇನ ಪ್ರವರ ಮುನಿವರನ್ ದೇವಲೋಕಕ್ಕೆ
 ಸಂದಾನ್ ||

ಜೈನಮುನಿಗಳು ಈ ಪ್ರಾಪಂಚಿಕ ವಸ್ತು ವಿಷಯಗಳನ್ನು ಹೇಗೆ ಕಾಣುತ್ತಿದ್ದರೆಂಬುದಕ್ಕೆ ಇದೊಂದು ಒಳ್ಳೆಯ ಉದಾಹರಣೆ. ಶಾಸನಗಳು ಜೈನಮುನಿಗಳನ್ನು "ಸರ್ವಪ್ರಾಣಿ ದಯಾರ್ತ್ರ್ಯದಾಬ್ಧಿ", "ರಾಗದ್ವೇಷತಮೋಮಲವ್ಯಪಗತರ್ಸದ್ಧಾತ್ಮ ಸಂಯೋದ್ಧಕರ್" ಎಂದು ಮುಂತಾಗಿ ವರ್ಣಿಸುತ್ತವೆ. ಕಠಿಣ ತಪಸ್ಸು, ಸರ್ವ ಸಮಭಾವ, ಐಹಿಕ ಬದುಕಿನ ಬಗ್ಗೆ ಅತೀವ ನಿರಾಸಕ್ತಿ ಮುಂತಾದುವು ಇವರ ಮೋಕ್ಷ ಸಾಧನೆಯ ಮಾರ್ಗದ ಲಕ್ಷಣಗಳಾಗಿದ್ದವು.

* * *

ರಾಜರಾಜರ ನಡುವಣ ಹೋರಾಟಗಳಲ್ಲಿ ಶೌರ್ಯಪರಾಕ್ರಮಗಳಿಂದ ಹೋರಾಡಿ ಮಡಿದ ವೀರರ, ಅವರಿಗೆ ನೀಡಿದ ದಾನದತ್ತಿಗಳ ವಿಷಯಗಳನ್ನು ವೀರಗಲ್ಲು ಶಾಸನಗಳು ತಿಳಿಸುತ್ತವೆ. ಹೋರಾಟಕ್ಕೆ ಯೋಧರನ್ನು ಹುರಿದುಂಬಿಸುತ್ತಿದ್ದ ರೀತಿ ಇದು :

ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಂಸಿನೀ ಕಾಯಾ ಕಾ ಚಿಂತಾ ಮರಣೇ ರಣೇ ||

ಗೆದ್ದರೆ ಸಂಪತ್ತು ಲಭಿಸುತ್ತದೆ; ಸತ್ತರೆ ಸ್ವರ್ಗದ ಅಪ್ಸರ ಸ್ತ್ರೀಯರು ಲಭಿಸುತ್ತಾರೆ; ದೇಹ ಕ್ಷಣಮಾತ್ರದಲ್ಲಿ ನಾಶವಾಗುವಂಥದು; ರಣದಲ್ಲಿ ಹೋರಾಡಿ ಮಡಿಯಲು ಯಾಕೆ ಚಿಂತಿಸಬೇಕು ? ಈ ಶ್ಲೋಕದಲ್ಲಿನ 'ಕ್ಷಣ ವಿಧ್ವಂಸಿನೀ ಕಾಯಾ' ಎಂಬ ಮಾತು ಗಮನಾರ್ಹ. ಈ ಮಾತನ್ನು ಹೇಳಿರುವ ಹಿನ್ನೆಲೆ ಏನೇ ಇರಲಿ, ನಮ್ಮ

ಪೂರ್ವಿಕರು ಬದುಕನ್ನು ನೋಡುತ್ತಿದ್ದ ರೀತಿ ಇಂಥದು. ಬದುಕು ಅರ್ಥಪೂರ್ಣವಾಗಿರಬೇಕು. ಇಲ್ಲದಿದ್ದರೆ ಅಂಥ ಬದುಕಾದರೂ ಯಾಕೆ ? ಈ ಪ್ರವೃತ್ತಿಗೆ ನಿದರ್ಶನವಾಗಿದೆ ಈ ಮತ್ತೊಂದು ಶ್ಲೋಕ :

ಮುಹೂರ್ತಮಪಿ ಜೀವೇತ ನರಃ ಶುಕ್ಲೇನ ಕರ್ಮಣಾ
ನಾಕಲ್ಪಮಪಿ ಕೃಷ್ಣೇನ ಲೋಕದ್ವಯ ವಿರೋಧಿನಾ ||

ಕ್ಷಣಕಾಲ ಬದುಕಿದರೂ ಋಜುಮಾರ್ಗದಿಂದ ಬದುಕಬೇಕು. ಇಹಪರಗಳಿಗೆ ಸಲ್ಲದ ಅನ್ಯಾಯ ಮಾರ್ಗದಿಂದ ಯುಗ ಕಾಲ ಬಾಳುವುದು ಬೇಡ. ಇದು ನಮ್ಮ ಹಿರಿಯರ ಜೀವನ ದೃಷ್ಟಿಯಾಗಿದ್ದಿತು. ಅದ್ದರಿಂದ ಅವರು ಭಾವಿಸುತ್ತಾರೆ :

ಅನಿತ್ಯಮಧ್ರುವಂ ಪ್ರಾಣಂ ಮಾನಮಾಚಂದ್ರತಾರಕಂ
ಪ್ರಾಣಮೇವ ಪರಿತ್ಯಾಗೇ ಮಾನಮೇವ ಸುರಕ್ಷಿತಂ ||

ಪ್ರಾಣ ಕ್ಷಣಿಕ, ಮಾನ ಶಾಶ್ವತ. ಪ್ರಾಣವನ್ನು ತೆತ್ತಾದರೂ ಮಾನವನ್ನು ರಕ್ಷಿಸಿಕೊಳ್ಳಬೇಕು. ಇದು ಅಂದಿನವರ ಆದರ್ಶ, ಇಂದಿನವರದು ?

* * *

ಕೊನೆಯದಾಗಿ ಒಂದು ಮಾತು. ತೈತ್ತಿರೀಯ ಉಪನಿಷತ್ತು ಬ್ರಹ್ಮನನ್ನು ಕುರಿತು "ತಜ್ಜಲಾನ್ | ಯತೋ ವಾ ಇಮಾನಿ ಭೂತಾನಿ ಜಾಯಂತೇ ಯೇನ ಜಾತಾನಿ ಜೀವಂತಿ ಯತ್ ಪ್ರಯಂತ್ಯಾಭಿಸಂವಿಶಂತಿ ತತ್ ವಿಜಿಜ್ಞಾಸಸ್ವ 'ತತ್' ಬ್ರಹ್ಮೇತಿ" ಎಂದು ಸಾರುತ್ತದೆ. ಅಂಥ ಬ್ರಹ್ಮನನ್ನು ಮಾತೂ ಮನಸ್ಸೂ ತಲುಪಲಾರವು : ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ. ಆ ಬ್ರಹ್ಮನನ್ನು ಅರಿತು ಸಾಕ್ಷಾತ್ಕರಿಸಿಕೊಳ್ಳಬೇಕು : ಮಂತ್ರವ್ಯಾ ನಿಧಿಧ್ಯಾಸಿತವ್ಯಾ. ಇದು ಜೀವನದಲ್ಲಿ ಮೌಲ್ಯ ಆದರ್ಶಗಳಿಗೆ ವ್ಯಕ್ತಿ ನೀಡುವ ಮಹತ್ತ್ವ, ಅವನ ಪ್ರಾಮಾಣಿಕತೆಗೆ ಸಂಬಂಧಿಸಿದ ವಿಷಯ. ಆದರೆ ಇಂದಿನ ಜಗತ್ತಿನಲ್ಲಿ ಅಂತಸ್ಸತ್ವ ಸೊರಗುತ್ತಿದೆ ಬಾಹ್ಯದ ಸೋಗು ಮೆರೆಯುತ್ತಿದೆ ಎನ್ನುವುದು ವಿಷಾದ ಸತ್ಯ. ಯಾವುದು ನೈಜ ಮತ್ತು ಯಾವುದು ಕೃತಕ ಎಂಬುದನ್ನು ಶ್ರೀಸಾಮಾನ್ಯ ತಿಳಿಯಲಾರದವನಾಗಿದ್ದಾನೆ.

ಡಿ. ಎಲ್. ಪಾಟೀಲ

ವೈಚಾರಿಕತೆಯ ಮೂರನೆಯ ಮುಖ—ಬೌದ್ಧಿಕತೆ

ಶುದ್ಧ ವೈಚಾರಿಕತೆಗೆ ಹೊಸ ತಿರುವು ಮತ್ತು ಅರ್ಥವನ್ನು ಕೊಟ್ಟವರು ಆಧುನಿಕ ಪಾಶ್ಚಾತ್ಯ ತತ್ತ್ವಜ್ಞಾನಿಗಳಾದ ಡೇಕಾರ್ಟ್, ಸ್ಪಿನೋಜಾ ಮತ್ತು ಲೈಬ್ನಿಜ್‌ರು. ಆಧುನಿಕ ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ಬೌದ್ಧಿಕತೆಯ ಸಂಪ್ರದಾಯವನ್ನು ಸ್ಥಾಪಿಸಿದವರವರು. ಗ್ರೀಕ್ ತತ್ತ್ವಶಾಸ್ತ್ರದಲ್ಲಿ ಬೌದ್ಧಿಕತೆಯ ಪ್ರಾಥಮಿಕ ಚಿಹ್ನೆಗಳನ್ನು ಗುರುತಿಸಬಹುದು. ಆದರೆ ಅಲ್ಲಿ ಅದು ನಾನಾ ಪ್ರಕಾರದ ತಾತ್ವಿಕ ಸಿದ್ಧಾಂತಗಳ ಮಧ್ಯೆ ಗೋಚರಿಸುವುದರಿಂದ ಸ್ಪಷ್ಟತೆಯನ್ನು ಪಡೆದುಕೊಳ್ಳುವುದಿಲ್ಲ. ಒಬ್ಬ ದಾರ್ಶನಿಕನ ಸಮಗ್ರ ತತ್ತ್ವಶಾಸ್ತ್ರದ ಒಂದು ಅಂಗವಾಗಿ ಮಾತ್ರ ಅಭಿವ್ಯಕ್ತಿ ಪಡೆಯುತ್ತದೆ. ಸಾಕ್ರಟೀಸ್ ಮತ್ತು ಪ್ಲೇಟೋ ಇವರು ಇದಕ್ಕೆ ನಿದರ್ಶನ. ಇದರಿಂದ ಗ್ರೀಕ್ ತತ್ತ್ವಶಾಸ್ತ್ರದಲ್ಲಿ ಬೌದ್ಧಿಕತೆ ಒಂದು ಪ್ರತ್ಯೇಕ ಸಂಪ್ರದಾಯವಾಗಿ ಬೆಳೆಯಲಿಲ್ಲ. ಪ್ಲೇಟೋ ತನ್ನ ಕೆಲವು ಸಂವಾದ (Dialogues)ಗಳಲ್ಲಿ ಬೌದ್ಧಿಕತೆಯನ್ನು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾನೆ. ಆದರೆ ಅವನ ತತ್ವಶಾಸ್ತ್ರದ ಉದ್ದೇಶ ಬೌದ್ಧಿಕತೆಯ ಸಮರ್ಥನೆಯಾಗಿರಲಿಲ್ಲವಾದ್ದರಿಂದ, ಅದು ಅಲ್ಲಿ ಅಪ್ರಬುದ್ಧವಾಗಿಯೇ ಉಳಿಯಬೇಕಾಯಿತು. ಪ್ಲೇಟೋನ ಶಿಷ್ಯನಾದ ಅರಿಸ್ಟಾಟಲ್‌ನು ಬೌದ್ಧಿಕತೆಯ ಮಹತ್ವವನ್ನು ಗುರುತಿಸಿದ್ದರಿಂದ ತರ್ಕಶಾಸ್ತ್ರವನ್ನು ಬರೆದನು. ಆದರೆ ಅರಿಸ್ಟಾಟಲ್ ಬಹುಮುಖ ಪ್ರತಿಭೆಯುಳ್ಳ ಮಹಾ ಚಿಂತಕ. ಮೂಲಭೂತವಾಗಿ ವೈಜ್ಞಾನಿಕ ಮನೋಭಾವದವನು. ಕೇವಲ ಬೌದ್ಧಿಕತೆಗೇ ಸೀಮಿತವಾಗಬಲ್ಲ ಚಿಂತನೆ ಅವನದಲ್ಲವಾದ್ದರಿಂದ ಮತ್ತು ಸತ್ಯಾನ್ವೇಷಣೆಯಲ್ಲಿ ಇಂದ್ರಿಯಾನುಭವದ ಮಹತ್ವವನ್ನು ಸ್ಪಷ್ಟವಾಗಿ ಕಂಡುಕೊಂಡವನಾದ್ದರಿಂದ, ಬೌದ್ಧಿಕತೆಗೆ ಅದರ ಸ್ಥಾನವನ್ನು ತೋರಿಸಿ ಬಹುಮುಖ ಚಿಂತನೆ ಮಾಡಿದನು. ಈ ಎಲ್ಲಾ ಕಾರಣಗಳಿಂದಾಗಿ ಬೌದ್ಧಿಕತೆಯ ನಿಜವಾದ ಪ್ರಾರಂಭ ಅಧುನಿಕ ತತ್ತ್ವಶಾಸ್ತ್ರಜ್ಞರಾದ ಡೇಕಾರ್ಟ್, ಸ್ಪಿನೋಜಾ ಮತ್ತು ಲೈಬ್ನಿಜ್‌ರಿಂದ ಎಂದು ಹೇಳಬಹುದು.

ಬೌದ್ಧಿಕತೆ ಎಂದರೇನು ?

ಪಾಶ್ಚಾತ್ಯ ತತ್ವಶಾಸ್ತ್ರ ಸಂಪ್ರದಾಯದಲ್ಲಿಯಾಗಲೀ ಅಥವಾ ಭಾರತೀಯ ತತ್ವಶಾಸ್ತ್ರದಲ್ಲಿಯಾಗಲೀ ಕೂಡಲೇ ಗಮನಕ್ಕೆ ಬರುವ ಒಂದು ಅಂಶವೆಂದರೆ ಇಂದ್ರಿಯಗಳ ಮತ್ತು ಇಂದ್ರಿಯಾನುಭವದ ತೀವ್ರ ವಿಮರ್ಶೆ. ನೈಜ ಸತ್ಯಗಳ ಅನ್ವೇಷಣೆಯಲ್ಲಿ ಮತ್ತು ಅವುಗಳ ಪ್ರಾಮಾಣೀಕರಣದಲ್ಲಿ ಪಂಚೇಂದ್ರಿಯಗಳು ನಿಷ್ಪ್ರಯೋಜಕವಾಗಿವೆ ಎಂದು ಅನೇಕ ದೊಡ್ಡ ದೊಡ್ಡ ದಾರ್ಶನಿಕರು ಸಾರಿದ್ದಾರೆ. ಪ್ಲೇಟೋ ತನ್ನ ಜ್ಞಾನ ಮೀಮಾಂಸೆಯ ಆರಂಭವನ್ನು ಇಂದ್ರಿಯಾನುಭವದ ತೀವ್ರ ವಿಮರ್ಶೆಯಿಂದ ಮಾಡುತ್ತಾನೆ. ಇಂದ್ರಿಯಾನುಭವ ಸಾರ್ವಕಾಲಿಕ ಸತ್ಯಗಳನ್ನು ಅರಿಯಲು ಏಕೆ ಅಸಮರ್ಥವಾಗಿದೆ ಎಂದು ಸಿದ್ಧಮಾಡಲು ಒಂದು ಪ್ರತ್ಯೇಕ ಸಂವಾದವನ್ನೇ ಬರೆದಿದ್ದಾನೆ. ಅವನಿಗಿಂತ ಹಿಂದೆ ಇದ್ದ ಪುರಾತನ ಗ್ರೀಕ್ ತತ್ವಜ್ಞಾನಿ ಪಾರ್ಮಿನೈಡಿಸ್‌ನು (Parmenides) ನೈಜ ಸತ್ಯವು (Real Being) ಅಕ್ಷರ ಎಂದನು. ಇಂದ್ರಿಯಾನುಭವಕ್ಕೆ ಗೋಚರವಾಗುವ ಅಸ್ತಿತ್ವ ಅಸ್ಥಿರವಾಗಿದ್ದು ಅಸತ್ಯವಾಗಿದೆ ಎಂದನು. ಶುದ್ಧವಾದ ಬೌದ್ಧಿಕತೆಯಿಂದ ಮಾತ್ರ ಅಕ್ಷರದ ತಿಳುವಳಿಕೆ ಉಂಟಾಗುತ್ತದೆ ಎಂದಿದ್ದಾನೆ. ಪಾರ್ಮಿನೈಡಿಸ್‌ನ ಶಿಷ್ಯನಾದ ಜೀನೋ ಎಂಬುವವನು ಬದಲಾವಣೆ, ಬೆಳವಣಿಗೆ ಮತ್ತು ಚಲನೆಗಳೆಲ್ಲ ಕೇವಲ ಭ್ರಮೆಗಳು ಎಂದು ಹೇಳಿ ಅವನ್ನು ಸಿದ್ಧಮಾಡಲು ಅತಿಸೂಕ್ಷ್ಮವಾದ ಅನೇಕ ಅತ್ಯಂತ ಸ್ವಾರಸ್ಯಕರವಾದ ಪ್ರಮಾಣ (Proofs) ಗಳನ್ನು ಸೃಷ್ಟಿಸಿದನು. ಸತ್ಯಾನ್ವೇಷಣೆಯಲ್ಲಿ ಇಂದ್ರಿಯಾನುಭವದ ಮಹತ್ವದ ನಿರಾಕರಣೆ ತತ್ವಶಾಸ್ತ್ರದಲ್ಲಿ ಬೌದ್ಧಿಕತೆಯ ಸಂಪ್ರದಾಯಕ್ಕೆ ದಾರಿ ಮಾಡಿಕೊಟ್ಟಿತು ಎನ್ನಬಹುದು. ಬರ್ಟ್ರೆಂಡ್ ರಸೆಲ್ ನಂತಹ ಇಪ್ಪತ್ತನೆಯ ಶತಮಾನದ ತತ್ವಜ್ಞಾನಿಯು ಕೂಡ ಇಂದ್ರಿಯಾನುಭವವನ್ನು ತನ್ನ ಒಂದು ಗ್ರಂಥದಲ್ಲಿ ಹೀಗೆ ವಿಮರ್ಶಿಸಿದ್ದಾನೆ : "What passes for knowledge in ordinary life suffers from three defects : it is cock sure, vague, and self-contradictory. The first step towards philosophy consists in becoming aware of these defects, not in order to rest content with a lazy scepticism but in order to substitute an amended kind of knowledge which shall be tentative, precise and self-consistent"[1] ಆದ್ದರಿಂದ ಬೌದ್ಧಿಕತೆಯ ಬೆಳವಣಿಗೆಗೂ ಮತ್ತು ಸತ್ಯಾನ್ವೇಷಣೆಯಲ್ಲಿ ಇಂದ್ರಿಯಾನುಭವದ ಪ್ರಾಮಾಣ್ಯದ ನಿರಾಕರಣೆಗೂ ನೇರ ಸಂಬಂಧವಿದೆ ಎನ್ನಬಹುದು. ಪಾರ್ಮಿನೈಡಿಸ್, ಪ್ಲೇಟೋ ಮುಂತಾದ ಗ್ರೀಕ್ ತತ್ವಜ್ಞಾನಿಗಳಲ್ಲಿ ಪ್ರಾರಂಭವಾದ ಇಂದ್ರಿಯಾನುಭವ ಮತ್ತು ಬೌದ್ಧಿಕತೆಯ ವಿರೋಧಾತ್ಮಕತೆ ಆಧುನಿಕ ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಸ್ಪಷ್ಟವಾದ ಮತ್ತು ತೀವ್ರವಾದ ಎರಡು ಸೈದ್ಧಾಂತಿಕ ಸಂಪ್ರದಾಯಗಳಿಗೆ ನಾಂದಿಯಾಗುತ್ತದೆ.

ಇಂದ್ರಿಯಾನುಭವ ಸಂಪ್ರದಾಯದ ಒಗ್ಗೆ ಮುಂದಿನ ಪ್ರಬಂಧದಲ್ಲಿ ವಿವೇಚಿಸಲಾಗು ವುದು. ಆದ್ದರಿಂದ ಈ ಪ್ರಬಂಧ ಶುದ್ಧ ಬೌದ್ಧಿಕತೆಗೆ ಮತ್ತು ಅದಕ್ಕೂ ಆಧುನಿಕ ವೈಚಾರಿಕತೆಗೂ ಇರುವ ಸಂಬಂಧವನ್ನು ವಿವರಿಸುವುದಕ್ಕೆ ಸೀಮಿತವಾಗಿದೆ.

'ಬೌದ್ಧಿಕತೆ' ಎನ್ನುವ ಪದ ಬುದ್ಧಿಗೆ ಸಂಬಂಧಪಟ್ಟಿದೆ. ಬುದ್ಧಿ ಎಂದರೆ ಯಾವುದು ? ಅದರ ಸ್ವರೂಪವೇನು ? ಎನ್ನುವ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ ಮುಂದುವರಿಯಬೇಕಾದುದು ಅನಿವಾರ್ಯ. ಬುದ್ಧಿ ಮನಸ್ಸಿನ ಅನೇಕ ವ್ಯಾಪಾರ ಗಳಲ್ಲಿ ಒಂದು. ಆಲೋಚನೆಗೆ ಸಂಬಂಧಿಸಿದುದು. ಆದರೆ ಆಲೋಚನೆಯೇ ಬುದ್ಧಿ ಯಲ್ಲ. ಆಲೋಚನೆಯನ್ನು ಒಂದು ನಿರ್ದಿಷ್ಟ ಕ್ರಮದಲ್ಲಿ ಮಾಡಿದಾಗ ಬುದ್ಧಿ ಪ್ರಕಟ ವಾಗುತ್ತದೆ ಎನ್ನಬಹುದು. ತಾರತಮ್ಯ ಪ್ರಜ್ಞೆ ಅಥವಾ ವಿವೇಕ ಬುದ್ಧಿಯ ಪರಿಣಾಮ ಗಳು. ಫ್ರೆಂಚ್ ತತ್ವಜ್ಞಾನಿ ಡೇಕಾರ್ಟ್‌ನು ಬುದ್ಧಿ ವಿಚಾರಮಾಡುವ ಒಂದು ದ್ರವ್ಯ ಎಂದಿದ್ದಾನೆ. ಬುದ್ಧಿಯದು ವಿಚಾರಿಸುವ ಅಥವಾ ವಿವೇಚಿಸುವ ಪ್ರವೃತ್ತಿ ಎನ್ನ ಬಹುದು. ಆಧುನಿಕ ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಶುದ್ಧ ವಿಚಾರವೇ (Reason) ಬುದ್ಧಿ. ಇಂಗ್ಲಿಷಿನಲ್ಲಿ Intellect ಎಂಬ ಪದವನ್ನು ಬುದ್ಧಿಗೆ ಸರಿಸಮಾನವಾಗಿ ಉಪಯೋಗಿಸಲಾಗಿದೆ. Thinking, Intellect ಮತ್ತು Pure Reason ಮುಂತಾದ ಇಂಗ್ಲಿಷ್ ಪದಗಳು ಬೌದ್ಧಿಕತೆಯನ್ನು ಅಭಿವ್ಯಕ್ತಿಸುವ ತತ್ವಗಳಾಗಿವೆ. ಷಡ್‌ದರ್ಶನಗಳಲ್ಲಿ ಒಂದಾದ ಸಾಂಖ್ಯ ದರ್ಶನದಲ್ಲಿ ಬುದ್ಧಿಯನ್ನು ಮಹತ್ ಎಂದು ಕರೆಯಲಾಗಿದೆ. ಅಲ್ಲಿ ಅದು ಪ್ರಕೃತಿ ಮತ್ತು ಪುರುಷ ತತ್ವಗಳಿಗೆ ಭೇದ ತಿಳಿಸುವ ಸಾಧನವಾಗಿದೆ. ಸಾಂಖ್ಯ ದರ್ಶನದಲ್ಲಿ ಬುದ್ಧಿ ತತ್ತ್ವದ ವ್ಯಾಪ್ತಿ ಪಾಶ್ಚಾತ್ಯ ತತ್ತ್ವ ಶಾಸ್ತ್ರದಲ್ಲಿಗಿಂತ ವಿಸ್ತಾರವಾಗಿದೆ. ಮನಸ್ಸಿನ ಒಂದು ಮುಖ್ಯ ರೂಪವಾದ ಬುದ್ಧಿಯ ಅಸ್ತಿತ್ವ ಮತ್ತು ಜ್ಞಾನ ಸಂಪಾದನೆಯಲ್ಲಿ ಅದು ವಹಿಸುವ ಮಹತ್ತ್ವದ ಪಾತ್ರ ಇವು ಗಳನ್ನು ಗುರುತಿಸಿದ ಶ್ರೇಯಸ್ಸು ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರಿಗೆ ಸಲ್ಲುತ್ತದೆ. ಆಧುನಿಕ ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ವಿಚಾರವಾದಿ ಪಂಥಕ್ಕೆ ಸೇರಿದ ದಾರ್ಶನಿಕರಾದ ಡೇಕಾರ್ಟ್, ಲೈಬ್ನಿಜ್, ಸ್ಪಿನೋಜಾ ಮತ್ತು ಹೆಗೆಲ್‌ರು ಬುದ್ಧಿಯನ್ನು (Pure Reason) ಕೇವಲ ಜ್ಞಾನಸಂಪಾದನೆಯ ಒಂದು ಪ್ರಮಾಣ ಅಥವಾ ಸಾಧನವಾಗಿ ಪರಿಗಣಿಸದೆ ದಾರ್ಶನಿಕವಾಗಿ ಅತ್ಯಂತ ಮಹತ್ತ್ವವಾದ ಒಂದು ನೈಜ ಸತ್ಯ ಅಥವಾ ತತ್ತ್ವವನ್ನಾಗಿ ತಿಳಿಯುತ್ತಾರೆ.

ಬುದ್ಧಿ ಮತ್ತು ಪ್ರತಿಭಾನ

ಪಾಶ್ಚಾತ್ಯ ವಿಚಾರ ಮತ್ತು ಸಾಂಸ್ಕೃತಿಕ ಸಂಪ್ರದಾಯದಲ್ಲಿ ಬುದ್ಧಿ (Intellect) ಮತ್ತು ಪ್ರತಿಭಾನ (Intuition) ಗಳಲ್ಲಿ ತೀವ್ರವಾದ ಭೇದವನ್ನು ಮಾಡಲಾಗಿದೆ. ಎರಡೂ ತತ್ತ್ವಗಳನ್ನು ಸಮನ್ವಯಗೊಳಿಸಿ ಮನಸ್ಸಿನ ಏಕತೆ ಅಥವಾ ಸಮಗ್ರತೆಯನ್ನು ಪ್ರದರ್ಶಿಸಿದ ಪ್ಲೇಟೋನ ದಾರ್ಶನಿಕ ಸಂದೇಶವನ್ನು ನಿರ್ಲಕ್ಷಿಸಿ

ಆಧುನಿಕ ಮತ್ತು ಸಮಕಾಲೀನ ಪಾಶ್ಚಾತ್ಯ ದಾರ್ಶನಿಕರು ಅನಾವಶ್ಯಕವಾದ ಆದರೆ ಒಂದು ದೃಷ್ಟಿಯಿಂದ ಮಹತ್ವದ್ದಾದ ಎರಡು ವಿರುದ್ಧವಾದ ತಾತ್ವಿಕ ಪಂಥಗಳನ್ನು ಪ್ರತಿಪಾದಿಸಿದ್ದಾರೆ — ಶುದ್ಧ ವೈಚಾರಿಕತೆ ಅಥವಾ ಬೌದ್ಧಿಕತೆಯನ್ನು ಪ್ರತಿಪಾದಿಸುವವರದು ಒಂದು ಪಂಥವಾದರೆ, ಪ್ರತಿಭಾನ, ಇಂದ್ರಿಯಾನುಭವ ಅಥವಾ ಅನುಭಾವವನ್ನು ಪ್ರತಿಪಾದಿಸುವವರದು ಇನ್ನೊಂದು ಪಂಥ.

ಬುದ್ಧಿಯನ್ನು ಒಂದು ತಾತ್ವಿಕ ಸತ್ಯದ ಮಟ್ಟಕ್ಕೆ ಏರಿಸಿದ ಹೆಗೆಲ್‌ನ ದರ್ಶನಕ್ಕೆ ಪ್ರತಿಕ್ರಿಯೆಯಾಗಿ ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಅನೇಕ ದರ್ಶನಗಳು ಹುಟ್ಟಿಕೊಂಡವು. ಇವುಗಳಲ್ಲಿ ಫ್ರೆಂಚ್ ದಾರ್ಶನಿಕ ಹೆನ್ರಿ ಬರ್ಗಸನ್‌ರ ದರ್ಶನ ಮುಖ್ಯವಾಗಿದೆ. ಬುದ್ಧಿಯ ಮಹತ್ವವನ್ನು ಬರ್ಗಸನ್ ತೀವ್ರವಾಗಿ ವಿರೋಧಿಸಿ ಪ್ರತಿಭಾನ ಅಥವಾ ಇಂಗ್ಲೀಷಿನ ಅದರ ಸಮಾನಪದ Intuition ಇದರ ಮಹತ್ವವನ್ನು ತನ್ನ ದರ್ಶನ ಗ್ರಂಥಗಳಲ್ಲಿ ಸಾರಿದನು. ಬುದ್ಧಿಯ ಸ್ವರೂಪ ಮತ್ತು ಸತ್ಯಾನ್ವೇಷಣೆಯಲ್ಲಿ ಅದರ ಪಾತ್ರವನ್ನು ಕುರಿತು ಬರ್ಗಸನ್ ಪ್ರತಿಪಾದಿಸಿದ ಸಿದ್ಧಾಂತವನ್ನು ಹೀಗೆ ಸಂಗ್ರಹಿಸಿ ಹೇಳಬಹುದು.

ಬುದ್ಧಿಯು (Intellect) ಸತ್ಯವನ್ನು ಅಥವಾ ಜೀವಂತ ಅಸ್ತಿತ್ವವನ್ನು ನಿರ್ದಾಕ್ಷಿಣ್ಯವಾಗಿ ಕೃತ್ರಿಮವಾಗಿ ವಿಶ್ಲೇಷಿಸಿ ಅದನ್ನು ಅರ್ಥಮಾಡಿಕೊಳ್ಳುವ ಒಂದು ಯಾಂತ್ರಿಕ ಸಾಧನ. ತರ್ಕಶಾಸ್ತ್ರ ಮತ್ತು ವಿಜ್ಞಾನಗಳು ಬುದ್ಧಿಯ ಎರಡು ಮುಖ್ಯ ಅಭಿವ್ಯಕ್ತಿಗಳು. ನೈಜ ಜೀವಂತ ಸತ್ಯದ ಬಗ್ಗೆ ನೇರವಾದ ಅನುಭವವನ್ನು ಬುದ್ಧಿಯು ದೊರಕಿಸಿಕೊಳ್ಳಲು ಅಸಮರ್ಥವಾಗಿದೆ. ಜೀವಂತತನ, ಚಲನೆ, ಆಗುವಿಕೆ (Becoming), ಏಕತೆ ಇವು ನೈಜ ಸತ್ಯದ ಸ್ವರೂಪಗಳು. ಇವೆಲ್ಲವನ್ನು ಬುದ್ಧಿಯು ಅಸ್ತವ್ಯಸ್ತಗೊಳಿಸಿ ಅವುಗಳ ಸ್ಥಾನದಲ್ಲಿ ಬೌದ್ಧಿಕತೆಯಿಂದ ಕೃತ್ರಿಮವಾಗಿ ಮತ್ತು ಒಂದು ಸೀಮಿತ ಉದ್ದೇಶಕ್ಕೋಸ್ಕರವಾಗಿ ಸೃಷ್ಟಿಸಲ್ಪಟ್ಟ ತತ್ವಗಳನ್ನು ಮುಂದಿಡುತ್ತದೆ. ಇದೊಂದು ಬಹಳ ಅಪಾಯಕಾರಿ ಮಾನಸಿಕ ಪ್ರವೃತ್ತಿಯೆಂದು ಬರ್ಗಸನ್ ಹೇಳಿದ್ದಾನೆ.

ಬುದ್ಧಿಯ ಸ್ವರೂಪವನ್ನು ಮತ್ತು ಅದರಿಂದಾಗುವ ಅಪಾಯವನ್ನು ಗುರುತಿಸಿದ ಬರ್ಗಸನ್‌ನು ಪ್ರತಿಭಾನ ಅಥವಾ ಅಪರೋಕ್ಷಾನುಭವ (Intuition) ವನ್ನು ಪ್ರತಿಪಾದಿಸಿದ್ದಾನೆ. ಪ್ರತಿಭಾನವು ಮಾತ್ರ ಜೀವಂತ ಅಸ್ತಿತ್ವದ ನೇರ ಅನುಭವವನ್ನು ಉಂಟುಮಾಡಬಲ್ಲದು ಎಂಬುದು ಬರ್ಗಸನ್‌ನ ದರ್ಶನದ ಮುಖ್ಯ ಸಿದ್ಧಾಂತ: "Intuition is life, real and immediate — life envisaging itself. There is something in the universe analogous to the creative Spirit of the poet, a living, pushing force, an *elan vital*, which eludes the mathematical intelligence and which can be appreciated only by a kind of

divining sympathy, a feeling which approaches nearer to the essence of things than does reason. Philosophy is the art of comprehending or seizing the universe in its process, in its vital impetus. Intuition is something like instinct—a conscious, refined, spiritualized instinct — and instinct is nearer to life than are intellect and science. The real, the 'becoming', the inward 'duree', life and consciousness, we can apprehend only through the faculty of intuition"[2]

ಆಧುನಿಕ ಪಾಶ್ಚಾತ್ಯ ತತ್ವಶಾಸ್ತ್ರದ ಇತಿಹಾಸದ ಒಂದು ಗ್ರಂಥದಲ್ಲಿ ಬರ್ಗ್‌ಸನ್‌ನ ವರ್ಣನದ ತಿರುಳನ್ನು ಮೇಲಿನಂತೆ ಸಂಗ್ರಹಿಸಲಾಗಿದೆ. ಇದರಿಂದ ಪ್ರತಿಭಾನದ ಸ್ವರೂಪವು ಸ್ಪಷ್ಟವಾಗುವುದರ ಜೊತೆಗೆ ಬುದ್ಧಿಯು ಜೀವಂತ ಸತ್ಯದಿಂದ ಎಷ್ಟು ದೂರವಾಗಿದೆ ಎನ್ನುವುದರ ಪರಿಚಯವಾಗುತ್ತದೆ. ಬೌದ್ಧಿಕತೆಯ ಮಹತ್ವವನ್ನು ಕಂಡುಕೊಂಡ ದಾರ್ಶನಿಕರು ಬರ್ಗ್‌ಸನ್‌ರ ಸಿದ್ಧಾಂತವನ್ನು ತಿರಸ್ಕರಿಸಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಬುದ್ಧಿಗೂ ಮತ್ತು ಇಂದ್ರಿಯಾನುಭವಕ್ಕೂ ಅಥವಾ ಪ್ರತಿಭಾನಕ್ಕೂ ಪರಸ್ಪರ ಇರುವ ವಿರೋಧ. ಈ ವಿರೋಧ ದರ್ಶನ ಶಾಸ್ತ್ರದಲ್ಲಿ ಮತ್ತು ದಾರ್ಶನಿಕರಲ್ಲಿ ಇನ್ನೂ ಮುಂದುವರಿದಿದೆ.

ಬೌದ್ಧಿಕ ಸಂಪ್ರದಾಯದ ಮುಖ್ಯಾಂಶಗಳು

ಬೌದ್ಧಿಕತೆಯು ಇಂದ್ರಿಯಾನುಭವದ ವಿಮರ್ಶೆಯಿಂದ ಪ್ರಾರಂಭವಾಯಿತು ಎಂದು ಹಿಂದೆ ತಿಳಿಸಲಾಗಿದೆ. ಆದರೆ ಬೌದ್ಧಿಕತೆಯ ಬಗ್ಗೆ ಇಷ್ಟೇ ಹೇಳಿದರೆ ಏನೂ ಹೇಳಿದಂತಲ್ಲ. ಅದು ತತ್ವಶಾಸ್ತ್ರದಲ್ಲಿ ಮತ್ತು ಉಳಿದ ಶಾಸ್ತ್ರಗಳಲ್ಲಿ ಒಂದು ಮಹತ್ವದ ಸ್ಥಾನ ಗಳಿಸಿಕೊಳ್ಳಲು ಅದಕ್ಕಿರುವ ತಾತ್ವಿಕ ಹಿನ್ನೆಲೆ ಕಾರಣ. ಈ ತಾತ್ವಿಕ ಹಿನ್ನೆಲೆಯ ರೂಪುರೇಷೆಗಳನ್ನು ಸಂಕ್ಷಿಪ್ತವಾಗಿಯಾದರೂ ಕೊಡುವುದು ವೈಚಾರಿಕತೆಯ ದೃಷ್ಟಿಕೋನದಿಂದ ಅತ್ಯವಶ್ಯ.

ನಮ್ಮ ಜ್ಞಾನವೆಲ್ಲವೂ ಅನುಭವದಿಂದಲೇ ಅಥವಾ ಕೇವಲ ಅನುಭಾವದಿಂದ ಬರುತ್ತದೆ ಎಂಬುದನ್ನು ಬೌದ್ಧಿಕತೆ ನಿರಾಕರಿಸುತ್ತದೆ. ಶುದ್ಧ ಬೌದ್ಧಿಕತೆಯಿಂದ ಅಥವಾ ವೈಚಾರಿಕತೆಯಿಂದ ಒಂದು ಪ್ರಕಾರದ ಜ್ಞಾನ ನಮ್ಮ ಮನಸ್ಸಿನಲ್ಲಿ ಉದಯವಾಗುತ್ತದೆ ಎನ್ನುವುದು ಬೌದ್ಧಿಕತೆಯ ಮೂಲಭೂತ ಸಿದ್ಧಾಂತ. ಈ ಸತ್ಯವನ್ನು ಬೇರೆ ಬೇರೆ ದಾರ್ಶನಿಕರು ಬೇರೆ ಬೇರೆ ರೀತಿಯಲ್ಲಿ ವಿವರಿಸಿದ್ದಾರೆ. ಪ್ಲೇಟೋನಿನ ಪ್ರಕಾರ ನೈಜ ಜ್ಞಾನವೆಲ್ಲವೂ ನಿತ್ಯ ಜ್ಞಾನವಾಗಿದ್ದು ಅಮರವಾದ ಆತ್ಮನಲ್ಲಿರುತ್ತದೆ. ಜ್ಞಾನ ಸಂಪಾದನೆ ಎಂದರೆ ಆಗಲೇ ಆತ್ಮನಲ್ಲಿರುವ ಜ್ಞಾನವನ್ನು ಜ್ಞಾಪಕಕ್ಕೆ ತಂದುಕೊಳ್ಳುವು

ವಷ್ಟೆ. ಇಲ್ಲಿ ಇಂದ್ರಿಯಾನುಭವದ ಪಾತ್ರ ಶೂನ್ಯ. ಗಣಿತಶಾಸ್ತ್ರದಲ್ಲಿ ಸಂಚಿತವಾಗುತ್ತಿರುವ ಗಣಿತ ಜ್ಞಾನ ಇಂದ್ರಿಯಾನುಭವದಿಂದ ಬಂದದ್ದಲ್ಲ ಎನ್ನುವುದನ್ನು ಪ್ಲೇಟೋ ಗುರುತಿಸಿದ್ದ. ಆದ್ದರಿಂದಲೇ ಅವನು ದಾರ್ಶನಿಕವಾದ ಜ್ಞಾನ ಹೇಗಿರುತ್ತದೆ ಎನ್ನುವುದನ್ನು ಸೂಕ್ಷ್ಮವಾಗಿ ಸೂಚಿಸಲು ಗಣಿತ ಜ್ಞಾನವನ್ನು ಮಾದರಿಯನ್ನಾಗಿಟ್ಟುಕೊಳ್ಳುತ್ತಾನೆ. 2+2=4 ಅಥವಾ ಒಂದು ತ್ರಿಕೋನದಲ್ಲಿರುವ ಮೂರು ಕೋನಗಳು ಎರಡು ಲಂಬಕೋನಗಳಿಗೆ ಸಮವಾಗಿರುತ್ತವೆ ಎಂಬ ಗಣಿತ ಸೂತ್ರಗಳಲ್ಲಿರುವ ಜ್ಞಾನವು ನಿತ್ಯ, ಖಚಿತ ಮತ್ತು ಆವಶ್ಯಕವಾದ್ದರಿಂದ ಅದು ಇಂದ್ರಿಯಾನುಭವದಿಂದ ಹುಟ್ಟುವುದಿಲ್ಲ. ಆದರೆ ಇಂದ್ರಿಯಾನುಭವದಿಂದ ಹುಟ್ಟಿದ ಜ್ಞಾನವು ಅನಿತ್ಯವಾದದ್ದು, ಸಾಪೇಕ್ಷವಾದದ್ದು ಮತ್ತು ಅನಿಶ್ಚಿತವಾದದ್ದು. ಇವೆಲ್ಲ ಅಂಶಗಳನ್ನು ಪ್ಲೇಟೋ ಕಂಡುಕೊಂಡಿದ್ದ. ಇಂದ್ರಿಯಾನುಭವವಾಗದೆಯೇ ಜ್ಞಾನವು ಹುಟ್ಟುವುದು ಸಾಧ್ಯವಿದ್ದರೆ ಯಾವ ಸಾಧನದಿಂದ ಇದು ಸಾಧ್ಯ ಎನ್ನುವುದು ಮುಖ್ಯ ಪ್ರಶ್ನೆಯಾಗುತ್ತದೆ. ಈ ಪ್ರಶ್ನೆಗೆ ಸಮರ್ಥವಾಗಿ ಉತ್ತರಿಸಿದವರು ಆಧುನಿಕ ಪಾಶ್ಚಾತ್ಯ ತತ್ವಜ್ಞಾನಿಗಳಾದ ಡೇಕಾರ್ಟ್, ಸ್ಪಿನೋಜಾ, ಲೈಬ್ನಿಜ್, ಕ್ಯಾಂಟ್ ಮತ್ತು ಹೆಗೆಲ್‌ರು.

ಬೌದ್ಧಿಕತೆಯ ಪಂಥಕ್ಕೆ ಸೇರಿದವರಾದ ಡೇಕಾರ್ಟ್, ಸ್ಪಿನೋಜಾ ಮತ್ತು ಲೈಬ್ನಿಜ್‌ರು ಜ್ಞಾನ ಸಂಪಾದನೆಯಲ್ಲಿ ಇಂದ್ರಿಯಾನುಭವದ ಪಾತ್ರವನ್ನು ಬೌದ್ಧಿಕತೆಗೆ ಅಧೀನಗೊಳಿಸಲು ಒಂದು ನೂತನ ಜ್ಞಾನ ಮೀಮಾಂಸೆಯ ಸಿದ್ಧಾಂತವನ್ನು ಮಂಡಿಸಿದರು. ಈ ಸಿದ್ಧಾಂತ ಇಂಗ್ಲಿಷ್‌ನಲ್ಲಿ "doctrine of innate ideas" (ದೈವದತ್ತ ವಿಚಾರಗಳ ಸಿದ್ಧಾಂತ) ಎಂದು ಪ್ರಸಿದ್ಧಿಯಾಗಿದೆ. ಈ ಸಿದ್ಧಾಂತದ ವಿವರಣೆ ಹೀಗಿದೆ :

ನಮ್ಮ ಮನಸ್ಸು ಅಥವಾ ಬುದ್ಧಿಯ ಸ್ವರೂಪ ಹೇಗಿರುತ್ತದೆಂದರೆ ಹುಟ್ಟಿನಿಂದಲೇ ಅವುಗಳಲ್ಲಿ ಕೆಲವು ವಿಚಾರಗಳು ಮತ್ತು ತತ್ವಗಳು ಬಂದಿರುತ್ತವೆ. ಅನುಭವದಿಂದ ಬಂದವುಗಳಲ್ಲ. ಅಂತಹ ವಿಚಾರಗಳಲ್ಲಿ ಅತ್ಯಂತ ಮುಖ್ಯವಾದ ವಿಚಾರವೆಂದರೆ ದೇವರ ಕಲ್ಪನೆ. ದೇವರ ಬಗ್ಗೆ ಇರುವ ನಮ್ಮ ಕಲ್ಪನೆ ಎಷ್ಟು ಸ್ಪಷ್ಟವಾಗಿದೆ ಎಂದರೆ ಅದು ಅನುಭವದಿಂದ ಬಂದಿರಲು ಸಾಧ್ಯವಿಲ್ಲ ಮತ್ತು ದೇವರ ಕಲ್ಪನೆಯಲ್ಲಿ ಅನಂತತೆ ಮತ್ತು ಪರಿಪೂರ್ಣತೆಗಳು ಸೇರಿಕೊಂಡಿರುವುದರಿಂದ ಅಂತಹ ಕಲ್ಪನೆ ಪರಿಮಿತವಾದ ಮತ್ತು ಅಪರಿಪೂರ್ಣವಾದ ಅನುಭವದಿಂದ ಬಂದಿರಲು ಸಾಧ್ಯವಿಲ್ಲ. ಆದ್ದರಿಂದ ನಮ್ಮಲ್ಲಿರುವ ದೇವರ ಕಲ್ಪನೆ ಜನ್ಮತಃ ಮನಸ್ಸಿನಲ್ಲಿ ಸೇರಿಕೊಂಡು ಬಂದಿರುವ ಕಲ್ಪನೆ.

ಅನುಭವದಿಂದ ಬಾರದೆ ಇರುವಂತಹ ಆದರೆ ಮನಸ್ಸಿನಲ್ಲಿರುವಂತಹ ಮತ್ತು ಹುಟ್ಟಿನಿಂದಲೇ ಬಂದ ತತ್ವವೆಂದರೆ ಕಾರ್ಯಕಾರಣ ತತ್ವ. ಒಂದು ಘಟನೆ ಕಾರಣ ಮತ್ತು ಇನ್ನೊಂದು ಘಟನೆ ಅದರ ಕಾರ್ಯ ಮತ್ತು ಆ ಎರಡೂ ಘಟನೆಗಳ ಮಧ್ಯೆ ಇರುವ ಸಂಬಂಧ ಅವಶ್ಯವಾದದ್ದು ಎನ್ನುವ ವಿಚಾರ ಅನುಭವದಿಂದ ಹುಟ್ಟುವುದಿಲ್ಲ. ಬ್ರಿಟಿಷ್ ಸಂದೇಹವಾದಿ ತತ್ವಜ್ಞಾನಿ ಹ್ಯೂಮ್ ವಾದ ಮಾಡಿದ ಹಾಗೆ, ಅನುಭವವು ಏನು ತೋರಿಸುತ್ತದೆ ಎಂದರೆ ಒಂದು ಘಟನೆ ಇನ್ನೊಂದು ಘಟನೆಯನ್ನು ನಿರಂತರವಾಗಿ ಅನು

ಸರಿಸುತ್ತವೆ. ಅಥವಾ ಒಂದು ಘಟನೆ ಸಂಭವಿಸಿದರೆ ಅದರ ಜೊತೆಗೆ ಇನ್ನೊಂದು ಸಂಭವಿಸುತ್ತದೆ. ಇದಕ್ಕೆ ಸಾಹಚರ್ಯ ಸಂಬಂಧ ಎಂದು ಕರೆಯಲಾಗಿದೆ. ಆದರೆ ಈ ರೀತಿಯ ಅನುಭವದಿಂದ ಎರಡು ಘಟನೆಗಳ ಮಧ್ಯೆ ಅವಶ್ಯವಾದ ಕಾರ್ಯ ಕಾರಣ ಸಂಬಂಧವಿದೆಯೆಂದು ನಂಬಲು ಯಾವ ತಾರ್ಕಿಕ ಆಧಾರವೂ ಇಲ್ಲ. ಹೀಗಾಗಿ ಹ್ಯೂಮ್‌ನ ಸಿದ್ಧಾಂತವನ್ನು ಒಪ್ಪಿಕೊಂಡವರು ಕಾರ್ಯಕಾರಣ ನಿಯಮದ ಬಗ್ಗೆ ಸಂದೇಹವಾದಿಗಳಾದರು. ಅನುಭವದಿಂದ ವಿಜ್ಞಾನಗಳಿಗೂ ಮಹತ್ವವಾದ ಕಾರ್ಯ ಕಾರಣಗಳ ಮಧ್ಯೆ ಅವಶ್ಯ ಸಂಬಂಧ ಸಿದ್ಧವಾಗುವುದಿಲ್ಲ. ತಾರ್ಕಿಕವಾಗಿ ಅದು ಸಿದ್ಧವಾಗದಿದ್ದರೆ, ಅವಶ್ಯ ಕಾರ್ಯಕಾರಣ ನಿಯಮದ ಮೇಲೆಯೇ ನಿಂತ ವಿಜ್ಞಾನದ ಸೌಧ ಕುಸಿದು ಬೀಳುತ್ತದೆ. ಆದ್ದರಿಂದ ಡೇಕಾರ್ಟ್ ತತ್ವಜ್ಞಾನಿಯಂತೆ ಕಾರ್ಯ ಕಾರಣ ತತ್ವ ಮನಸ್ಸಿನಲ್ಲಿ ಹುಟ್ಟಿನಿಂದಲೇ ಬಂದಿದೆ (innate to the mind) ಎನ್ನಬೇಕು ಅಥವಾ ಕ್ಯಾಂಟ್ ಹೇಳಿದಂತೆ ಆ ನಿಯಮ ಮನಸ್ಸಿನ ಒಂದು ಭಾಗ (understanding) ಕ್ಕೆ ಸೇರಿದ ಅನುಭವಾತೀತ (transcendental)ವಾದ ಸಾಮಾನ್ಯ ತತ್ವ ಎನ್ನಬೇಕು. ವೈಚಾರಿಕತೆಯ ಸಾಮಾನ್ಯ ಮನುಷ್ಯರ ತಿಳಿವಳಿಕೆಯ ದೃಷ್ಟಿಯಿಂದ ಜನ್ಮತಃ ಮನಸ್ಸಿನಲ್ಲಿ ಕೆಲವು ಅನುಭವದಿಂದ ಸ್ವತಂತ್ರವಾದ ವಿಚಾರಗಳು, ಕಲ್ಪನೆಗಳು ಮತ್ತು ತತ್ವಗಳು ಇರುತ್ತವೆ ಎಂಬ ಸಿದ್ಧಾಂತ ಅಷ್ಟು ಮಹತ್ವವಲ್ಲ ಎನಿಸಿ ದರೂ, ಈ ಸಿದ್ಧಾಂತದ ಸತ್ಯ ಮತ್ತು ಅಸತ್ಯತೆಯ ಮೇಲೆ ವೈಚಾರಿಕತೆಯ ಅನೇಕ ಸಾಮಾನ್ಯ ವಾದವಿವಾದಗಳನ್ನು ಪರಿಹರಿಸಬಹುದು. ಹುಟ್ಟಿನಿಂದಲೇ ಕೆಲವು ಸಾಮರ್ಥ್ಯ ಗಳನ್ನು ಮತ್ತು ರೋಗಗಳನ್ನು ಮನುಷ್ಯರು ಪಡೆದುಕೊಂಡಿರುತ್ತಾರೆಂಬುದನ್ನು (genetics) ಒಪ್ಪಿಕೊಳ್ಳುವುದಾದರೆ ಕೆಲವು ಕಲ್ಪನೆಗಳನ್ನು ಮತ್ತು ವಿಚಾರಗಳನ್ನು ಮನಸ್ಸು ಹುಟ್ಟುವಾಗಲೇ ಅಂದರೆ ಅನುಭವವಾಗುವುದಕ್ಕಿಂತ ಪೂರ್ವದಲ್ಲಿಯೇ ಪಡೆದು ಕೊಂಡಿರುತ್ತದೆಂದು ಹೇಳುವುದರಲ್ಲಿ ತಪ್ಪೇನಿಲ್ಲ. ಬೌದ್ಧಿಕತೆಯ ಎಲ್ಲಾ ವಿವರಗಳನ್ನು ಕೊಡುವುದು ಪ್ರಸ್ತುತ ಉದ್ದೇಶಕ್ಕೆ ಆವಶ್ಯಕವಲ್ಲವಾದ್ದರಿಂದ ಅದರ ಮುಖ್ಯವಾದ ಅಂಶಗಳನ್ನು ಇಲ್ಲಿ ವಿವರಿಸಲಾಗಿದೆ.

ಬೌದ್ಧಿಕತೆ ಮತ್ತು ವೈಚಾರಿಕತೆ

ಪಾಶ್ಚಾತ್ಯ ತತ್ವಶಾಸ್ತ್ರದ ಪರಿಚಯವಿಲ್ಲದವರಿಗೆ ಬೌದ್ಧಿಕತೆಗೂ ಮತ್ತು ವೈಚಾರಿ ಕತೆಗೂ ಇರುವ ನಿಕಟ ಸಂಬಂಧ ಮತ್ತು ವೈಚಾರಿಕತೆಗೆ ಬೌದ್ಧಿಕತೆಯ ಕೊಡುಗೆಯ ಮಹತ್ವ ಗೊತ್ತಾಗುವುದಿಲ್ಲ. ಬೌದ್ಧಿಕತೆ ಆಧುನಿಕ ಪಾಶ್ಚಾತ್ಯ ವೈಚಾರಿಕತೆಗೆ ಹೇಗೆ ಚಾಲನೆ (Impetus) ನೀಡಿದೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ ಈ ಪ್ರಬಂಧ ವನ್ನು ಪರಿಸಮಾಪ್ತಿ ಮಾಡಲಾಗುವುದು.

ಆಧುನಿಕ ಪಾಶ್ಚಾತ್ಯ ತತ್ವಜ್ಞಾನಿಗಳು ಮುಕ್ತಮನಸ್ಸಿನಿಂದ ವಿಚಾರಮಾಡಿ ಸ್ವತಂತ್ರವಾಗಿ ವಿಶ್ವದ (ಮಾನವ ಜೀವನವನ್ನೂ ಒಳಗೊಂಡು) ಎಲ್ಲಾ ಸಮಸ್ಯೆಗಳಿಗೆ

ಖಚಿತವಾದ ಪರಿಹಾರಗಳನ್ನು ಕಂಡುಕೊಳ್ಳಬೇಕೆಂದು ನಿರ್ಧರಿಸಿದ್ದರಿಂದ ಆಧುನಿಕ ವೈಚಾರಿಕತೆ ಪ್ರಾರಂಭವಾಯಿತೆನ್ನಬಹುದು. ಇಂದ್ರಿಯಾನುಭವವೇ ಎಲ್ಲಾ ಪ್ರಕಾರದ ಜ್ಞಾನಕ್ಕೂ ಸಾಧನ ಎಂದು ಅವರು ಭಾವಿಸಿದ್ದರೆ ಆಧುನಿಕ ವೈಚಾರಿಕತೆಯೇ ಹುಟ್ಟುತ್ತಿರಲಿಲ್ಲ ಎನ್ನಬಹುದು. ಇಂದ್ರಿಯಾನುಭವ ಖಚಿತವಾದ ಜ್ಞಾನವನ್ನು ದೊರಕಿಸಿಕೊಡುವುದಕ್ಕೆ ಅಸಮರ್ಥವಾಗಿದೆ ಮತ್ತು ಕೇವಲ ಇಂದ್ರಿಯಾನುಭವದ ಮೇಲೆ ನಿಂತ ಜ್ಞಾನವನ್ನು ಸಂದೇಹಿಸುವುದು ತಾರ್ಕಿಕವಾಗಿ ಸಾಧ್ಯ ಎಂದು ಅರಿತ ಫ್ರೆಂಚ್ ತತ್ವಜ್ಞಾನಿ ಡೇಕಾರ್ಟನು ಜ್ಞಾನದಲ್ಲಿ ಬೌದ್ಧಿಕತೆಯ ಮಹತ್ವವನ್ನು ಒತ್ತಿ ಹೇಳಿದ್ದಾನೆ. ಅವನು ತನ್ನ ತತ್ವಶಾಸ್ತ್ರದ ಒಂದು ಮೂಲಭೂತ ಸೂತ್ರ "ನಾನು ಆಲೋಚಿಸುತ್ತಿದ್ದೇನೆ, ಆದ್ದರಿಂದ ನಾನು ಇರುತ್ತೇನೆ" ("I *think*, therefore I *am*") ಎನ್ನುವುದನ್ನು ಹೇಗೆ ಸ್ಥಾಪಿಸಿದನು ಎಂದು ತಿಳಿದುಕೊಂಡರೆ ಆಧುನಿಕ ರೀತಿಯ ವೈಚಾರಿಕತೆಯಲ್ಲಿ ಬೌದ್ಧಿಕತೆ ಎಂತಹ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದರ ಪರಿಚಯವಾಗುತ್ತದೆ.

ನಿಶ್ಚಿತ (certain) ಜ್ಞಾನವನ್ನು ಪಡೆಯಬೇಕೆಂಬ ಅಭಿಲಾಷೆ ವಿಚಾರವಾದಿ ಪಂಥಕ್ಕೆ ಸೇರಿದ ಡೇಕಾರ್ಟ್, ಸ್ಪಿನೋಜಾ ಮತ್ತು ಲೈಬ್ನಿಜ್‌ರಿಗಿತ್ತು. ಅನಿಶ್ಚಿತವಾದ ಜ್ಞಾನ ಎಲ್ಲಾ ಬಗೆಯ ವಾದ ವಿವಾದಗಳಿಗೆ ಮತ್ತು ಘರ್ಷಣೆಗಳಿಗೆ ಕಾರಣವಾಗುತ್ತದೆ ಎಂದು ಅವರು ತಿಳಿದಿದ್ದರು. ದೇವರ ಕಲ್ಪನೆ, ಸ್ವರೂಪ ಮತ್ತು ಅಸ್ತಿತ್ವದ ಬಗ್ಗೆ ಇರುವ ಅನಿಶ್ಚಿತತೆ ಮಾನವ ಜನಾಂಗದಲ್ಲಿ ಎಂತಹ ಭಯಂಕರ ಘರ್ಷಣೆಗಳಿಗೆ ಕಾರಣವಾಗಿದೆ ಎಂಬುದನ್ನು ನೋಡಿದರೆ ಡೇಕಾರ್ಟನಂತಹ ತತ್ವಜ್ಞಾನಿ ದೇವರ ಬಗ್ಗೆ ನಿಶ್ಚಿತವಾದ ಜ್ಞಾನ ಸ್ಥಾಪಿಸಬೇಕು ಎನ್ನುವುದರ ಮಹತ್ವದ ಅರಿವಾಗುತ್ತದೆ. ಆದರೆ ದೇವರ ಅಸ್ತಿತ್ವವನ್ನು ನಿಶ್ಚಿತವಾಗಿ ಸ್ಥಾಪಿಸುವುದಕ್ಕಿಂತ ಮೊದಲು ನಾವು ನಿಜವಾಗಿಯೂ ಅಸ್ತಿತ್ವದಲ್ಲಿದ್ದೇವೆಯೆ ಎಂಬುದನ್ನು ಸ್ಥಾಪಿಸಬೇಕು ಎಂದು ಡೇಕಾರ್ಟನು ತಿಳಿದಿದ್ದನು. ಆದ್ದರಿಂದ ಅವನು ಯಾವ ಯಾವುದನ್ನು ತಾರ್ಕಿಕವಾಗಿ ಸಂದೇಹಿಸುವುದಕ್ಕೆ ಸಾಧ್ಯವೋ ಅವೆಲ್ಲವನ್ನೂ ಅನಿಶ್ಚಿತವಾದವೆಂದು ಹೇಳಿ ಸಂದೇಹಿಸುವ ಕೆಲಸವನ್ನು ಮಾಡುತ್ತಿರುವ ವ್ಯಕ್ತಿಯ ಅಸ್ತಿತ್ವವನ್ನು ಮಾತ್ರ ಸಂದೇಹಿಸುವುದಕ್ಕೆ ಅಸಾಧ್ಯ ಎಂದು ಸಿದ್ಧ ಮಾಡಿ "ನಾನು ಸಂದೇಹಿಸುತ್ತಿದ್ದೇನೆ, ಆದ್ದರಿಂದ ನಾನು ಇದ್ದೇನೆ" ಎಂಬ ನಿಶ್ಚಿತವಾದ ಜ್ಞಾನವನ್ನು ಪತ್ತೆ ಮಾಡಿದನು. ಡೇಕಾರ್ಟನು ಶೋಧಿಸಿದ ಮೇಲಿನ ಸೂತ್ರ ಅವನ ತತ್ವಶಾಸ್ತ್ರದಲ್ಲಷ್ಟೇ ಅಲ್ಲದೆ ಸಮಗ್ರ ಆಧುನಿಕ ಪಾಶ್ಚಾತ್ಯ ವೈಚಾರಿಕತೆಯ ಮೇಲೆ ಆಳವಾದ ಪ್ರಭಾವ ಬೀರಿದೆ.

ಮೇಲೆ ವಿವರಿಸಿದ ಡೇಕಾರ್ಟನ ವೈಚಾರಿಕತೆಯ ರೀತಿಯಲ್ಲಿ ಬೌದ್ಧಿಕತೆಯ ಪಾತ್ರವೇನು ?

ಡೇಕಾರ್ಟನು ತನ್ನ ತತ್ವಶಾಸ್ತ್ರದ ಮೂಲಭೂತ ಸೂತ್ರ "ನಾನು ಆಲೋಚಿಸುತ್ತಿದ್ದೇನೆ, ಆದ್ದರಿಂದ ನಾನು ಇದ್ದೇನೆ" ಎನ್ನುವುದನ್ನು ಶುದ್ಧವಾದ ವಿಚಾರದಿಂದ

ಶೋಧಿಸಿದನು. ಶುದ್ಧವಾದ ವಿಚಾರವೇ ಬೌದ್ಧಿಕತೆ (Intellectualism) ಎನ್ನಬಹುದು. ಬುದ್ಧಿಯ ಸಮರ್ಥ ವ್ಯವಸಾಯದಿಂದ ಯಾವುದೇ ವಿಷಯದ ಬಗ್ಗೆ ನಿಶ್ಚಿತವಾದ ಮತ್ತು ಸ್ಪಷ್ಟವಾದ ಜ್ಞಾನವನ್ನು ಶೋಧಿಸಬಹುದೆಂಬುದನ್ನು ಡೇಕಾರ್ಟ್‌ನಂತಹ ತತ್ವಶಾಸ್ತ್ರಜ್ಞರು ತಿಳಿದಿದ್ದರು. ವೈಚಾರಿಕತೆಯ ನಿಜವಾದ ಗುರಿ ಯಾವುದು? ನಿಶ್ಚಿತವಾದ, ಸ್ಪಷ್ಟವಾದ ಅಂದರೆ ಯಾವ ರೀತಿಯಲ್ಲಿಯೂ ಸಂದೇಹಕ್ಕೆ ಆಸ್ಪದವಿಲ್ಲದ ಜ್ಞಾನದ ಶೋಧನೆ. ಬರೀ ಇಂದ್ರಿಯಾನುಭವದಿಂದ ಅಂತಹ ಜ್ಞಾನದ ಶೋಧನೆ ಮತ್ತು ಸ್ಥಾಪನೆ ಅಸಾಧ್ಯ ಎಂಬುದನ್ನು ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳೂ ಒಪ್ಪಿಕೊಂಡಿದ್ದಾರೆ. ಹಾಗಾದರೆ ನಿಶ್ಚಿತ ಜ್ಞಾನದ ಸ್ಥಾಪನೆ ಯಾವುದರಿಂದ ಸಾಧ್ಯವಾಗುತ್ತದೆ ಎನ್ನುವ ಸಮಸ್ಯೆಗೆ ಪರಿಹಾರವಾಗಿ ಬೌದ್ಧಿಕತೆ ಹುಟ್ಟಿಕೊಂಡಿತು. ಬೌದ್ಧಿಕತೆಯಿಂದ ಅಸ್ಪಷ್ಟವಾದ ಮತ್ತು ಅನಿಶ್ಚಿತವಾದ ಜ್ಞಾನವನ್ನು ಗುರುತಿಸುವುದಕ್ಕೆ ಸಾಧ್ಯವಾಗುವುದರ ಜೊತೆಗೆ ವೈಚಾರಿಕತೆಯ ಯಶಸ್ಸಿಗೆ ಕಾರಣಭೂತವಾಗುವ ಸ್ಪಷ್ಟ, ಖಚಿತ ಮತ್ತು ನಿಶ್ಚಿತ ಜ್ಞಾನದ ನಿಯಮಗಳ ಸ್ಥಾಪನೆ ಸಾಧ್ಯವಾಗುತ್ತದೆ.

ಅಡಿಟಿಪ್ಪಣಿಗಳು

1 B. Russell : *An Outine of Philosophy, pp. 1-2*
2 Frank Thilly : *A History of Philosophy, p. 616*

"ಮನೋಜೀವಿಯಾದ ಮಾನವ ಕುಲವು ಈ ಭೂಮಿಯ ಮೇಲೆ ನೆಲೆಸಿದ ಅಲ್ಪಾವಧಿಯಲ್ಲಿ, ಅಮಿತ ವಿಸ್ಮಯಗಳಿಂದ ಕೂಡಿರುವ, ಬಿಲಿಯಗಟ್ಟಲೆ ವರ್ಷಗಳಿಂದ ಕಾಣಿಸಿಕೊಂಡು ಬಂದ ಮಹಾ ಜಗತ್ತಿನ ಬರಿಯ ಸೆರಗೊಂದರ ಸೂಕ್ಷ್ಮ ಎಳೆಯನ್ನು ಕೂಡ ಚೆನ್ನಾಗಿ ಕಂಡಿರಲಾರದು. ಆದರೆ, ತನ್ನ ಅಲ್ಪಮತಿಗೆ ಗೋಚರಿಸಿದ ಅದ್ಭುತ ಆಶ್ಚರ್ಯಗಳಿಂದ ಚಕಿತಗೊಂಡು — ಈ ಜಗತ್ತೇನು ? ಯಾರು ಅದನ್ನು ಸೃಷ್ಟಿಸಿದರು, ಯಾಕೆ, ನಾನು ಎಂಥವ, ಯಾತಕ್ಕಿದ್ದೇನೆ — ಎಂಬ ಪ್ರಶ್ನೆ ಕೇಳತೊಡಗಿತು. ಬರಿದೆ ಪ್ರಶ್ನೆ ಕೇಳಿದರೆ ಸಾಲದಲ್ಲ, ತನ್ನ ಎಟುಕಿಗೆ ಸಿಗದಂಥ ವಿಷಯವನ್ನು ಸಿಕ್ಕಿದಂತೆಯೇ ನೆನೆದು, — ಮನಸ್ಸನ್ನು ಕಲ್ಪನಾಲೋಕಕ್ಕೆ ಹರಿಯಗೊಟ್ಟು, ಅಲ್ಲಿ ಕಂಡ ಕನಸನ್ನು ನಿಜ, ಸತ್ಯ — ಎಂದು ಸಾರುತ್ತಲೂ ಬಂದಿತು !"

[ಶಿವರಾಮ ಕಾರಂತ : ಮೂಕಜ್ಜಿಯ ಕನಸುಗಳು,
ಮುನ್ನುಡಿ]

ಟಿ. ವಿ. ವೆಂಕಟಾಚಲಶಾಸ್ತ್ರೀ

ಚಿಂತನ-೧೨

೧ ಸಂಯಮ

ಸಂಯಮ ಎಂಬ ಒಂದು ಅಮೂಲ್ಯವಾದ ವಸ್ತುವಿದೆ, ಅದನ್ನು ಸಂಪಾದಿಸಿಕೊಂಡು ಉಚಿತವರಿತು ಬಳಸಿದರೆ ಪ್ರಯೋಜನವಿದೆ ಎನ್ನುವುದು ನಮ್ಮ ಜನಕ್ಕೆ ಇನ್ನೂ ತಿಳಿದ ಹಾಗಿಲ್ಲ. ಯಾವುದೇ ನಡವಳಿಕೆಯಲ್ಲಿ ವ್ಯವಹಾರದಲ್ಲಿ ಒಂದು ಮಿತಿಯರಿತು ವರ್ತಿಸುವುದು, ಅತಿಗೆ ಹೋಗದಿರುವುದು ಸಂಯಮದ ಸಾಮಾನ್ಯ ಲಕ್ಷಣ ಎನ್ನಬಹುದು. ಮಿತಿಗಿಂತ ಕೆಳಕ್ಕೆ ಇಳಿಯುವುದು ಕಾರ್ಪಣ್ಯವನ್ನು, ಅತಿಯ ಅಂಚನ್ನು ಸಮೀಪಿಸುವುದು ಸ್ವಾಚ್ಛಂದ್ಯವನ್ನು ಕೈ ಬೀಸಿ ಕರೆದ ಹಾಗೆ. ಈ ಮಿತಿ–ಅತಿಗಳ ಸಂಗಮಸ್ಥಾನದಲ್ಲಿ ವಿಹರಿಸುವ ಜೀವನಪಥಿಕನಿಗೆ ಈ ಲೋಕ ತಣ್ಣನೆಯ ಕೊಳವಾಗಬಹುದು, ಹೂ ಹಣ್ಣುಗಳ ತೋಟವಾಗಬಹುದು.

ಸಂಯಮ ಎನ್ನುವ ಶಬ್ದದಲ್ಲೇ ಅತಿವರ್ತನೆಯನ್ನು ನಿಗ್ರಹಿಸುವುದು ಎನ್ನುವ ಅರ್ಥವಿದೆ. ಏನನ್ನು ನಿಗ್ರಹಿಸುವುದು ? ಇಂದ್ರಿಯಗಳ ಸ್ವೇಚ್ಛಾ ವ್ಯಾಪಾರವನ್ನು ತಾನೇ ? ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಈ ಐದು ಬುದ್ಧೀಂದ್ರಿಯಗಳ ಹತೋಟಿಯೂ, ಮಾತು, ಕೈ, ಕಾಲು ಮತ್ತು ಪಾಯೂಪಸ್ಥಗಳೆಂಬ ಐದು ಕರ್ಮೇಂದ್ರಿಯಗಳ ಹತೋಟಿಯೂ ನಮಗೆ ಸಾಧ್ಯವಾದರೆ ನಾವು ನಿಜವಾಗಿ ಸಂಯಮಿಗಳು. ಹಾಗೆ ಹತೋಟಿಗೆ ತಂದುಕೊಳ್ಳುವ ಪ್ರಯತ್ನವನ್ನೇ ಶಮವೆಂದೂ ದಮವೆಂದೂ, ಯೋಗವೆಂದೂ ವಿರಾಗವೆಂದೂ ಕರೆಯುವರು.

ನಾವು ಬುದ್ಧೀಂದ್ರಿಯಗಳ ವಿಷಯದಲ್ಲಿ ಹೆಚ್ಚು ಎಚ್ಚರವಹಿಸಿ, ಅವನ್ನು ಹತೋಟಿಗೆ ತಂದುಕೊಳ್ಳುವುದು ಸಾಧ್ಯವಾದರೆ, ಕರ್ಮೇಂದ್ರಿಯಗಳ ಹತೋಟಿ ನಮಗೆ ಕಷ್ಟವಾಗದು. "ಜಿಂಕೆ ಶಬ್ದವೊಂದರ, ಆನೆ ಸ್ಪರ್ಶವೊಂದರ, ದೀಪದ ಹುಳು ರೂಪವೊಂದರ, ದುಂಬಿ ರಸವೊಂದರ ಹಾಗೂ ಮೀನು ಗಂಧವೊಂದರ ವ್ಯಾಮೋಹಕ್ಕೆ ಸಿಕ್ಕು ಹತವಾಗಿ ಹೋಗುತ್ತವೆ. ಇನ್ನು ಶಬ್ದಾದಿ ಪಂಚೇಂದ್ರಿಯ ವಿಷಯವನ್ನೆಲ್ಲ ಅನುಭವಿಸುವ ಶಕ್ತಿಯಿರುವ ಮನುಷ್ಯ ಇವುಗಳ ಕೋಟಲೆಗೆ ಒಳಗಾಗಿ ಹತವಾಗದೆ ಹೇಗೆ ತಾನೆ ಇರುತ್ತಾನೆ ?"…. ಎಂಬುದಾಗಿ ತಾತ್ಪರ್ಯವುಳ್ಳ ಮಾತೊಂದು 'ಗರುಡಪುರಾಣ'ದಲ್ಲಿ ಬರುತ್ತದೆ.

ಶಬ್ದಾದಿ ವಿಷಯಗಳಲ್ಲಿ ಯಾವುದನ್ನೂ ಬಿಡದೆ ಚೆನ್ನಾಗಿ ಭೋಗಿಸಬೇಕು ಎಂದು ನಮ್ಮ ಮನಸ್ಸು ನಮ್ಮನ್ನು ಹುರಿದುಂಬಿಸುತ್ತದೆ; ಭೋಗಿಸುವುದರಲ್ಲಿ ಸುಖವಿದೆಯೆಂದು ತಿಳಿಯುವಂತೆ ಬುದ್ಧಿಗೆ ಮಾಯಾಜಾಲ ಕವಿಯಿಸುತ್ತದೆ. ಇಂಥ ವೇಳೆಯಲ್ಲೇ ಭೋಗದ ಅತಿಯಿಂದುಂಟಾಗುವ ದುಷ್ಪರಿಣಾಮಗಳನ್ನು ನಮಗೆ ಮನವರಿಕೆ ಮಾಡಿ, ಸಂಯಮ ನಮ್ಮನ್ನು ಕಾಯಬೇಕಾಗಿರುತ್ತದೆ.

ಜಿಹ್ವಾ ಸುಖಕ್ಕೆ ದೇಹಧಾರಣೆಗೆ ನಾವು ತಿನ್ನಬೇಕಾದ್ದು ತಿನ್ನಬೇಕು, ನಿಜ. ಆದರೆ ಅತಿಯಾದ ಜಿಹ್ವಾ ಚಾಪಲ್ಯಕ್ಕೆ, ದೇಹವನ್ನು ಕೊಬ್ಬಿಸುವುದಕ್ಕೆ ಸಿಕ್ಕಿದ್ದನ್ನೆಲ್ಲಾ ತಿನ್ನುವುದು ಸರಿಯಲ್ಲ ತಾನೇ. ಅತಿಯಾದ ಚಾಪಲ್ಯದಿಂದ ಹೊಟ್ಟೆ ಕೆಡುತ್ತದೆ; ರೋಗ ಹುಟ್ಟುತ್ತದೆ; ದೇಹ ಕೊಬ್ಬಿಸಿದರೆ, ಹೊಟ್ಟೆಪಾಡಿನ ಕೋಟಲೆ, ಹಾಹಾಕಾರ ಹೆಚ್ಚುತ್ತದೆ; ಸಂಯಮದ ಕಡಿವಾಣ ಕಿತ್ತು ಹೋಗಿ, ಧೂಮಪಾನ ಮದ್ಯಪಾನಗಳ ಚಟ ಒಮ್ಮೆ ಅಂಟಿಕೊಂಡಿತೆಂದರೆ, ಮುಂದೆ ಅದು ಬೆಳೆಯುತ್ತಲೇ ಹೋಗುವುದಲ್ಲದೆ ತಗ್ಗುವುದು ಕಷ್ಟ. ಈ ಕಷ್ಟ ವೇದನೆಯು ಆ ಸುಳಿಯೊಳಗೆ ಸಿಕ್ಕಿಕೊಂಡವರಿಗೇ ಗೊತ್ತು. ಧೂಮಪಾನಿಗಳು ಮದ್ಯಪಾನಿಗಳೂ ಅಲ್ಲದವರ ಸಂಯಮವನ್ನು ಅಸಾಮಾಜಿಕವೆಂದೋ ಅನಾಗರಿಕವೆಂದೋ ಆಡಿಕೊಳ್ಳುವವರೂ, ಅಪಹಾಸ್ಯ ಮಾಡುವವರೂ ಬೇಕಾದ ಹಾಗೆ ಇದ್ದಾರೆ; ಅಲ್ಲದೆ ಅನೇಕರಿಗೆ ಆಡಬಾರದುದನ್ನು ಆಡುವುದು, ನೋಡಬಾರದುದನ್ನು ನೋಡುವುದು, ಮಾಡಬಾರದುದನ್ನು ಮಾಡುವುದು ಎಂದರೆ, ಅದು ಅವರಿಗೆ ನಾಗರಿಕತೆಯ ಹಿರಿಮೆ, ಹೆಮ್ಮೆಯ ಸಂಕೇತ. ಇಂಥವರ ಬಗ್ಗೆ ಕನಿಕರಪಡಬೇಕು ಅಷ್ಟೆ.

ಸಂಯಮದಲ್ಲಿ ಸುಖವಿದೆ. ಹಸಿದು ಉಣ್ಣುವವ ಸಂಯಮಿ; ಬ್ರಹ್ಮಚರ್ಯ, ಮಿತಭೋಗಗಳ ಪ್ರಯೋಜನ ತಿಳಿದ ಭೋಗಿಯೂ ಸಂಯಮಿಯೇ. ಹೊಟ್ಟೆಬಾಕನೂ ಲಂಪಟನೂ ಪಡುವ ಸುಖಕ್ಕಿಂತ ಈತ ಹೆಚ್ಚು ಸುಖವನ್ನು ಪಡೆಯಲು ಶಕ್ತ. “ಅತಿ ಸರ್ವತ್ರ ವರ್ಜಯೇತ್”, “ಮಿತಿಯರಿದು ನೆಗಳ್ದ ದೇವರ್ಕಳೊಸೆವವರ್” ಇವು ಸಂಯಮಿಯ ಧ್ಯೇಯ ವಾಕ್ಯಗಳು. ಈ ವಾಕ್ಯಗಳ ಆಶಯವನ್ನು ಪೂರ್ತಿಯಾಗಿ ಮನನ ಮಾಡದಲ್ಲದೆ, ನಮ್ಮ ಬದುಕಿನಲ್ಲಿ ಸುಖ ಲಭ್ಯವಿಲ್ಲ. ವ್ಯವಹಾರದಲ್ಲಿ ಕೌಶಲ ಸಾಧ್ಯವಿಲ್ಲ.

೨ ಒಂದೆ ಸತ್ತ್ವ

ಲೋಕವನ್ನು ಸೃಷ್ಟಿಸಿರುವ, ಅದನ್ನು ನಿಯಂತ್ರಿಸುತ್ತಿರುವ ಒಂದು ಅಲೌಕಿಕ ಶಕ್ತಿ ಇದೆ ಎಂದೂ ಆ ಶಕ್ತಿಯ ಸ್ವರೂಪವನ್ನು ಪ್ರಭಾವವನ್ನೂ ತಿಳಿಯಲು ಪ್ರಯತ್ನಿಸುವುದೇ ನಮ್ಮ ಬದುಕಿನ ಗುರಿಯೆಂದೂ ಹೇಳುವವರಿದ್ದಾರೆ; ಆ ಶಕ್ತಿಗೆ ಬ್ರಹ್ಮ, ಸತ್ಯ, ಪುರುಷ, ದೇವರು, ಪರಮಾತ್ಮ ಎಂದು ಬಗೆ ಬಗೆಯಾಗಿ ಹೆಸರು ಕೊಟ್ಟು, ಬದುಕಿನ ಹುಟ್ಟು-ಸಾವು, ಕಷ್ಟ-ಕಾರ್ಪಣ್ಯಗಳಲ್ಲಿ ಅದರ ಪಾತ್ರವನ್ನು ತಿಳಿಯುವ ಪ್ರಯತ್ನಗಳ ಸಮುಚ್ಚಯವೇ ವಿದ್ಯೆ ಎಂಬುದಾಗಿ ತಿಳಿದವರೂ ಇದ್ದಾರೆ. ಈ ವಿದ್ಯೆಯ

ಸಾಧನೆಯನ್ನು ತಮತಮಗೆ ತೋರಿದ ರೀತಿ ನೀತಿಗಳಲ್ಲಿ ನಡೆಸಿದವರು ಇತರರಿಗೆ ಮಾರ್ಗ ದರ್ಶಕರೆನ್ನಿಸಿ, ಅವರ ಮತಿಯ ಚಿಂತನೆಗಳೇ ಮತಗಳಾಗಿ, ಹಿಡಿದ ದಾರಿಗಳೇ ಪಂಥ ಗಳಾಗಿ, ಇಂದು ಲೋಕ ಸಮಸ್ತವೂ ನೂರು ಮತ ಸಾವಿರ ಪಂಥಗಳ ಹೆಬ್ಬೀಡಾಗಿದೆ ; ಅಜ್ಞಾನಿಗಳ, ಅರ್ಧಜ್ಞಾನಿಗಳ ಗ್ರಹಿಕೆಗಳಿಂದ ಗೊಂದಲದ ಗೊಂಡಾರಣ್ಯವಾಗಿ ಪರಿಣ ಮಿಸಿದೆ. ಸೀಳುಗಳು ಹೆಚ್ಚಿದಷ್ಟೂ ಗೋಜಲೂ ಹೆಚ್ಚುವುದು ಸಹಜವೇ. ಬೇರೆಯ ಮತ, ಪಂಥಗಳಿಗಿಂತ ತನ್ನ ಮತ, ಪಂಥಗಳೇ ಸರಿಯೆಂದು ಹೆಚ್ಚೆಂದೂ ವಾದಿಸುವವರ, ಹೋರಾಡುವವರ ವಿಜೃಂಭಣೆ ಬೆಳೆದು, ಲೋಕದ ಸಾಂಸ್ಕೃತಿಕ ಸಾಮಾಜಿಕ ಜೀವನ ಗಳಲ್ಲಿ ಪ್ರತ್ಯೇಕತೆ ವಿಷಮತೆಗಳ ಗೋಡೆಗಳು ಮೇಲೇಳುತ್ತಿವೆ. ಪರಸ್ಪರ ಸಂಘರ್ಷ ತಲೆ ಗಳನ್ನು ಹಾರಿಸುತ್ತಿವೆ ; ಡಾಂಭಿಕತೆ ಮೇಲು ಕೀಳರಿಮೆಗಳನ್ನು ಬಿತ್ತುತ್ತಿದೆ.

ಈ ಅವನತಿಯಿಂದ ಲೋಕ ಜೀವನ ಪಾರಾಗುವುದು ಹೇಗೆ ? ಇದರ ಉತ್ತರ ವನ್ನು ಉಪನಿಷತ್ತುಗಳ ಕಾಲದಿಂದ ತೊಡಗಿ ಗಾಂಧೀಜಿಯವರ ನಮ್ಮ ಕಾಲದವರೆಗೆ ದೊಡ್ಡವರು ಸ್ಪಷ್ಟವಾಗಿ ಹೇಳಿದ್ದಾರೆ. ಮತ ಸಾಮರಸ್ಯ, ಧರ್ಮಸಹಿಷ್ಣುತೆಗಳೇ ಆ ಉತ್ತರ. ದೀರ್ಘ ತಮಸ್ ಎಂಬ ಋಷಿ "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂದು ಹಿಂದೆಯೇ ಘೋಷಿಸಿದ. "ವಿಪ್ರರು ಹಲವು ಎಂದು ಹೇಳುವುದೆಲ್ಲ ಪರಿಣಾಮ ದಲ್ಲಿ ಒಂದೇ" ಎಂಬುದಾಗಿ ನುಡಿದ ಆ ಕಾಲದಲ್ಲಿ ಮತಭ್ರಾಂತಿ ಎಂಬುದು ಕವಿದಿರಲಿಲ್ಲ. ಅದರೆ ಆ ಭ್ರಾಂತಿಯ ಕಾರ್ಮೋಡಗಳು ಒಟ್ಟೈಸಿದಾಗ, ಅವನ್ನು ಚೆದುರಿಸಲು ಹೂಡಿದ ಪ್ರಯತ್ನಗಳು ಹಲವಾರು.

"ಆಕಾಶದಿಂದ ಬಿದ್ದ ನೀರು ಸಾಗರವನ್ನು ಹೇಗೆ ಹೋಗಿ ಸೇರುತ್ತದೋ, ಹಾಗೆಯೇ ಯಾವುದೇ ದೇವರಿಗೆ ಮಾಡಿದ ನಮಸ್ಕಾರವೂ ಕೇಶವನಿಗೇ ಹೋಗಿ ಮುಟ್ಟು ತ್ತದೆ"– ಎಂಬ ದಿವ್ಯೋಕ್ತಿ, ದೈನಂದಿನ ಸಂಧ್ಯಾವಂದನೆಯ ಮಂತ್ರ ಭಾಗವಾಯಿತು. "ಶಿವನು ವಿಷ್ಣುರೂಪನು, ವಿಷ್ಣುವು ಶಿವರೂಪನು ; ವಿಷ್ಣು ಶಿವಮಯನಾದವನು ಶಿವ ವಿಷ್ಣುವಿನ ಹೃದಯ" ಎಂಬ ಶಾಸನ ಶ್ಲೋಕ ಹರಿಹರಾಭೇದವನ್ನು ಸಾರುತ್ತದೆ. ಇದನ್ನೇ ಬೇಲೂರು ಶಾಸನವೊಂದು ಪ್ರಾರ್ಥನಾಶ್ಲೋಕದಲ್ಲಿ "ನಮೋ ನಿತ್ಯಂ ಕೇಶ ವಾಯ ಶಿವಾಯ ಚ" ಎನ್ನುತ್ತದೆ. ಬೇಲೂರಿನದೇ ಇನ್ನೊಂದು ಶಾಸನದ "ಯಂ ಶೈವಾಸ್ಸಮುಪಾಸತೇ ಶಿವ ಇತಿ...." ಎಂಬ ಸುಪರಿಚಿತವಾದ ಪದ್ಯದಲ್ಲಿ ವೈದಿಕರ ಪೂಜಾರ್ಹವಾದ ಸತ್ತ್ವವೂ ವೈದಿಕೇತರ ಪಂಥಗಳ ಪೂಜಾರ್ಹವಾದ ಸತ್ತ್ವವೂ ಸಮಾನವಾಗಿ ಪೂಜ್ಯಗಳೆಂಬ ಉದಾತ್ತ ಭಾವನೆ ಪ್ರಕಟಗೊಂಡಿದೆ. "ಶೈವರು ಶಿವ ನೆಂದೂ ವೇದಾಂತಿಗಳು ಬ್ರಹ್ಮನೆಂದೂ ಬೌದ್ಧರು ಬುದ್ಧನೆಂದೂ ನೈಯಾಯಿಕರು ಕರ್ತನೆಂದೂ ಜೈನರು ಅರ್ಹಂತನೆಂದೂ ಮೀಮಾಂಸಕರು ಕರ್ಮವೆಂದೂ ಯಾವನನ್ನು ಉಪಾಸಿಸುವರೋ ಆ ಕೇಶವನು ನಮ್ಮ ಇಷ್ಟಾರ್ಥಗಳನ್ನು ಪೂರೈಸಲಿ" ಎಂಬ ಮೇಲಾದ ಹಾರೈಕೆಯನ್ನು ಇಲ್ಲಿ ವ್ಯಕ್ತ ಮಾಡಿದೆ. ಇದೇ ಆಶಯವನ್ನು ಬೊಪ್ಪಣ ಪಂಡಿತನೆಂಬ ಕನ್ನಡ ಕವಿ ತನ್ನ 'ನಿರ್ವಾಣ ಲಕ್ಷ್ಮೀಪತಿ ನಕ್ಷತ್ರಮಾಲಿಕೆ'ಯೆಂಬ ಚಿಕ್ಕ

ಕೃತಿಯಲ್ಲಿ ಪರಮೇಶ ಪರಮೇಷ್ಠಿ ಶಂಭು ಅಭವ ಬ್ರಹ್ಮ ಶಿವ ಶಂಕರ ಸ್ಮರಸಂಹಾರಕ ಅಚ್ಯುತ ಪುರಹರ ಬುದ್ಧ ಜಿನ ವಿಷ್ಣು ವೇದರಹಸ್ಯ ಪ್ರಭು ಶುದ್ಧ ಎಂಬ ನಾಮಾವಳಿಯೆಲ್ಲ ಒಂದೇ ಪರಮಾರ್ಥವನ್ನು ತಿಳಿಸುತ್ತವೆ ಎಂದು ವರ್ಣಿಸಿದ್ದಾನೆ. "ನಾಮ ರೂಪಗಳನ್ನು ಕಳೆದುಕೊಂಡು ಈ ಜಗತ್ತು ಯಾವುದರಲ್ಲಿ ಅಡಗುತ್ತದೆಯೋ ಅದನ್ನು ಕೆಲವರು ಪ್ರಕೃತಿಯೆಂದೂ ಕೆಲವರು ಮಾಯೆಯೆಂದೂ ಕೆಲವರು ಅಣುವೆಂದೂ ಕರೆಯುತ್ತಾರೆ" ಎಂಬ 'ಬೃಹದ್ ವಾಸಿಷ್ಠ'ದ ಮಾತಿನಲ್ಲಿ ದ್ಯೋತನವಾಗುವುದೂ ಇದೇ ಪರಮಾರ್ಥವೇ.

ತೆಲುಗಿನ ಸಂತಕವಿ ವೇಮನ ಹೇಳುವುದು ಹೀಗೆ: "ಹಸುಗಳು ವಿವಿಧ ಬಣ್ಣದವು, ಆದರೆ ಹಾಲೆಲ್ಲಾ ಒಂದೇ. ಹೂಗಳು ವಿವಿಧ ಬಣ್ಣದವು, ಆದರೆ ನಡೆಸುವ ಅರ್ಚನೆ ಒಂದೇ. ಮತಗಳು ಭಿನ್ನವಾದವು, ಆದರೆ ದೇವರು ಒಬ್ಬನೇ". ಈ ಮತ ಸಾಮರಸ್ಯದ ಗುಟ್ಟು ಅಶೋಕನಿಗೆ ತಿಳಿದಿದ್ದುದರಿಂದಲೇ ಅವನು ತನ್ನ ೧೨ನೆಯ ಶಾಸನದಲ್ಲಿ "ಸರ್ವಪ್ರಕಾರಗಳಲ್ಲೂ ಪರಮತದವರನ್ನು ಗೌರವಿಸಲೇಬೇಕು; ಹೀಗೆ ನಡೆದುಕೊಂಡರೆ ತನ್ನ ಮತ ವರ್ಧಿಸುತ್ತದೆ" ಎಂದು ಮುಂತಾಗಿ ಸಮನ್ವಯವನ್ನು ಸಾರಿದ್ದಾನೆ ಎನ್ನಬೇಕು. "ಅವರವರ ದರುಶನಕೆ | ಅವರವರ ವೇಷದಲಿ | ಅವರವರಿಗೆಲ್ಲ ಗುರು ನೀನೊಬ್ಬನೆ" ಎಂದು ಶಿವನನ್ನು ಸ್ತುತಿಸಿದ ಮುಪ್ಪಿನ ಷಡಕ್ಷರಿಗೆ ಸಹ ಈ ಗುಟ್ಟು ತಿಳಿದಿತ್ತು. "ಹೋರಾಟ ಇಕ್ಕಿಸಲು | ಬೇರಾದೆಯಲ್ಲದೆಯೆ | ಬೇರುಂಟೆ ಜಗದೊಳಗೆ ಎಲೆ ದೇವನೆ ||" ಎಂದೂ ಆತ ಹೇಳುತ್ತಾನೆ. ಈ ತಾನೇ ಇಕ್ಕಿಸಿದ ಹೋರಾಟವನ್ನು ಆ ಶಿವ ಎಂದು ಉಪಸಂಹರಿಸುವನೋ, ಬಲ್ಲವರು ಯಾರು? "ಒಂದೆ ಸತ್ವಕ್ಕೆ ಹಲವು ಹೆಸರು ಬಲ್ಲವರ ಬಾಯಿಯಿಂದ" ಎಂದೇ ಇಂದಿನ ಕವಿವಾಣಿಯೂ; ಆದರೆ ಈ ನಿಜ ನಮ್ಮ ಹೃದಯಕ್ಕೆ ಮುಟ್ಟುವುದು ಎಂದು?

೩ ಲೇಖನಿಯ ಬಲ

ಲೇಖನಿಗೆ ಏನು ಬಲವಿದೆ ಎನ್ನುವುದು "ಲೇಖನಿ ಖಡ್ಗಕ್ಕಿಂತ ಬಲಶಾಲಿಯಾದುದು" ಎನ್ನುವ ಒಂದು ಇಂಗ್ಲಿಷ್ ಗಾದೆಮಾತಿನಿಂದ ನಮಗೆಲ್ಲ ಪರಿಚಿತವೇ ಇದೆ. "ಪೆನ್ನೆತ್ತಿ ಒಂದು ಗೆರೆ ಗೀಚಿದರೆ ಆಯಿತು, ಅಲ್ಲಿಗೆ ಹಣೆಬರೆಹ ತೀರಿದ ಹಾಗೆಯೇ" ಎಂದು ಕಛೇರಿಯ ಮಾತುಗಳಲ್ಲಿ ಆಡುವುದನ್ನು ನಾವು ಕೇಳಿದ್ದೇವೆ. ಹಲವು ವರ್ಷಗಳ ಹಿಂದೆ, ಬಹುಶಃ ಮೈಸೂರಿನಿಂದ ಎಂದು ಕಾಣುತ್ತದೆ, 'ಲೇಖಕ' ಎಂಬ ಒಂದು ಪತ್ರಿಕೆ ಪ್ರಕಟವಾಗುತ್ತಿತ್ತು. ಅದರ ಮುಖಪುಟದಲ್ಲಿ ಲೇಖನಿಯ ಚಿತ್ರ ಎದ್ದು ತೋರುವಂತೆ ಪ್ರತಿ ಸಂಚಿಕೆಯಲ್ಲೂ ಅಚ್ಚಾಗುತ್ತಿತ್ತು. ಲೇಖನಿಯೇ ಲೇಖಕನ ಬಲ, ಸರ್ವಸ್ವ ಎಂದು ಸಾರುವುದೇ ಅದರ ಉದ್ದೇಶವೆಂದು ಅದನ್ನು ನೋಡಿದ ಯಾರಿಗಾದರೂ ಭಾಸವಾಗುತ್ತಿತ್ತು.

ಇದು ಸರಿ. ಆದರೆ ಲೇಖನಿಗಾಗಲಿ, ಅದರಲ್ಲಿ ತುಂಬಿರುವ ಮಸಿಗಾಗಲೀ ತಮ್ಮಷ್ಟಕ್ಕೆ ಯಾವ ಶಕ್ತಿ ಇರುವುದು ಸಾಧ್ಯ? ಲೇಖನಿಯ ಚೂಪು ತುದಿಯಿಂದ ಸಣ್ಣಗೆ ನೋಯುವಂತೆ ಚುಚ್ಚಬಹುದು; ಅದರೊಳಗಿನ ಮಸಿಯಿಂದ ಬಟ್ಟೆಯ ಅಂದ ಗೆಡಿಸಬಹುದು. ಆದರೆ ಇದಕ್ಕೆ ಲೇಖನಿಯ ಬಲ ಎಂದು ಯಾರೂ ಹೇಳುವುದಿಲ್ಲ. ಲೇಖನಿ ಒಂದು ನಿಮಿತ್ತ, ಒಂದು ಉಪಕರಣ; ಅದನ್ನು ಬಳಸಿ ಅಧಿಕಾರಿಯೋ ಸಾಹಿತಿಯೋ ಮತ್ತೊಬ್ಬನೋ ವ್ಯಕ್ತಿಯ ಅಥವಾ ಸಮಾಜದ ಏಳುಬೀಳುಗಳನ್ನು ಸಾಧಿಸಬಹುದು. ಅದು ಸಾಧ್ಯವಾಗುವುದು ಲೇಖನಿಯ ಬಲದಿಂದ ಅಲ್ಲ; ಅದನ್ನು ಬಳಸುವವನ ಅಪೇಕ್ಷೆ, ಆಲೋಚನೆ, ಪ್ರಭಾವ, ಅಧಿಕಾರಗಳ ಬಲದಿಂದ ಎನ್ನುವುದನ್ನೂ ಯಾರೂ ಬಿಡಿಸಿ ಹೇಳಬೇಕಾದುದಿಲ್ಲ.

ನಮ್ಮ ಪ್ರಾಚೀನ ಕನ್ನಡ ಕವಿ ಜನ್ನ ಸುಮಾರು ೭೫೦ ವರ್ಷಗಳ ಹಿಂದೆಯೇ ಲೇಖನಿಯ ಬಲವನ್ನು ಹೀಗೆ ಸಾರಿದ್ದಾನೆ:

ಪರಿಜನಜೀವನಂ ಸಕಲದೇಶಸಮಾಹಿತವೃತ್ತಿ ಭೂತಳೇ
ಶ್ವರಧನವೃದ್ಧಿ ರಾಜಗ್ರಹಕರ್ಮಕಳಾಪಸಮುಚ್ಚಯಂ ನಿರಂ
ತರಮಿವರೊಂದು ಕಂಟಮೊನೆ ಬಾಳ್ಮೊನೆಯಾಗಿರೆ ಸಲ್ವುದೆಂಬಿನಂ
ಕರಣಗಣಾಗ್ರತಸ್ಸರರ ಮಾಳ್ಪ ಮನಕ್ಕೆಸಗಿತ್ತು ಲೀಲೆಯಂ ॥ (೨–೨೪)

ಸಿಂಹಸೇನನೆಂಬ ರಾಜನ ಆಸ್ಥಾನದ ವರ್ಣನೆಯ ಒಂದು ಭಾಗವಾಗಿ ಬರುವ ಈ ಪದ್ಯದಲ್ಲಿ ಪ್ರಧಾನಕರಣಿಕರ ಕೊಂಡಾಟವಿದೆ. ಇವರು ತಮ್ಮ 'ಕಂಟಮೊನೆ ಬಾಳ್ಮೊನೆಯಾಗಿ', ಎಂದರೆ ಲೇಖನಿಯ ಮೊನೆಯೇ ಕತ್ತಿಯ ಮೊನೆಯಾಗಿ, ತಾವೂ ಅಮಾತ್ಯರೋ ಸೇನಾನಿಗಳೋ ಎನ್ನುವಂತೆ ಮೆರೆಯುತ್ತಿದ್ದರಂತೆ! ಪರಿಜನರ ಜೀವನ, ಸಮಸ್ತ ದೇಶದ ಬಗ್ಗಟ್ಟು, ದೊರೆಯ ಭಂಡಾರದ ವೃದ್ಧಿ, ಅರಮನೆಯ ಖರ್ಚು ವೆಚ್ಚಗಳು ಇವೆಲ್ಲ ಆ ಕರಣಿಕರ ಲೇಖನಿಯ ಬಲವನ್ನೇ ಅವಲಂಬಿಸಿದ್ದುವಂತೆ.

ಅಜ್ಞಾತಕವಿಯೊಬ್ಬನ ಪದ್ಯವೊಂದರಲ್ಲಿ, ಶ್ರಮಣ ಎಂದರೆ ಜೈನ ಸಂನ್ಯಾಸಿ ಬಳಪವನ್ನು ಹಿಡಿದರೆ, ಗಾಂಡೀವಿ ಬಿಲ್ಲೇರಿಸಿದರೆ, ಇಂದ್ರ ವಜ್ರಾಯುಧವನ್ನು ಕೈಗೆತ್ತಿಕೊಂಡರೆ, ವಿಷ್ಣು ಚಕ್ರವನ್ನು ತಿರುಗಿಸಿದರೆ, ಭೀಮಸೇನ ಗದೆಯನ್ನು ಧರಿಸಿದರೆ, ಅವರೊಂದಿಗೆ ಯಾರು ತಾನೆ ಹೋರಾಟಕ್ಕೆ ನಿಲ್ಲಬಲ್ಲರು? ಎಂಬ ಅಪೂರ್ವವಾದ ಪ್ರಶ್ನೆಯಿದೆ. ಸಂನ್ಯಾಸಿ ಬಳಪವನ್ನು ಹಿಡಿದು ಹೋರಾಡುವುದು ಎಂದರೇನು? ಬಳಪವೆಂದರೆ ಬರೆಯುವ ಕಡ್ಡಿ ಎಂದು ಮಾತ್ರವೇ ಅಲ್ಲದೆ, ಆಯುಧವಿಶೇಷವೆಂಬ ಅರ್ಥವೂ ಹಿಂದೆ ಇದ್ದುದು ಒಂದು ಸ್ವಾರಸ್ಯಕರ ಸಂಗತಿ. ಜ್ಯೋತಿಷಿಯೊಬ್ಬನು ಪೃಚ್ಛಕನ ಪ್ರಶ್ನೆಗೆ ಉತ್ತರ ಹೇಳಲು, ಕನ್ನಗಳ್ಳನ ಹಾಗೆ ಬಳಪವನ್ನು ಕೈಗೆತ್ತಿಕೊಂಡನೆಂದು ಶಾಂತಿನಾಥನೆಂಬ ಕವಿಯು 'ಸುಕುಮಾರಚರಿತೆ'ಯಲ್ಲಿ ಬರೆದಿದ್ದಾನೆ. ಬಳಪವೆಂದರೆ ಕನ್ನ ಕೊರೆಯಲು ಕಳ್ಳರು ಬಳಸುವ ಸಾಧನವೆಂದು ಪಂಚತಂತ್ರದ ವಿಶ್ವಾಸ ಪ್ರಕರಣದ ಒಂದು ಕಥೆಯಿಂದಲೂ ನಮಗೆ ತಿಳಿಯುವುದು.

ಅಸ್ಸಾಮೀಯ ಅಜ್ಞಾತಕವಿಯೊಬ್ಬನ ಒಂದು ಕವಿತೆಯಲ್ಲಿ, ಲೇಖನಿ ತನ್ನ ಬಗ್ಗೆ ಹೀಗೆ ಹೇಳಿಕೊಂಡಿದೆ : "ನಾನು ವಿಶ್ವದ ಚಕ್ರಾಧಿಪತಿ; ಯಾರು ನನ್ನನ್ನು ಕೈಮುಟ್ಟಿ ಹಿಡಿಯುವರೋ ಅವರಿಗೆ ನಾನು ಭೋಗಭಾಗ್ಯಗಳನ್ನು ತಂದುಕೊಡುತ್ತೇನೆ; ಒಂದು ಪಕ್ಷ ಆತ ಅದೃಷ್ಟಶಾಲಿ ಅಲ್ಲವಾದರೆ, ಅಂಥವನು ನನ್ನ ಮೂಲಕ ಸಂಪತ್ತಿನ ಸಾಗರದ ದಂಡೆಯನ್ನು ಒಂದು ಸಲವಾದರೂ ಹೋಗಿ ಮುಟ್ಟುವಂತೆ ಮಾಡುತ್ತೇನೆ." ಲೇಖನಿಯ ಬಲದಿಂದ ದರಿದ್ರನಾದವನು ಸಿರಿವಂತನಾಗಬಹುದು ಎನ್ನುವುದು ಈ ಪದ್ಯವನ್ನು ಹೇಳಿದವನ ಅಭಿಪ್ರಾಯವಿದ್ದೀತು. ಲೇಖನಿಯ ಬಲವಿರುವುದು, ಅದನ್ನು ಬಳಸುವಾತನ ವಿದ್ಯೆಯಲ್ಲಿ, ವಿವೇಕದಲ್ಲಿ ಎನ್ನುವುದು ಈ ಕವಿತೆಯ ಸಾಲುಗಳಲ್ಲಿ ಸುಪ್ತವಾಗಿ ಹುದುಗಿದೆ.

ಇಂಗ್ಲಿಷ್ ಕವಿ ಪೋಪ್, ತನ್ನದೋ ತಾಯಿತಂದೆಗಳದೋ ಅಜ್ಞಾತವಾದೊಂದು ಕರ್ಮದ ಫಲವಾಗಿ ತಾನು ಮಸಿಯ ಬುಡ್ಡಿಯಲ್ಲಿ ಮುಳುಗುವಂತಾದುದಕ್ಕೆ ಕೊರಗುತ್ತ ಬಾಲ್ಯದಲ್ಲಿಯೇ ತನಗೆ ಲಭ್ಯವಾದ ಕಾವ್ಯಶಕ್ತಿಗೆ ಅಚ್ಚರಿಪಟ್ಟಿದ್ದಾನೆ; ಅವನಿಗೆ ವಿಷಾದವೂ ಇದೆ.

ಲೇಖನಿಯ ಬಲವೆಂದರೆ ಬರೆಯುವಾತನ ವಿದ್ಯೆ ವಿವೇಕ ಬುದ್ಧಿಗಳ ಬಲವೇ. ಈ ಸಣ್ಣ, ಆದರೆ ಸಮರ್ಥವಾದ ಉಪಕರಣವನ್ನು ಬಳಸಿ ಮಧುರ ಭಾವನೆಗಳನ್ನು ಹೂವಿನಂತೆ ಅರಳಿಸಬಹುದು, ಕಠೋರ ಶಾಸನಗಳನ್ನು ಕಲ್ಲಿನಂತೆ ಬೀಸಿ ಎಸೆಯಬಹುದು. ಆಹ್ವಾನಿಸಬಹುದು; ಬಹಿಷ್ಕರಿಸಲೂಬಹುದು. ಜಾಗೃತಿಯನ್ನು ಉಂಟುಮಾಡಬಹುದು; ಪತನಕ್ಕೆ ತಳ್ಳಲೂಬಹುದು. ಲೇಖನಿಯ ಬಲದ ಸದುಪಯೋಗವಾದರೆ ಮಾತ್ರ ಮಾನವ ಪ್ರಗತಿ ಸಾಧ್ಯ.

೪ ವಿಶ್ವೇಶ್ವರಯ್ಯನವರು

ಇಂದಿಗೆ ೧೨೩ ವರ್ಷಗಳ ಹಿಂದೆ ಕರ್ನಾಟಕದ ಸುಪುತ್ರರಾಗಿ ಜನಿಸಿದ ಸರ್. ಎಂ. ವಿಶ್ವೇಶ್ವರಯ್ಯನವರು, ನಮ್ಮ ದೇಶದ ಹಲವಾರು ಸಾಮಾಜಿಕ ಹಿತದ ಮಹಾಕಾರ್ಯಗಳನ್ನು ಕೈಗೂಡಿಸಿ, ತಮ್ಮ ಜೀವಿತಕಾಲದಲ್ಲಿಯೇ ಒಬ್ಬ ಪುರಾಣಪುರುಷರಾಗಿ ಖ್ಯಾತರಾದವರು. ಪ್ರಾತಃಸ್ಮರಣೀಯರಾದ ಅವರನ್ನೂ ಅವರ ಸಾಧನೆಗಳನ್ನೂ ನೆನೆಯುವುದರಲ್ಲಿ ನಮ್ಮ ಶ್ರೇಯಸ್ಸಿದೆ. ಇಂಜನಿಯರರಾಗಿ, ಆಡಳಿತಗಾರರಾಗಿ, ಶಿಕ್ಷಣತಜ್ಞರಾಗಿ ಹಲವಾರು ಜವಾಬ್ದಾರಿಗಳನ್ನು ಹೊತ್ತು ಅವರು ಸಾಧಿಸಿರುವ ದೇಶಹಿತಕಾರ್ಯಗಳು ಈಗಾಗಲೇ ನಾಡಿಗೆ ಸುಪರಿಚಿತವಾಗಿವೆ. ಇದರಿಂದಾಗಿ 'ಭಾಗ್ಯಶಿಲ್ಪಿ' ಎಂಬ ಕೊಂಡಾಟಕ್ಕೆ, 'ಭಾರತರತ್ನ' ಎಂಬ ಪ್ರಶಸ್ತಿಗೆ ಅವರು ನ್ಯಾಯವಾಗಿಯೇ ಯೋಗ್ಯರಾಗಿದ್ದಾರೆ.

ವಿಶ್ವೇಶ್ವರಯ್ಯನವರ ಕಾಲದಲ್ಲಿಯೇ ಬದುಕಿ, ಸರ್ಕಾರದ ಸೇವೆಯಲ್ಲಿದ್ದು ಕೊಂಡೇ ಸಾಮಾಜಿಕ ಅಭ್ಯುದಯದ ಅನೇಕ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ ಇನ್ನೊಬ್ಬರು ಮಹನೀಯರು ರಾವ್ ಬಹದ್ದೂರ್ ಎಂ. ಶಾಮರಾಯರು. ಇವರು ಆಗ್ಗೆ

ವಿದ್ಯಾಧಿಕಾರಿಗಳಾಗಿದ್ದರು. ಪ್ರಾಂತದ ವಿದ್ಯಾಪ್ರಗತಿಯ ಬಗ್ಗೆ ಇವರಿಬ್ಬರ ನಡುವೆ ನಡೆದ ಪತ್ರವ್ಯವಹಾರ ಇನ್ನೂ ಪ್ರಕಟವಾಗಬೇಕಾಗಿದೆ. ಈಗ್ಗೆ ಕೆಲವು ದಿನಗಳ ಹಿಂದೆ ನನಗೆ ನೋಡಲು ದೊರೆತ ವಿಶ್ವೇಶ್ವರಯ್ಯನವರ ಕೆಲವು ವೈಯಕ್ತಿಕ ಪತ್ರಗಳಿಂದ ಕೆಲವಂಶಗಳ ಸಾರವನ್ನಷ್ಟೇ ಇಲ್ಲಿ ಸೂಚಿಸುತ್ತೇನೆ

ಶಾಮರಾಯರು ಮೈಸೂರು ಪ್ರಾಂತದಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರ್ ಆಗಿ ಮಾಡಿದ ಸಾಧನೆಗಳು ವಿಶ್ವೇಶ್ವರಯ್ಯನವರಿಗೆ ತುಂಬ ಸಮಾಧಾನ ಕೊಟ್ಟಿದ್ದುವು. ಅದನ್ನು ನೆನೆಯುತ್ತ ಅವರು ವಿದ್ಯಾಧಿಕಾರಿಗಳಾದಾಗ, "ಅಂತಹುದೇ ಸೊಗಸಾದ ಸೇವಾಕಾರ್ಯ ನೀವು ಮಾಡಿ ತೋರಿಸುವುದನ್ನು ನಾನು ನೋಡಲು ಅಪೇಕ್ಷಿಸುತ್ತೇನೆ" ಎಂದು ಡಿಸೆಂಬರ್ ೧೯೧೨ರ ಒಂದು ಪತ್ರದಲ್ಲಿ ಅವರಿಗೆ ಬರೆದರು. ಅಲ್ಲದೆ ಭಾರತ ಸರ್ಕಾರದ ವಿದ್ಯಾ ಇಲಾಖೆಯ ಕಾರ್ಯದರ್ಶಿ ಎಚ್. ಶಾರ್ಪ್ ಮತ್ತು ವಿದೇಶದ ಶಿಕ್ಷಣತಜ್ಞರಾದ ಸಿ. ಎಮ್. ರಾಕ್ಸ್‌ಬಿ ಹಾಗೂ ಕ್ಲೇಟನ್ ಸೆಡ್ಜ್‌ವಿಕ್ ಕೂಪರ್ ಎಂಬವರು ಬೇರೆ ಬೇರೆ ಸಂದರ್ಭಗಳಲ್ಲಿ ಬೆಂಗಳೂರಿಗೆ ಬಂದಾಗ್ಗೆ, ಅವರನ್ನು ಭೇಟಿ ಮಾಡಿ, ವಿದ್ಯಾಭ್ಯಾಸ ವಿಷಯದಲ್ಲಿ ಅವರೊಂದಿಗೆ ಸಮಾಲೋಚಿಸಬೇಕೆಂದು ಸೂಚಿಸಿ ಅನಂತರದ ಕೆಲವೇ ದಿನಗಳಲ್ಲಿ ಅವರು ೨–೩ ಪತ್ರಗಳನ್ನು ಶಾಮರಾಯರಿಗೆ ಬರೆದರು.

ಮೈಸೂರು ರಾಜ್ಯದಲ್ಲಿ ವಿದ್ಯಾಭ್ಯಾಸದ ಪ್ರಗತಿಗಾಗಿ ಎಂದು, ಜನವರಿ ೧೯೧೩ರಲ್ಲಿ ಬರೆದ ಒಂದು ಪತ್ರದಲ್ಲಿ ತಾವು ೧೦–೧೨ ಮಂದಿ ಗಣ್ಯರ ಸಭೆಯನ್ನು ಸೇರಿಸಲಿದ್ದುದನ್ನು ಸೂಚಿಸಿ, ಪತ್ರದ ಹಿಂಬದಿಯಲ್ಲಿ ಎಚ್. ವಿ. ನಂಜುಂಡಯ್ಯ, ಕಾಂತರಾಜ ಅರಸು, ಸುಬ್ರಹ್ಮಣ್ಯ ಅಯ್ಯರ್, ವೈಸ್, ಕೆ. ಎಚ್. ರಾಮಯ್ಯ, ಪುಟ್ಟಣ್ಣಚೆಟ್ಟಿ, ಎಂ. ಶಾಮರಾವ್ ಮೊದಲಾದ ೧೬ ಮಂದಿ ಪ್ರಸಿದ್ಧರ ಹೆಸರನ್ನು ಸ್ವಹಸ್ತದಿಂದ ಬರೆದಿದ್ದಾರೆ.

ಲಾರ್ಡ್ ಹಾರ್ಡೀನ್ ಎಂಬವರ ಭಾಷಣದ ಬಗ್ಗೆ ವಿಶ್ವೇಶ್ವರಯ್ಯನವರ ಗಮನವನ್ನು ಶಾಮರಾಯರು ಸೆಳೆದಾಗ, ವಿಶ್ವೇಶ್ವರಯ್ಯನವರು ಫೆಬ್ರವರಿ ೧೯೧೩ರ ಒಂದು ಪತ್ರದಲ್ಲಿ, ಆ ಭಾಷಣದ ಕಟಿಂಗನ್ನು ಆಗಲೇ ತಮ್ಮ ಫೈಲಿನಲ್ಲಿ ತಾವು ಸೇರಿಸಿಕೊಂಡಿರುವುದಾಗಿಯೂ ದೊರೆಗಳ ಮಾರ್ಗದರ್ಶನದಲ್ಲಿ ವೃತ್ತಿಪರ ವಿದ್ಯೆಯನ್ನು ಅಭಿವೃದ್ಧಿ ಪಡಿಸುವುದು ತಮ್ಮ ಬಾಧ್ಯತೆಯಾಗಿದೆಯೆಂದೂ ಅದಕ್ಕಾಗಿ ವಿಶದವಾಗಿ ಚರ್ಚಿಸಿ ಕಾರ್ಯಕ್ರಮದ ಚೌಕಟ್ಟು ರೂಪಿಸಬೇಕಾಗಿದೆಯೆಂದೂ ಬರೆದಿರುವುದು ಕಾಣುತ್ತದೆ.

ಮೆಕ್ಯಾನಿಕಲ್ ಇಂಜನಿಯರಿಂಗ್ ಸ್ಕೂಲ್, ಕಮರ್ಷಿಯಲ್ ಸ್ಕೂಲ್ ಬಗ್ಗೆ ಎರಡು ಯೋಜನೆಗಳನ್ನು ರೂಪಿಸಲು ಶಾಮರಾಯರನ್ನು ವಿಶ್ವೇಶ್ವರಯ್ಯನವರು ಬೆಳಿಗ್ಗೆ ೮ ಗಂಟೆಗೇ ತಮ್ಮ ಕಛೇರಿಗೆ ಆಹ್ವಾನಿಸಿ ಮಾರ್ಚ್ ೧೯೧೩ ರಲ್ಲಿ ಒಂದು ಪತ್ರ ಬರೆದಿದ್ದಾರೆ. ಅನಂತರ ಮೂರು ತಿಂಗಳ ಮೇಲೆ ಬರೆದ ಇನ್ನೊಂದು ಪತ್ರದಲ್ಲಿ, ಆರಂಭವಾಗಲಿದ್ದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮುಂಬಯಿ ವಿಶ್ವವಿದ್ಯಾನಿಲಯದ ಮನ್ನಣೆ ದೊರಕಿಸಿಕೊಳ್ಳುವ ವಿಧಾನ ಕುರಿತು ಒಂದು ಟಿಪ್ಪಣಿ ಸಿದ್ಧಮಾಡುವಂತೆ ಶಾಮರಾಯ

ರಿಗೆ ತಿಳಿಸಿ, ಆ ವಿಶ್ವವಿದ್ಯಾನಿಲಯದ ಪ್ರತಿನಿಧಿ ಸಿ. ಎಚ್. ಸೆಟಲ್ವಾಡ್ ಎಂಬವರು ಬರೆದ ಪತ್ರವನ್ನು ಅವರ ಅವಗಾಹನೆಗೆ ಕಳಿಸಿಕೊಟ್ಟರೆಂದು ತಿಳಿಯುತ್ತದೆ.

ಜಪಾನಿಯರ ಪ್ರವಾಸಕ್ಕೆ ತಾವು ತೆರಳಿದ್ದಾಗ, ಅಲ್ಲಿಯ ವಿದ್ಯಾಭ್ಯಾಸದ ಬಗ್ಗೆ ತಾವು ಮಾಡಿಕೊಂಡಿದ್ದ ಟಿಪ್ಪಣಿಗಳ ಪುಸ್ತಕವನ್ನು ಮೊದಲನೆಯ ಮಹಾಯುದ್ಧದ ಸಂದರ್ಭದಲ್ಲಿ ಯಾವುದಕ್ಕಾಗಿಯೋ ಗಮನಿಸುತ್ತಿದ್ದಾಗ, ಅಂತಹದೊಂದು ಪುಸ್ತಕವನ್ನು ಮೈಸೂರು ರಾಜ್ಯದ ಬಗ್ಗೆಯೂ ಬರೆಯಬಹುದೆಂದು ಒಮ್ಮೆಯೂ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಯಾದ ವರ್ಷ, ಎಂದರೆ ೧೯೧೬ ರಲ್ಲಿ ಮೊದಲ ಉಪಕುಲಪತಿ ಎಚ್.ವಿ. ನಂಜುಂಡಯ್ಯನವರಿಗೆ ತಕ್ಕ ಸಹಾಯ ಸಹಕಾರಗಳನ್ನು ಕೊಡಬೇಕೆಂದು ಇನ್ನೊಮ್ಮೆಯೂ ವಿಶ್ವೇಶ್ವರಯ್ಯನವರು ಕ್ರಮವಾಗಿ ಶಾಮರಾಯರಿಗೆ ಪತ್ರಗಳನ್ನು ಬರೆದರು. ೧೯೧೬ ರಲ್ಲಿಯೇ ಸೆಪ್ಟೆಂಬರ್‌ನಲ್ಲಿ ಯಾವುದೋ ವಿಷಯ ಕುರಿತು ಬರೆಯುತ್ತಾ ಕೊನೆಗೆ "ಭಾವಚಿತ್ರಕ್ಕೆ ಸಂಬಂಧಿಸಿ ಹೇಳುವುದಾದರೆ ನನ್ನನ್ನು ಬಿಟ್ಟುಬಿಡಿ. ದೊಡ್ಡವರ ಜೊತೆಗೆ ನನ್ನನ್ನು ಸೇರಿಸುವುದು ನನಗಿಷ್ಟವಿಲ್ಲ. ಹೀಗೆ ಹೇಳಿದರೆ ನೀವು ನನ್ನನ್ನು ತಪ್ಪು ತಿಳಿಯಕೂಡದು" ಎಂದು ಕೇಳಿಕೊಂಡಿರುವುದು ಅವರ ಸೌಜನ್ಯವನ್ನು ಎತ್ತಿ ಹೇಳುತ್ತದೆ.

ತಮ್ಮ ಕಾಲದ ಎಷ್ಟೋ ಮಂದಿ ಅಧಿಕಾರಿಗಳಿಗೆ ವಿಶ್ವೇಶ್ವರಯ್ಯನವರು ಹೀಗೆಯೇ ಹಲವು ಖಾಸಗಿ ಪತ್ರಗಳನ್ನು ಬರೆದಿರಬೇಕು. ಇವನ್ನೆಲ್ಲ ಕೂಡಿಸಿ, ಪ್ರಕಟಿಸಿದರೆ ಸಚ್ಚಾರಿತ್ರ್ಯ ಕಾರ್ಯಶೀಲತೆಗಳಿಗೆ ಅವುಗಳಿಂದ ನಮಗೆ ಮಾರ್ಗದರ್ಶನ ದೊರೆಯುವುದು ನಿಶ್ಚಯ.

೫ ಪ್ರಶ್ನೆಗಳು

ಒಂದು ಸಂಸ್ಕೃತ ಸುಭಾಷಿತ ಹೀಗೆ ಹೇಳುತ್ತದೆ : "ರೂಪ, ಯೌವನ, ಆಯುಸ್ಸು, ಇಂದ್ರಿಯ ಗೋಚರವಾದ ಪದಾರ್ಥಗಳು, ಭೋಗೋಪಭೋಗಗಳು, ದೇಹ, ಶಕ್ತಿ ಸಾಮರ್ಥ್ಯ, ಇಷ್ಟ ಜನರ ಸಹವಾಸ, ರಾಜ್ಯ, ಸೌಭಾಗ್ಯ ಭಾಗ್ಯಾದಿಗಳು ನಶ್ವರವಾದವು ; ಬುದ್ಧಿಶಾಲಿಗಳಾದವರು ಈ ಅನಿತ್ಯತೆಯನ್ನು, ತಮ್ಮ ಒಳಗಣ್ಣು ತೆರೆದು ಚೆನ್ನಾಗಿ ವಿಚಾರ ಮಾಡಿ ತಿಳಿದುಕೊಳ್ಳಲಿ."

ಇದನ್ನು ಒಂದು ಕನ್ನಡ ಸುಭಾಷಿತ ಹೀಗೆ ಸಮರ್ಥಿಸುತ್ತದೆ : " ಮನುಷ್ಯರ ಯೌವನ, ಸಂಪತ್ತು, ಬದುಕು ಎಲ್ಲವೂ ನೀರ ಹನಿಯನ್ನು ಹೊತ್ತ ಹುಲ್ಲುಕಡ್ಡಿ, ಮೋಡ, ಸಾಯಂಕಾಲದ ಹೊಂಬಣ್ಣ, ಕನಸು, ಕಾಮನಬಿಲ್ಲು, ನೊರೆಗಳ ಬುರುಗು ಇವುಗಳ ಹಾಗೆಯೇ ; ಅವು ಹೆಚ್ಚು ಹೊತ್ತು ನಿಲ್ಲುವುದಿಲ್ಲ."

ಇಂಥ ಮಾತುಗಳು ನಮ್ಮ ಸಾಹಿತ್ಯ ರಾಶಿಯಲ್ಲಿ, ಬೇರೆ ಭಾಷೆಗಳ ಸಾಹಿತ್ಯ ರಾಶಿಯಲ್ಲಿ ಸಹ, ವೈರಾಗ್ಯವನ್ನು ಬೋಧಿಸುವ ಸಂದರ್ಭಗಳಲ್ಲೆಲ್ಲ ಮೇಲಿಂದ ಮೇಲೆ ಬರುತ್ತಲೇ ಇರುತ್ತವೆ. ಹೀಗಿರಬೇಕಾದರೆ, ಇಷ್ಟೊಂದು ನಗಣ್ಯವಾದ, ನಶ್ವರವಾದ

ಬದುಕಿನ ವಿಚಾರವಲ್ಲಿ ನಮಗೆ ಏಕೆ ಇಷ್ಟು ಆಸಕ್ತಿ ? ಏಕೆ ಇಷ್ಟೊಂದು ಶಕ್ತಿಯ ಹ್ರಾಸ ? ಬದುಕು ತೊಡಗುವ ಆರಂಭದಲ್ಲಿ ಹುಟ್ಟುವುದೇ ಒಂದು ಯಾತನೆ ; ಮುಪ್ಪು ರೋಗಗಳ ಅನುಭವ, ನಡುವೆ ಪ್ರಾಪ್ತವಾಗುವ ಹಿಂಸೆ ; ಕೊನೆಗಂತೂ ಮೃತ್ಯುಭೀತಿಯ ವಿಷಮ ದಾರುಣ ಸನ್ನಿವೇಶ ! ಹೀಗೆ ಹುಟ್ಟು ಸಾವುಗಳ ಸಾಗರದ ಎರಡು ದಂಡೆಗಳ ಮಧ್ಯೆ ಜೀವರಾಶಿ ತಳಮೇಲಾಗಿ ತೊಳಲುತ್ತ, ಅಳಲುತ್ತ ಸಿಕ್ಕಿ ಹಾಕಿಕೊಂಡಿವೆ ; ಚಕ್ರ ಸುತ್ತಿಬರುವಂತೆ ಮತ್ತೆ ಮತ್ತೆ ಹುಟ್ಟುತ್ತಲೂ ಸಾಯುತ್ತಲೂ ಇವೆ. ಜೀವರಾಶಿಯ ಒಂದೊಂದು ಜೀವ ಕಳಚಿ ಹಾಕಿದ ದೇಹಗಳಿಗೆ, ಮತ್ತೆ ಆಶ್ರಯಿಸಿದ ದೇಹಗಳಿಗೆ ಲೆಕ್ಕವೇ ಇಲ್ಲ ಎನ್ನುತ್ತಾರೆ ವೇದಾಂತಿಗಳು, ಇತರರು. ' ಈ ಚಕ್ರಭ್ರಮಣವನ್ನು ಇನ್ನು ಸಾಕುಮಾಡಿಕೊಳ್ಳಬೇಕು, ಮತ್ತೆ ಹುಟ್ಟಿ ಬರದಂತೆ ಬಿಡುಗಡೆಯನ್ನು ಪಡೆಯಬೇಕು; ಭಯ ಆಶಂಕೆ ಚಿಂತೆ ಕ್ಲೇಶ, ಕಾರ್ಪಣ್ಯ ದೈನ್ಯ ಹಿಂಸೆ ಅಪಮಾನ ಯಾತನೆ ಮೊದಲಾದುವನ್ನು ಪೂರ್ತಿಯಾಗಿ ತೊಲಗಿಸಿ ಬಿಡಬೇಕು' ; ಇದು ಜೀವರ ಆಸೆ. ಜೀವರ ಈ ಮೊರೆಯನ್ನು ಪ್ರಾರ್ಥನೆಯನ್ನು ವೇದಾಂತಿಗಳೂ ಬಲ್ಲರು, ಇತರರೂ ಬಲ್ಲರು.

ಈ ಮೊರೆಯನ್ನು ಲಾಲಿಸಬಹುದು, ಆದರೆ ಈಡೇರಿಸುವುದು ಹೇಗೆ ? ಎಲ್ಲ ದೇಶಗಳಲ್ಲೂ ಎಲ್ಲ ಭಾಷೆಗಳಲ್ಲೂ ಋಷಿಮುನಿಗಳು, ಸಾಧುಸಂತರು, ಸಾಧಕರು ಸಾಹಿತ್ಯಕಾರರು ಎಂದಿನಿಂದಲೂ ತಮತಮಗೆ ತೋರಿದ ದಾರಿಗಳಲ್ಲಿ ಜೀವನರಹಸ್ಯವನ್ನು ಭೇದಿಸುವ ಪ್ರಯತ್ನಗಳನ್ನು ಮಾಡುತ್ತಲೇ ಇದ್ದಾರೆ; ತಮಗೆ ಸರಿಯೆಂದು ಕಂಡ ಉಪಾಯಗಳನ್ನು ಉಪದೇಶಿಸುತ್ತಲೇ ಇದ್ದಾರೆ. ಈ ಜನರ ಲೆಕ್ಕವನ್ನು ಇಟ್ಟವರಿಲ್ಲ, ನಿಜ. ಆದರೆ ಕೆಲವರ ಚರಿತ್ರೆಗಳುಂಟು, ಆದರ ಸಾಧನೆ ಉಪದೇಶಗಳ ದಾಖಲೆಗಳೂ ಉಂಟು. ಇವನ್ನು ಓದುವವರು ಓದುತ್ತಾರೆ; ಕೇಳುವವರು ಕೇಳುತ್ತಾರೆ, ಕಲಿಸುವವರೂ ಕಲಿಸುತ್ತಾರೆ. ಹಾಗೆ ನಡೆಯಲೂ ನುಡಿಯಲೂ ಪ್ರಯತ್ನ ಮಾಡುವ ಜನರೂ ಇಲ್ಲದೆ ಇಲ್ಲ. ಜನರೇನು ? ಅಂಥ ಬಹುಸಂಖ್ಯೆಯ ಜನರನ್ನು ಸಜ್ಜುಗೊಳಿಸುವ ಸಂಘಗಳೂ ಸಂಸ್ಥೆಗಳೂ ಮಠಮಂದಿರಗಳೂ ಬಹುಸಂಖ್ಯೆಯಲ್ಲಿಯೇ ದೇಶದಾದ್ಯಂತವೂ ವಿಶ್ವದಾದ್ಯಂತವೂ ಇವೆ. ಅಳಿದುಹೋದವರ, ಹೋದವುಗಳ ಬೆನ್ನಿಗೇ, ಹುಟ್ಟಲಿರುವವರ, ಇರುವವುಗಳ ಸಂತೆ ನೆರೆದೇ ಇದೆ !

ಸರಿಯೇ; ಅನಾದಿಯಾಗಿ ಜೀವರಾಶಿಯನ್ನು ಕಾಡುತ್ತಿರುವ ಹುಟ್ಟುಸಾವುಗಳನ್ನು ಗೆದ್ದುದಾಯಿತೇ ? ರೋಗ ಮುಪ್ಪುಗಳಿಂದ ಪರಿಹಾರ ಸಿಕ್ಕಿತೇ ? ಭಯ ಆಶಂಕೆಗಳು ಇಲ್ಲವಾದುವೇ ? ಈ ಪ್ರಶ್ನೆಗಳಿಗೆ ಉತ್ತರ ಬರಿಯ ನಿಟ್ಟುಸಿರೇ, ಇಲ್ಲ ನಿರ್ಲಿಪ್ತತೆಯೇ ಎರಡೂ ಇಲ್ಲವಾದರೆ, ಬಂದುದನ್ನು ಅನುಭವಿಸುವ ನಿಸ್ಸಹಾಯಕತೆಯೇ ? ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನಗಳೆಲ್ಲ ಪ್ರಾಯಃ ಅನಂತವಾದ ಕಾಲ ದೇಶಗಳ ಪಾತ್ರದಲ್ಲಿ ನೀರಹನಿಯನ್ನು ಹೊತ್ತ ಹುಲ್ಲುಕಡ್ಡಿ, ಮೋಡ, ಸಾಯಂಕಾಲದ ಹೊಂಬಣ್ಣ ಮುಂತಾದುವುಗಳ ಹಾಗೆಯೇ ನಿರರ್ಥಕ, ಕ್ಷಣಿಕ ಇದ್ದರೂ ಇರಬಹುದು.

ಒಗೆಹರಿಯದ ಪ್ರಶ್ನೆಗಳ ಹುತ್ತವನ್ನು ಹೀಗೆ ಎಬ್ಬಿಸುತ್ತ, ಹೊತ್ತು ಕಳೆಯುವುದಕ್ಕಿಂತ ಜೀವರು ತಮ್ಮ ಪರಿಮಿತಿಯಲ್ಲಿಯೇ ಸಾರ್ಥಕ, ಶಾಶ್ವತ ಆಗುವ ಉಪಾಯವನ್ನು ಕಂಡುಕೊಳ್ಳುವುದು ಲೇಸಲ್ಲವೇ ? ಆ ಉಪಾಯವನ್ನು ಬಲ್ಲವರೆಂಬವರು ಹೇಳಿಯೇ ಇರಬೇಕು. ಅದನ್ನು ನಾವು ಶೋಧಿಸಿ, ತಿಳಿಯಬೇಕು. ವಿವೇಕವೆಂಬ ಸಾಣೆಯಲ್ಲಿ ಶೋಧಿಸಿ ತೆಗೆದುಕೊಳ್ಳಬೇಕು ಅಷ್ಟೆ !

ಆತ್ಮ, ದೇವರು, ಅಧ್ಯಾತ್ಮ, ಮೋಕ್ಷ ಎನ್ನುವವು ಒಣಕಲು ತತ್ತ್ವಚಿಂತನೆಯ ವಿಷಯಗಳಾಗುವ ಅಪಾಯ ತಪ್ಪಬೇಕು ; ಸಂಪ್ರದಾಯದ ಕಟ್ಟಳೆಗಳಾಗುವುದೂ ಹೋಗಬೇಕು. ಮಾನವೀಯತೆಯೆಂಬ ಪರಮಮೌಲ್ಯವನ್ನು ಪೋಷಿಸುವ ಜೀವ ಧಾತುಗಳಾಗಬೇಕು ಅವು. ಲೋಕಹಿತದೃಷ್ಟಿಯ ವ್ಯಾವಹಾರಿಕ ಅರ್ಥ ಆಶಯಗಳನ್ನು ಅವು ಪಡೆದುಕೊಳ್ಳಬೇಕು. ಆಗ ವ್ಯಕ್ತಿವ್ಯಕ್ತಿಗಳ ನಡುವೆ ವಿರೋಧ ವೈಪರೀತ್ಯಗಳು ಅಳಿದು, ಪ್ರಕೃತಿಯಲ್ಲಿ ಒಂದು ಸ್ವಾಭಾವಿಕ ಸ್ಥಿತಿ ನೆಲೆಗೊಳ್ಳುವುದು ಸಾಧ್ಯವಾಗಬಹುದು. ಆಗ ಹಸನಾದ ಮಣ್ಣಿನಲ್ಲಿ ಮೊಳೆತು, ದೊರವಾದ ಗಿಡವಾಗಿ ಹಬ್ಬಿ, ಹೂಹಣ್ಣುಗಳನ್ನು ಕಾಲಕಾಲಕ್ಕೆ ಕೊಟ್ಟು, ಕಾಲಸಂದ ಮೇಲೆ ಹೂವೂ ಹಣ್ಣೂ ಬೇರೂ ರೆಂಬೆಯೂ ಮಣ್ಣಿನೊಳಗೇ ಸೇರಿಹೋಗುವ ಸಸ್ಯದ ಸ್ಥಿತಿಯ ಹಾಗೆ ಆ ಸ್ವಾಭಾವಿಕ ಸ್ಥಿತಿಯೇ ಜೀವರ ಸಹಜವ್ಯಾಪಾರವಾದೀತು !

೬ ವ್ಯವಸ್ಥೆ

ಪ್ರಪಂಚದ ನಾನಾ ದೇಶಭಾಗಗಳಲ್ಲಿ, ಬೇರೆಬೇರೆ ಕಾಲಗಳಲ್ಲಿ, ದೊಡ್ಡ ದೊಡ್ಡ ನಾಗರಿಕತೆಗಳು ಹುಟ್ಟಿವೆ ; ಬೆಳೆಯುತ್ತ ಹೋಗಿ, ವೈಭವದ ಶಿಖರಗಳನ್ನು ಮುಟ್ಟಿವೆ ; ಕೊನೆಗೊಮ್ಮೆ ಅಳಿದು ನಾಮಾವಶೇಷವಾಗಿವೆ. ಸಂಸ್ಕೃತಿಚರಿತ್ರಕಾರರು ಈ ನಾಗರಿಕತೆಗಳ ಹುಟ್ಟು ನೆಲೆಗಳನ್ನು ಗುರುತಿಸಿದ್ದಾರೆ ; ಬೆಳವಣಿಗೆಯ ಮಜಲುಗಳನ್ನು ವರ್ಣಿಸಿದ್ದಾರೆ; ಅವನತಿಯ ಕಾರಣಗಳನ್ನೂ ಪಟ್ಟಿಮಾಡಿದ್ದಾರೆ.

ಒಂದು ಸಂಸ್ಕೃತಿವಂತ ಸಮಾಜ ಯಾವುದೋ ಒಂದು ವ್ಯವಸ್ಥೆಯ ಭಾಗವಾಗಿ ಹುಟ್ಟುತ್ತದೆ ; ಆ ವ್ಯವಸ್ಥೆಯ ಉತ್ಕರ್ಷವನ್ನು ಹಿಡಿದು ಬೆಳೆಯುತ್ತದೆ ; ದೌರ್ಬಲ್ಯಗಳೂ ದೋಷಗಳೂ ಕಾರಣವಾಗಿ ಅಳಿಯುತ್ತದೆ, ಇಲ್ಲವೆ ಅತ್ಯಂತ ಮ್ಲಾನವಾದ ಸ್ಥಿತಿಯಲ್ಲಿ ಬದುಕಿರುತ್ತದೆ. ನಾಗರಿಕತೆಯ ಇತಿಹಾಸ ಬರೆವವರು ಊಹೆಯಿಂದ ಎಷ್ಟನ್ನೋ ಪುನಸ್ಸೃಜಿಸುತ್ತಾರೆ ; ಸಾಕ್ಷ್ಯ ಸಾಮಗ್ರಿಗಳ ಬಲದಿಂದ ಎಷ್ಟನ್ನೋ ಯಥಾರೀತಿ ವರದಿ ಮಾಡುತ್ತಾರೆ. ಆದರೆ ಅಳಿವಿಗೆ ಕಾರಣಗಳನ್ನು ಹೇಳುವಾಗ, ಹೀಗೆ ಹೀಗಿದ್ದರೆ ಹೀಗಿರಬಹುದಾಗಿತ್ತು, ಅದು ತಪ್ಪಿದ್ದರಿಂದ ಹೀಗಾಗಿ ಹೋಯಿತು ಎನ್ನುವಂತೆ ಊಹೆಯ, ಉಪಚಾರದ ಕಾರಣಗಳನ್ನು ಕೊಟ್ಟು ತೃಪ್ತರಾಗುವುದೇ ಸಾಮಾನ್ಯ ಎಂದು ತೋರುತ್ತದೆ.

ಒಂದು ಸಂಸ್ಕೃತಿ ಅವನತಿ ಹೊಂದಲು ಅಂತರ್ಗತವಾದ ರೋಷದ್ವೇಷಗಳು ಕಾರಣವಾಗಬಹುದು ; ಅನ್ಯಾಕ್ರಮಣಗಳು ಕಾರಣವಾಗಬಹುದು; ಪ್ರಕೃತಿಯ ವಿಕೋಪಗಳು ಕಾರಣವಾಗಬಹುದು. ಅಲ್ಲದೆ ಅನೂಹ್ಯವಾದ ಇನ್ನೂ ಎಷ್ಟೋ ಕಾರಣಗಳೂ ಇರಬಹುದು. ಸಕಲ ವೈಭವವೂ ಕೊನೆಗೊಮ್ಮೆ ಸಮಾಧಿಯ ಅಂತರಾಳವನ್ನು ಸೇರಿಹೋಗುವುದು ಪ್ರಕೃತಿಧರ್ಮ; ಚೆನ್ನಾಗಿ ಬೆಳಗುತ್ತಿದ್ದ ದೀಪವಿಶೇಷವೂ ಕೊನೆಗೊಮ್ಮೆ ಆರಿ, ಸುತ್ತ ಕತ್ತಲೆ ಕವಿಯುತ್ತದೆ. ಭರತಖಂಡದ ಸಂಸ್ಕೃತಿಯ ಇತಿಹಾಸದಲ್ಲಿಯೂ ಹೀಗೆಯೇ ಏರಿಳಿತಗಳಾಗಿರುವುದನ್ನು ಅಭ್ಯಾಸಿಗಳು ಬಲ್ಲರು.

ಈಗಿನ ಸಾಮಾಜಿಕರು ಈ ಏರಿಳಿತಗಳನ್ನು ಕುರಿತಾಗ ಸಾಮಾನ್ಯವಾಗಿ ಬಳಸುವ ಒಂದು ವಾಗ್ರೂಢಿ ಎಂದರೆ, 'ವ್ಯವಸ್ಥೆಯ ವಿರುದ್ಧ ಸಿಡಿದೇಳುವುದು' ಅಥವಾ 'ರಾಜಿ ಮಾಡಿಕೊಳ್ಳದೆ ಪ್ರತಿಭಟಿಸುವುದು'. ಸಾಮಾನ್ಯವಾಗಿ ಇಂದು ಇದನ್ನು ಧರ್ಮಸಂಬಂಧವಾದ ವೈಪರೀತ್ಯಗಳಲ್ಲಿ ಬಳಸಲಾಗುತ್ತಿದೆ. ಜಾತಿಪದ್ಧತಿ ಧರ್ಮದ, ಧರ್ಮಸಂಸ್ಕೃತಿಯ ಭಾಗ-ಎನ್ನುವುದು ನಿಜವಾದರೆ, ಭರತಖಂಡದಲ್ಲಿ ಜೈನ ಬೌದ್ಧ ವೀರಶೈವ ಇತ್ಯಾದಿ ಧರ್ಮಗಳು ಉದಯಿಸಿದ್ದು ಅಂದಂದಿನ ವ್ಯವಸ್ಥೆಯ ವಿರುದ್ಧ ಸಿಡಿದೆದ್ದುದರ ಫಲವಾಗಿಯೇ ಎನ್ನಬೇಕು. ಆಯಾ ಕಾಲದ ಧರ್ಮಾಂತರದ ಯತ್ನಗಳು ಯಶಸ್ವಿಯಾದುದು ಯಾವ ಕಾರಣದಿಂದ ? ಒಳಗಿನ ಅತೃಪ್ತಿ ಕಾರಣವಿರಬಹುದು; ಹೊರಗಿನ ಆಕ್ರಮಣಗಳೂ ಕಾರಣವಿರಬಹುದು, ಎರಡಕ್ಕೂ ಮೂಲವಾದ ಅಜ್ಞಾನವೇ ಕಾರಣವಾಗಿರಲೂಬಹುದು.

ಸ್ಮೃತಿಗಳಲ್ಲಿ ಹೇಳುವ ಹಾಗೆ ಅಶ್ವಮೇಧ ಗೋಮೇಧಗಳೆಂಬ ಪ್ರಾಣಿಯಜ್ಞಗಳು, ಮಾಂಸವನ್ನಿಟ್ಟುಮಾಡುವ ಪಿತೃಕಾರ್ಯಗಳು, ಮೈದುನನಿಂದ ಮಗನನ್ನು ಪಡೆಯುವ ಸಂತಾನ ಪ್ರಾಪ್ತಿ ಪದ್ಧತಿ, ಇವೆಲ್ಲ ನಮ್ಮ ಸಂಸ್ಕೃತಿಯ ಆಚರಣೆಯಲ್ಲಿ ಎಂದೋ ಲುಪ್ತವಾಗಿ ಹೋಗಿವೆ ; ಬಹುಪತಿತ್ವ ಬಹುಪತ್ನೀತ್ವಗಳೂ ಹೋಗಿವೆ; ಆಶ್ರಮಪದ್ಧತಿಯ ಮೆಟ್ಟಿಲುಗಳು ಈಗ ಬಿದ್ದುಹೋಗಿವೆ. ಇವನ್ನೆಲ್ಲ ಪುನರುಜ್ಜೀವಿಸಬೇಕೆಂದು ಯಾರೂ ಇಂದು ಪ್ರಯತ್ನಿಸುವುದಿಲ್ಲ ; ಅನ್ಯಾಯವಾಗಿ ಲುಪ್ತವಾಗಿ ಹೋಗಿವೆಯಲ್ಲ ಎಂದು ಯಾರೂ ಸಂಕಟಪಡುವುದಿಲ್ಲ. ಸಂಪ್ರದಾಯಸ್ಥರೆಂಬವರೂ ಈ ಬದಲಾವಣೆಯನ್ನು ಮೆಚ್ಚಿಕೊಳ್ಳುತ್ತಾರೆ, ಸಂತೋಷಿಸುತ್ತಾರೆ.

ಇವೆಲ್ಲ ಗತಶತಮಾನಗಳ ಮಾತಾಯಿತು. ಮುಂದಿನ ಸರದಿಯಲ್ಲಿ ಅಜಮೇಧ ಹೋದದ್ದು ಇರಲಿ, ತಾಮಸಪೂಜಾಪದ್ಧತಿಗಳೆಲ್ಲ ಹಿಂಜರಿದು ಸಾತ್ವಿಕ ಪೂಜಾವಿಧಾನಗಳು ವಿಜೃಂಭಿಸಿದುದನ್ನು ನಾವು ತಿಳಿದಿದ್ದೇವೆ. ನಿಯೋಗ ಪದ್ಧತಿಯಿರಲಿ, ರಕ್ತಸಂಬಂಧದ ಮದುವೆಗಳೇ ಈಗ ಪ್ರಶ್ನಾರ್ಹವಾಗಿವೆ. ಬಾಲ್ಯ ವಿವಾಹದ ಕಾಲ ಉರುಳಿಹೋಗಿ, ವಯಸ್ಕ ವಿವಾಹಗಳೂ ಪ್ರೇಮವಿವಾಹಗಳೂ ಈಗ ಸಾಮಾನ್ಯವಾಗಿವೆ. ವಿಧವೆಯರ ವಿಕೃತ ಸಂಸ್ಕಾರಗಳು ತೊಲಗಿ ಅವರ ಪುನರ್ವಿವಾಹದ ಸಾಧ್ಯತೆಗಳು ಹೆಚ್ಚುತ್ತಿವೆ. ಜಾತಿಪದ್ಧತಿಯ ಬೇರುಗಳೆಲ್ಲ ಸಡಿಲುತ್ತಿವೆ. ಇವುಗಳ ಜೊತೆಗೇ, ಇನ್ನೆಷ್ಟೋ

ನಾಗರಿಕ ಸುಧಾರಣೆಗಳು ರೂಢಿಗೆ ಬರುತ್ತಿದ್ದು, ವ್ಯಕ್ತಿಗೆ ಮುಕ್ತವಾತಾವರಣದ ಗಾಳಿ ಈಗ ಸಿಗುತ್ತಿದೆ. ಇವನ್ನೂ ಸಂಪ್ರದಾಯಸ್ಥರು ಪುರಸ್ಕರಿಸಿದ್ದಾರೆ. ಪುರಸ್ಕರಿಸದವರು ತಾಟಸ್ಥ್ಯ ವಹಿಸಿದ್ದಾರೆ. ಅದೂ ಪುರಸ್ಕಾರದ ಹಸಿರುದೀಪವೇ. ರಭಸಗತಿಯಲ್ಲಿ ತುಂಬಿ ಹರಿಯುವ ಹೊಳೆಯ ದಿಕ್ಕು ಅವರಿಗೆ ಕಾಣದ್ದೇನಲ್ಲ. ಅದರಲ್ಲಿ ಈಜುವವರನ್ನು ಕಂಡು, ಅವರಿಗೆ ಅಚ್ಚರಿಯಿದೆ, ಮೆಚ್ಚುಗೆಯಿದೆ !

ಈ ಬೆಳವಣಿಗೆಗಳನ್ನು ಗಮನಿಸಿದಾಗ, ಇವೆಲ್ಲ ವ್ಯವಸ್ಥೆ ವಿರುದ್ಧ ರೊಚ್ಚಿಗೆದ್ದುದರ ಫಲವೇ ಎನ್ನುವುದು ಎಷ್ಟು ನಿಜ ? – ಎಂಬ ಪ್ರಶ್ನೆ ಹುಟ್ಟುತ್ತದೆ. ಒಂದು ಸಂಸ್ಕೃತಿವಂತ ಸಮಾಜ ತನ್ನ ಅಂತರ್ಗತ ಲೋಪದೋಷಗಳನ್ನು ತನ್ನ ಅನುಭವದಿಂದಲೇ, ತನ್ನೊಳಗಿನ ಘರ್ಷಣೆಯಿಂದಲೇ ಗುರುತಿಸಿಕೊಳ್ಳುವುದು ಸಾಧ್ಯ. ಆ ಲೋಪದೋಷಗಳನ್ನು ಸರಿಪಡಿಸಿಕೊಂಡು ಪುನರ್ವ್ಯವಸ್ಥೆಯನ್ನು ರೂಪಿಸಿಕೊಳ್ಳುವ, ರೂಪಿಸಿಕೊಂಡುದನ್ನು ಮತ್ತೆ ಒಡೆಯುವ ಶಕ್ತಿಯೂ ಅದಕ್ಕಿದೆ. ಸಿಡಿಮಿಡಿಗೊಂಡು, ಜಾತಿ ಮತ್ತು ವರ್ಗ ದ್ವೇಷಗಳನ್ನು ಪ್ರಚೋದಿಸಿ, ಹಿಂಸೆ ಪ್ರತಿಹಿಂಸೆಗಳಿಗೆ ಎಡೆಮಾಡಿಕೊಡುವುದರಿಂದ ಪ್ರಯೋಜನವಿಲ್ಲ: ಅದು ತನ್ನನ್ನು ತಾನೇ ಇರಿದುಕೊಂಡಂತೆ. ಸಹಾನುಭೂತಿಯ ಸಾತ್ವಿಕ ವಿಧಾನಗಳ ಪ್ರಕೃತಿ ಚಿಕಿತ್ಸೆಯಿಂದ ರೋಗಪರಿಹಾರವನ್ನು ಸಾಧಿಸಬೇಕು. ಅದೇ ನಯ.

ಸಂಸ್ಕೃತಿವಂತ ಸಮಾಜ ತನ್ನ ನೆಲದಲ್ಲಿ ತಾನೇ ರೂಪಿಸಿಕೊಂಡ ಆಚಾರವಿಚಾರಗಳೆಂಬ ಗೊಬ್ಬರದ ಸಾರದಲ್ಲಿ, ಬೀಜ ವೃಕ್ಷವಾದಂತೆ, ಚಿಗಿತು ಬೆಳೆಯುತ್ತವೆ; ಕಾಲಕಾಲಕ್ಕೆ ತಾನು ಲೋಕಕ್ಕೆ ಸಲ್ಲಿಸಬಹುದಾದ್ದನ್ನು ಸಲ್ಲಿಸುತ್ತದೆ ; ಅನಂತರ ಅದು ನಷ್ಟವಾಗುವ ಹಾಗೆ ಕಂಡರೂ, ಹೊಸ ರೂಪದಲ್ಲಿ ಮತ್ತೆ ನೆಲದ ಒಡಲಿಂದ ಹುಟ್ಟಿ ಮೇಲೇಳುತ್ತದೆಯಲ್ಲದೆ ನಷ್ಟವಾಗಿರುವುದಿಲ್ಲ. ಇದು ಕಲಿತಪಾಠವೇ ಅಲ್ಲವೇ, ಮತ್ತೇಕೆ ಹುಯಿಲು ?

೭ ಭಾಷೆಯ ರಕ್ಷಣೆ

ಭಾಷೆಯ ಬಗೆಗೆ ನಮ್ಮ ತಿಳಿವಳಿಕೆಗಳೂ ಧೋರಣೆಗಳೂ ಬದಲಾಗುತ್ತಿರುವ ಈ ಕಾಲದಲ್ಲಿ, ಭಾಷೆಯ ಬಳಕೆಯ ವಿಷಯದಲ್ಲಿ ನಾವು ಅನುಸರಿಸುವ ರೀತಿನೀತಿಗಳನ್ನೂ ಗುಣದೋಷಗಳನ್ನೂ, ಫಲ ಪ್ರಯೋಜನಗಳನ್ನೂ ಕುರಿತು ವಿಮರ್ಶೆಮಾಡುವುದು ಅವಶ್ಯವಿದೆ. ಹಾಗೆ ಒಂದು ವೇಳೆ ವಿಮರ್ಶೆ ಮಾಡಿದ್ದಾದರೆ, ಆ ವಿಮರ್ಶೆ ನಮ್ಮನ್ನು ತುಂಬ ಗೊಂದಲಕ್ಕೆ ಒಳಗುಮಾಡುವಂತೆಯೂ ತೋರುತ್ತದೆ.

ನಮ್ಮ ಭಾಷೆಯ ಚರಿತ್ರೆಯಲ್ಲಿ ಭಾಷಾರೂಪಗಳ ಸ್ವಚ್ಛತೆಗಾಗಿಯೂ ಮರ್ಯಾದೆಗಾಗಿಯೂ ಹೆಣಗಾಡಿದ, ಹೋರಾಡಿದ ಹಲವು ನಿದರ್ಶನಗಳಿವೆ. ಈಚಿನ ವರ್ಷಗಳ ಚರಿತ್ರೆಯನ್ನೇ ಗಮನಿಸಿದರೆ, ಈ ಸಂಬಂಧವಾಗಿ ಕೆಲವು ಅಧ್ಯಾಯಗಳನ್ನೇ ಬರೆಯುವ ಮಟ್ಟಿಗೆ ಚಿಂತನೆಗಳೂ ಚರ್ಚೆಗಳೂ ನಡೆದಿರುವುದು ಕಂಡುಬರುತ್ತದೆ. ಹಾಗೆ ವಿಚಾರ

ಮಾಡಿದವರಲ್ಲಿ ಎಚ್. ವಿ. ನಂಜುಂಡಯ್ಯ, ಎಂ. ಶಾಮರಾವ್, ಬಿ. ಎಂ. ಶ್ರೀಕಂಠಯ್ಯ, ಡೆಪ್ಯುಟಿ ಚೆನ್ನಬಸಪ್ಪ ಮುಂತಾದವರು ಮುಖ್ಯರು. ಇವರು ತಮ್ಮ ಕಾಲದ ಸಾಮಾನ್ಯ ಜನರನ್ನು, ಅಧ್ಯಾಪಕರನ್ನು, ದೇಶೀಯರೂ ವಿದೇಶೀಯರೂ ಆದ ಪಂಡಿತರನ್ನು ಆಗಾಗ ಭೇಟಿಮಾಡಿ, ಕಾಗದ ಪತ್ರ ಬರೆದು, ನಡೆಸಿದ ವಿಚಾರವಿನಿಮಯದ ದೊಡ್ಡ ಸಾಹಿತ್ಯವೇ ಈಗ ಸಿದ್ಧವಾಗಿದೆ. ಈಗ ಇಂಥ ಚಿಂತನೆಗಳೂ ಚರ್ಚೆಗಳೂ ವಿಚಾರವಿನಿಮಯಗಳೂ ಏಕೆ ನಡೆಯುತ್ತಿಲ್ಲ? ಭಾಷಾ ರೂಪಗಳು ಈಗ ಸ್ವಚ್ಛವಾಗಿವೆ, ಭಾಷಾಮರ್ಯಾದೆಯೆಂಬುದು ಈಗ ವ್ಯವಸ್ಥೆಗೊಂಡಿದೆ – ಎಂದು ಇದರ ಅರ್ಥವೇ ? ಅಥವಾ ಆ ಸ್ವಚ್ಛತೆ, ಮರ್ಯಾದೆ ಎಂಬುವು ಈ ಕಾಲಕ್ಕೆ ಅಗತ್ಯವಿಲ್ಲ ಎಂದು ತಿಳಿಯೋಣವೇ ?

ಭಾಷೆ ಮಾನವ ಮನಸ್ಸಿನ ಭಾವನೆಗಳಿಗೆ ನಿರ್ದಿಷ್ಟ ರೂಪವನ್ನು ಕೊಡುವ ಒಂದು ಅಪೂರ್ವವಾದ ಸಾಧನ. ಆ ಸಾಧನವನ್ನು ನಾವು ಎಷ್ಟು ಸಮರ್ಥವಾಗಿ ಬಳಸಿದರೆ, ಅಷ್ಟು ಚೆನ್ನಾಗಿ ನಮ್ಮ ಭಾವನೆಗಳು ಮಾತಿನ ರೂಪ ತಳೆಯುತ್ತವೆ. ಪ್ರಕಟವಾಗುವ ಭಾವನೆಗಳು ವ್ಯಕ್ತಿಯ ಸಂಸ್ಕಾರದ ಪ್ರತೀಕವೆಂಬುದು ನಿಜ ; ಆ ಸಂಸ್ಕಾರವನ್ನು ರೂಪಿಸುವುದರಲ್ಲಿ ಸಂಗತಿಗಳ ಹಾಗೂ ವಿದ್ಯಮಾನಗಳ ಪಾತ್ರ ಬಹುವಾಗಿ ಇದೆಯೆನ್ನುವುದೂ ನಿಜ. ಆ ಸಂಗತಿಗಳೂ ವಿದ್ಯಮಾನಗಳೂ ವಿದ್ಯೆ ವ್ಯಾಸಂಗಗಳ ಮೂಲಕ ವಿಶದವಾಗುವಲ್ಲಿ ಭಾಷೆಯ ಪಾತ್ರ ಮಿಗಿಲಾದುದು ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಒಳ್ಳೆಯ ಭಾಷೆ ಒಳ್ಳೆಯ ಸಂಸ್ಕೃತಿಯ ಲಕ್ಷಣ ಹೇಗೋ, ಒಳ್ಳೆಯ ಸಂಸ್ಕೃತಿ ಒಳ್ಳೆಯ ಭಾಷೆಯ ಫಲ ಎನ್ನುವುದೂ ಹಾಗೆಯೇ.

ಆಡುವ ಮಾತಿನ ಅರ್ಥ ಆಶಯಗಳಿಗೆ, ಮಾತಿನ ರೂಪ ಶುದ್ಧಿಯಿಂದಾಗಿ ಒಂದು ಬಗೆಯ ಸ್ಫಟಿಕ ಸ್ವಚ್ಛತೆ ಬರುತ್ತದೆ ; ವ್ಯಾಕರಣದ ಕಟ್ಟುಪಾಡುಗಳಿಂದಾಗಿ ಯಾವುದೇ ರೀತಿಯ ಗೊಂದಲವಿರದ ಸ್ಪಷ್ಟತೆಯಿರುತ್ತದೆ; ಅದೇ ಭಾಷಾ ಮರ್ಯಾದೆ. ತೋರಿದಂತೆ ಕುಣಿದರೆ ಹೇಗೆ ಅದು ನಾಟ್ಯವಾಗದೋ, ಆಡಿದ ಮಾತೆಲ್ಲ ಹಾಗೆಯೆ ಮಾತು ಎನ್ನಿಸದು. ಮಾತನ್ನು ಸರಸ್ವತಿ ಎಂದು ಹೇಳಿ ಮರ್ಯಾದಿಸಿದವರುಂಟು; ಆ ಸರಸ್ವತಿಯನ್ನು ಸರಿಯಾಗಿ ಆದರಿಸದೆ ಕೆಲವರು ಆಕೆಯನ್ನು ಕೊರಳುತಿರುಚಿ ಹಿಂಸಿಸುವರಲ್ಲಾ ಎಂದು ನೊಂದುಕೊಂಡವರೂ ಉಂಟು.

ಕಟ್ಟುಪಾಡುಗಳನ್ನು ಮೀರಿ ಭಾಷೆಯನ್ನು ನಾವು ಬಳಸಿದರೆ, ಅದು ಸರಸ್ವತಿಗೆ ದ್ರೋಹ ಬಗೆದಂತೆ ಎಂಬ ಭಾವನೆ ನಮ್ಮಲ್ಲಿ ಬಲಗೊಂಡರೆ, ಭಾಷೆಯ ಬಳಕೆಯಲ್ಲಿ ಜಾರುವ ಸಂದರ್ಭಗಳು ಎಷ್ಟೋ ಮಟ್ಟಿಗೆ ತಪ್ಪುತ್ತವೆ; ಆಡಿದ ಮಾತುಗಳು ತಪ್ಪದೆ ಗುರಿಮುಟ್ಟುತ್ತವೆ. ಆಗ ಆ ಸ್ಫಟಿಕದ ಶಲಾಕೆಯಲ್ಲಿ ನಮ್ಮ ಮನಸ್ಸಿನ ಮುಖವನ್ನು ನಾವು ನೋಡಿಕೊಳ್ಳಬಹುದು ; ಆ ಮುತ್ತಿನ ಹಾರವನ್ನು ಚೆಲುವಾಗಿ ಕೊರಳಲ್ಲಿ ಧರಿಸಿ ನಲಿಯಬಹುದು. ಶಲಾಕೆಯನ್ನು ಒರಟಾಗಿ ಬಗ್ಗಿಸಿದರೆ, ಅದು ಮುರಿದು ಹೋಗು

ತ್ತದೆ ; ಹಾರವನ್ನು ಎಚ್ಚರದಪ್ಪಿ ನೆಲಕ್ಕೆ ಕುಕ್ಕಿದರೆ, ಮುತ್ತುಗಳು ಸಿಡಿದು ಹೋಗುತ್ತವೆ.

ಭಾಷೆ ಒಂದು ದೈವದತ್ತವಾದ ಸಾಧನವಾಗಿದ್ದು, ಅದನ್ನು ಗೌರವಬುದ್ಧಿಯಿಂದ ಬಳಸಿದರೆ ಅದು ಬೇಡಿದುದನ್ನು ಪೂರೈಸುವ ವರವಾಗಿ ಪರಿಣಮಿಸುತ್ತದೆ. ಆ ಸಾಧನವನ್ನು ಉಚಿತರೀತಿಯಲ್ಲಿ ಬಳಸಲು ಅವಧಾನ ಅಭ್ಯಾಸಗಳ ತಪಸ್ಸು ಮಾಡಬೇಕು. ತಪಸ್ಸಿನಿಂದ ಕಳೆ ಕೈಗೂಡುತ್ತದೆ ; ಮಾತಿಗೆ ಮಂತ್ರಶಕ್ತಿ ಬರುತ್ತದೆ.

ಭಾಷೆಯಲ್ಲಾಗುವ ಸುಧಾರಣೆಗಳು ಸಹಜವಾಗಿ, ಸಾವಕಾಶವಾಗಿ ಆಗಬೇಕು. ಒತ್ತಾಯದಿಂದ ಮಿದಿದು ಹಣ್ಣು ಮಾಡಿದ ಹಾಗೆ, ದುಡುಕಿ ಮಾಡಿದ ಸುಧಾರಣೆಗಳಿಂದ ಭಾಷೆ ಹಸಗೆಡುತ್ತದೆ, ಗೊಂದಲ ಹುಟ್ಟುತ್ತದೆ. ಮಹಾಪ್ರಾಣಗಳನ್ನು ಅಲ್ಪಪ್ರಾಣಗೊಳಿಸುವ, ಅನ್ಯದೇಶಗಳನ್ನೂ ಅಪಭ್ರಂಶಗಳನ್ನೂ ಮೀತಿಮೀರಿ ತುಂಬುವ, ಕ್ರಿಯಾಪದವಿಲ್ಲದೆ ವಾಕ್ಯವನ್ನು ಕೂಡಿಸುವ, ಇನ್ನೂ ಆ ಬಗೆಯ ಶೈಥಿಲ್ಯಗಳೂ ಸ್ಖಾಲಿತ್ಯಗಳೂ ಭಾಷೆಯ ಕಾಂತಿ ವರ್ಚಸ್ಸುಗಳನ್ನು ಕುಗ್ಗಿಸುವುದು ತಪ್ಪದು. ಇದನ್ನು ನಮ್ಮ ಭಾಷೆಯ ಬಳಕೆದಾರರೂ ಸುಧಾರಣಾವಾದಿಗಳೂ ತಿಳಿದಿರಬೇಕು. ಇಂಥವರನ್ನು ಉದ್ದೇಶಿಸಿಯೇ ಕೆಲವು ವರ್ಷಗಳ ಹಿಂದೆ *Round Table* ಎಂಬ ನ್ಯೂಯಾರ್ಕ್ ಪತ್ರಿಕೆಯೊಂದು ಎಚ್ಚರಿಕೆಯನ್ನು ನೀಡಿ ಅಪಾಯದ ಗಂಟೆ ಬಾರಿಸಿತು :

"The corrupter of a language stabs straight at the heart of his country. He commits a crime against every individual of the nation, for he throws a poison into a stream from which all must drink. He wrongs himself first, and afterwards every man and woman whose native speech he mars. It is the duty of every educated man to guard jealously the purity of his native tongue. He who hunts down and pillories a slang phrase, a vulgarism, a corruption of any kind, is a public benefactor. In the fulfilment of the sacred trust which rests on him as an educated man, he adds a stone to the bulwark of his nation's safety and greatness".

ಈ ಅಪಾಯದ ಗಂಟೆ ಇನ್ನೂ ಬಡಿಯುತ್ತಲೇ ಇದೆ ! ಭಾಷಾಯೋಧರು ತಮ್ಮ ತಮ್ಮ ಭಾಷೆಯ ಮೇಲಿನ ಆಕ್ರಮಣವನ್ನು ಸಮರ್ಥವಾಗಿ ಎದುರಿಸಲು, ಒಳಹೊರಗಿನ ಶತ್ರುಗಳ ಮೇಲೆ ಯುದ್ಧಕ್ಕೆ ಈಗಲೇ ಸಿದ್ಧರಾಗಬೇಕಾಗಿದೆ !

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

- ಮಾನವಿಕ ಕರ್ಣಾಟಕ
- ವಿಜ್ಞಾನ ಕರ್ಣಾಟಕ
- ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬